ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



**ರೈತರಿಗೆ ಮಣ್ಣಿನ ಫಲವತ್ತತೆ ತಿಳಿಯಲು ಸಹಾಯವಾಗುವಂತೆ ಸರ್ಕಾರ ಶೀಘ್ರದಲ್ಲೇ ಮೊಬೈಲ್ ಅಪ್ಲಿಕೇಶನ್ ಅನ್ನು ಬಿಡುಗಡೆಗೊಳಿಸಲಿದೆ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಮಂಗಳವಾರ ತಿಳಿಸಿದ್ದಾರೆ.**

01 ಜುಲೈ, 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 112 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಆರ್ಥಿಕ ಸಂಕಷ್ಟ ನಿವಾರಿಸುವುದೇ ಗ್ಯಾರಂಟಿ ಪರಿಷ್ಕರಣೆ » 2

ಪೋಷಕರು ಮಕ್ಕಳಿಗೆ ನೀತಿ, ನಿಯಮ ಕಲಿಸಬೇಕು » 3



ಏಷ್ಯನ್ ಕ್ರೀಡಾಕೂಟಕ್ಕೆ ಭಾರತ ತಂಡ » 4

# ಎತ್ತಿನಹೊಳೆಗೆ ಕೇಂದ್ರದ ನೆರವು ಕೋರಿದ ರಾಜ್ಯ

- 4,708.14 ಕೋ.ರೂ. ಭರಿಸುವಂತೆ ಮನವಿ
- ಕೇಂದ್ರ ಸಚಿವ ಸಿ.ಆರ್.ಪಾಟೀಲ್, ವಿ.ಸೋಮಣ್ಣ ಭೇಟಿಯಾದ ಈಶ್ವರ ಖಂಡ್ರೆ

• ಪ್ರಜೋದಯ ವರದಿ

**ನವದೆಹಲಿ:** ಕರ್ನಾಟಕದ ಅತ್ಯಂತ ಮಹತ್ವಾಕಾಂಕ್ಷೆಯ ಹಾಗು ಬರ ಪೀಡಿತ ಜಿಲ್ಲೆಗಳ ಜೀವನಾಡಿಯಾಗಿರುವ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು ವೇಗವಾಗಿ ಪೂರ್ಣಗೊಳಿಸಲು ರಾಜ್ಯ ಸರ್ಕಾರವು ಕೇಂದ್ರದ ನೆರವು ಕೋರಿದೆ.

ದೆಹಲಿ ಪ್ರವಾಸದಲ್ಲಿರುವ ಕರ್ನಾಟಕದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಅವರು, ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ಹಾಗು ರಾಜ್ಯ ಸಚಿವ ವಿ.ಸೋಮಣ್ಣ ಅವರನ್ನು ಭೇಟಿ ಮಾಡಿ ಮಹತ್ವದ ಮಾತುಕತೆ ನಡೆಸಿದ್ದಾರೆ. ಯೋಜನೆಯ ಒಟ್ಟು ವೆಚ್ಚದ ಪೈಕಿ 4,708.14 ಕೋ.ರೂ.ಗಳನ್ನು ಕೇಂದ್ರ ಸರ್ಕಾರದ ಜಲ ಜೀವನ್ ಮಿಷನ್ (ಜೆಜೆಎಂ) ಯೋಜನೆಯಡಿ ಭರಿಸುವಂತೆ ಅಧಿಕೃತ ಮನವಿ ಸಲ್ಲಿಸಿದ್ದಾರೆ.

ಈ ಸಂದರ್ಭದಲ್ಲಿ ಯೋಜನೆಯ ಅಗತ್ಯತೆಯನ್ನು ಕೇಂದ್ರ ಸಚಿವರಿಗೆ ಮನವರಿಕೆ ಮಾಡಿಕೊಟ್ಟ ಸಚಿವ ಈಶ್ವರ ಖಂಡ್ರೆ ಅವರು, ತೀವ್ರ ನೀರಿನ ಕೊರತೆ ಎದುರಿಸುತ್ತಿರುವ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ತುಮಕೂರು, ಹಾಸನ ಮತ್ತು ಚಿಕ್ಕಮಗಳೂರು ಸೇರಿ ಒಟ್ಟು 7 ಜಿಲ್ಲೆಗಳ ವ್ಯಾಪ್ತಿಗೆ ಈ ಯೋಜನೆ ಒಳಪಡುತ್ತದೆ. ಸುಮಾರು 6,657 ಹಳ್ಳಿಗಳು ಹಾಗು 38 ಪಟ್ಟಣಗಳ ಒಟ್ಟು 75.59 ಲಕ್ಷ ಜನಸಂಖ್ಯೆಗೆ ಸುಸ್ಥಿರ ಕುಡಿಯುವ ನೀರು ಪೂರೈಸಲು ಎತ್ತಿನಹೊಳೆ ಯೋಜನೆ ಅತ್ಯಂತ ಅನಿವಾರ್ಯವಾಗಿದೆ. ಹೀಗಾಗಿ ಇದನ್ನು ಜೆಜೆಎಂ ಯೋಜನೆಯಡಿಯಲ್ಲಿ ಪರಿಗಣಿಸಬೇಕೆಂದು ಒತ್ತಾಯಿಸಿದರು.

ಪ್ರಸ್ತುತ ಕರ್ನಾಟಕ ಸರ್ಕಾರದ ಜಲಸಂಪನ್ಮೂಲ ಇಲಾಖೆಯ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಮೂಲಕ ಈ ಸಮಗ್ರ ಕುಡಿಯುವ



ನೀರಿನ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈಗಾಗಲೇ ರಾಜ್ಯ ಸರ್ಕಾರವೇ ತನ್ನ ಸ್ವಂತ ಹಣದಿಂದ ಯೋಜನೆಯ ಬಹುತೇಕ ಪ್ರಮುಖ ಕಾಮಗಾರಿಗಳನ್ನು ಪೂರ್ಣಗೊಳಿಸಿದೆ. ಆದರೆ, ಯೋಜನೆ ಸಂಪೂರ್ಣವಾಗಿ ಮುಕ್ತಾಯಗೊಳ್ಳಲು ಇನ್ನೂ ಸುಮಾರು 9,416.28 ಕೋ.ರೂ. ಉಳಿಕೆ ಕಾಮಗಾರಿಗಳು ಬಾಕಿ ಇವೆ.

ಈ ಉಳಿಕೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕೇಂದ್ರ ಸರ್ಕಾರವು ತನ್ನ ಪಾಲಿನ ಶೇ.50 ರಷ್ಟು ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಕೃಷ್ಣಾ ಮೇಲ್ದಂಡೆ ಮತ್ತು ಎತ್ತಿನಹೊಳೆ ಕಾಮಗಾರಿಗಳ ತ್ವರಿತ ಪ್ರಗತಿಗಾಗಿ ರಾಜ್ಯ ಸರ್ಕಾರ ವಿಶೇಷ ಒತ್ತಡ ಹೇರಿದೆ. ಕೇಂದ್ರ ಸಚಿವರು ಈ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸುವ ಭರವಸೆ ನೀಡಿದ್ದಾರೆ.

**14.056 ಟಿಎಂಸಿ ಕುಡಿಯುವ ನೀರು ಪೂರೈಕೆ**

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಈಶ್ವರ ಖಂಡ್ರೆ ಅವರು, ಪಶ್ಚಿಮ ಘಟ್ಟಗಳ ಮೇಲ್ಭಾಗದಿಂದ ಬರಪೀಡಿತ ಜಿಲ್ಲೆಗಳಿಗೆ 24.01 ಟಿಎಂಸಿ ನೀರನ್ನು ಎತ್ತುವಳಿ ಮಾಡಲು ಎತ್ತಿನಹೊಳೆ ಯೋಜನೆಯನ್ನು ವಿನ್ಯಾಸಗೊಳಿಸಲಾಗಿದ್ದು, ಅದರಲ್ಲಿ 14.056 ಟಿಎಂಸಿ ಕುಡಿಯುವ ನೀರು ಪೂರೈಕೆಗೆ ಸಂಬಂಧಿಸಿದ್ದಾಗಿದೆ. ಈ ಪೈಕಿ ಗ್ರಾಮೀಣ ಪ್ರದೇಶಕ್ಕೆ 8.393 ಟಿಎಂಸಿ ಮತ್ತು ನಗರಕ್ಕೆ 5.538 ಟಿಎಂಸಿ ನೀರು ಪೂರೈಕೆ ಆಗುತ್ತದೆ. 9.953 ಟಿಎಂಸಿ ನೀರನ್ನು ಅಂತರ್ಜಲ ಮರುಪೂರಣಕ್ಕಾಗಿ 527 ಕೆರೆಗಳನ್ನು ತುಂಬಿಸಲುದ್ದೇಶಿಸಲಾಗಿದೆ ಎಂದರು.

**ಶೇ.50ರಷ್ಟು ಪಾಲು ನೀಡಲು ಕೋರಿಕೆ**

**ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು ರಾಜ್ಯ ಸರ್ಕಾರವೇ ಬಹುತೇಕ ಪೂರ್ಣಗೊಳಿಸಿದೆ. 9,416.28 ಕೋ.ರೂ. ಉಳಿಕೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕೇಂದ್ರ ಸರ್ಕಾರದಿಂದ ಶೇ.50 ರಷ್ಟು ತನ್ನ ಪಾಲು ನೀಡುವಂತೆ ಕೋರಿ ಈ ಮನವಿ ಪತ್ರ ಸಲ್ಲಿಸಲಾಗಿದೆ ಎಂದು ಸಚಿವ ಈಶ್ವರ ಖಂಡ್ರೆ ತಿಳಿಸಿದರು.**

7 ಜಿಲ್ಲೆಗಳ ಗ್ರಾಮೀಣ ವಸತಿಗಳಿಗೆ 8.393 ಟಿಎಂಸಿ ನೀರನ್ನು ಮೀಸಲಿಡಲಾಗಿದೆ ಎಂಬ ವಿಷಯವನ್ನು ಕೇಂದ್ರ ಸಚಿವರ ಗಮನಕ್ಕೆ ತರಲಾಗಿದೆ. ರಾಜ್ಯ ಸರ್ಕಾರ ಜಲ ಜೀವನ ಮಿಷನ್ ಅಡಿಯಲ್ಲಿ ಗ್ರಾಮೀಣ ಪ್ರದೇಶದ ಜನರಿಗೆ ಕೊಳವೆ ಮೂಲಕ ಶುದ್ಧ ಕುಡಿಯುವ ನೀರು ಪೂರೈಸಲು ಮತ್ತು ಪ್ರತಿ ಗ್ರಾಮೀಣ ಮನೆಗಳಿಗೆ ಸುರಕ್ಷಿತ ಮತ್ತು ಸುಸ್ಥಿರ ಕುಡಿಯುವ ನೀರು ಸರಬರಾಜು ಮಾಡಲು ಬದ್ಧವಾಗಿದೆ ಎಂದು ತಿಳಿಸಿದರು.

# ಕಲಾವಿದ ಕೆ.ಟಿ.ಶಿವಪ್ರಸಾದ್ ನಿಧನ

• ಪ್ರಜೋದಯ ವರದಿ

**ಹಾಸನ:** ಅಂತರಾಷ್ಟ್ರೀಯ ಚಿತ್ರಕಲಾವಿದ ಕೆ.ಟಿ.ಶಿವಪ್ರಸಾದ್ (78) ಅವರು ಅನಾರೋಗ್ಯದಿಂದ ಮಂಗಳವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ಕೆಲ ದಿನಗಳಿಂದ ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದ ಶಿವಪ್ರಸಾದ್ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ನಂತರವೂ ಆರೋಗ್ಯದಲ್ಲಿ ಚೇತರಿಕೆ ಕಾಣದೆ ಕೊನೆಯುಸಿರೆಳೆದಿದ್ದಾರೆ.

ಉದ್ಯಮಿ ದಿ.ಎಲ್.ಟಿ.ಕಾರ್ಲೆ ಅವರ ಪುತ್ರರಾಗಿದ್ದ ಕೆ.ಟಿ. ಶಿವಪ್ರಸಾದ್ ಅವರು ಚಿತ್ರಕಲೆಯ ಕ್ಷೇತ್ರದಲ್ಲಿ ರಾಷ್ಟ್ರೀಯ ಹಾಗು ಅಂತರಾಷ್ಟ್ರೀಯ ಮಟ್ಟದಲ್ಲಿ ವಿಶಿಷ್ಟ ಛಾಪು ಮೂಡಿಸಿದ್ದರು. ತಮ್ಮ ಕಲಾಕೃತಿಗಳ ಮೂಲಕ ಸಾಮಾಜಿಕ ಅಸಮಾನತೆ, ಮಾನವೀಯ ಮೌಲ್ಯಗಳು ಹಾಗು ಬದುಕಿನ ವಿವಿಧ ಆಯಾಮಗಳನ್ನು ಪರಿಣಾಮಕಾರಿ ಯಾಗಿ ಚಿತ್ರಿಸಿದ್ದ ಅವರು ದೇಶ-ವಿದೇಶಗಳಲ್ಲಿ ಅನೇಕ ಪ್ರದರ್ಶನಗಳ ಮೂಲಕ ಕಲಾಭಿಮಾನಿಗಳ ಮೆಚ್ಚುಗೆಗೆ ಪಾತ್ರರಾಗಿದ್ದರು.

ಚಿತ್ರಕಲಾವಿದರಾಗಿ ಮಾತ್ರವಲ್ಲದೆ ಸಮಾಜಮುಖಿ ಚಿಂತಕರಾಗಿಯೂ



ಗುರುತಿಸಿಕೊಂಡಿದ್ದ ಶಿವಪ್ರಸಾದ್ ಅವರು ರೈತ ಸಂಘ, ದಲಿತ ಸಂಘರ್ಷ ಸಮಿತಿ, ಕಾರ್ಮಿಕ ಸಂಘಟನೆ ಸೇರಿ ಹಲವು ಜನಪರ ಸಂಘಟನೆಗಳೊಂದಿಗೆ ನಿಕಟ ಒಡನಾಟ ಹೊಂದಿದ್ದರು. ಸಾಮಾಜಿಕ ನ್ಯಾಯ, ಸಮಾನತೆ ಹಾಗು ಜಾತ್ಯಾತೀತ ಮೌಲ್ಯಗಳ ಪರವಾಗಿ ಸದಾ ಧ್ವನಿಯಾಗಿದ್ದ ಅವರು ಶೋಷಿತರು ಮತ್ತು ನೊಂದವರ ಪರವಾಗಿ ಕಾರ್ಯನಿರ್ವಹಿಸಿದ್ದರು.

1947ರಲ್ಲಿ ಜನಿಸಿದ ಕೆ.ಟಿ. ಶಿವಪ್ರಸಾದ್ ಅವರಿಗೆ ಬಾಲ್ಯದಿಂದಲೇ ಚಿತ್ರಕಲೆಯತ್ತ ತೀವ್ರವಾದ ಒಲವಿತ್ತು. ಮುಂಬೈನ ಪ್ರತಿಷ್ಠಿತ ಸರ್ ಜೆ.ಜೆ.ಸ್ಕೂಲ್ ಆಫ್ ಆರ್ಟ್‌ನಿಂದ 1973ರಲ್ಲಿ ಚಿತ್ರಕಲೆಯಲ್ಲಿ ಡಿಪ್ಲೊಮಾ ಪಡೆದರು. ತಮ್ಮ ಕಲಾಭ್ಯಾಸವನ್ನು ಸಾಕಾರ ಗೊಳಿಸುವ ನಿಟ್ಟಿನಲ್ಲಿ ಅವರು ಬೆಂಗಳೂರಿನ ಪ್ರತಿಷ್ಠಿತ ಕೆನ್ ಸ್ಕೂಲ್ ಆಫ್ ಆರ್ಟ್ ಸೇರಿದರು. ಅಲ್ಲಿ ಪ್ರಸಿದ್ಧ ಕಲಾವಿದ ಆರ್.ಎಂ. ಹಡಪದ್ ಅವರ ಗರಡಿಯಲ್ಲಿ ಪಳಗಿದರಲ್ಲದೆ, ಚಿತ್ರಕಲೆಯ ತಾಂತ್ರಿಕತೆ ಮತ್ತು ದಾರ್ಶನಿಕ ದೃಷ್ಟಿಕೋನವನ್ನು ಮೈಗೂಡಿಸಿಕೊಂಡರು.

ಶಿವಪ್ರಸಾದ್ ಅವರ ಕಲಾಕೃತಿಗಳು ಲಂಡನ್, ಯುರೋಪ್ ಸೇರಿ ಜಗತ್ತಿನ ಹಲವು ಪ್ರತಿಷ್ಠಿತ ಆರ್ಟ್ ಗ್ಯಾಲರಿಗಳಲ್ಲಿ ಪ್ರದರ್ಶನಗೊಂಡಿವೆ. ಪಾಶ್ಚಿಮಾತ್ಯ ಕಲಾ ಜಗತ್ತಿನ ದಿಗ್ಗಜರೊಂದಿಗೆ ಒಡನಾಟ ಹೊಂದಿದ್ದರು. ಅವರ ಸುದೀರ್ಘ ಕಲಾ ಸೇವೆಗೆ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಸೇರಿ ರಾಷ್ಟ್ರೀಯ ಹಾಗು ರಾಜ್ಯ ಮಟ್ಟದ ಅನೇಕ ಪ್ರತಿಷ್ಠಿತ ಗೌರವಗಳು ಸಂದಿವೆ.

**ಇಂದು ಅಂತಿಮ ದರ್ಶನ**

ಹಾಸನ : ಶಿವಪ್ರಸಾದ್ ಅವರ ಪಾರ್ಥಿವ ಶರೀರವನ್ನು ಬುಧವಾರ ಬೆಳಿಗ್ಗೆ ನಗರದ ಶಂಕರಿಪುರಂನಲ್ಲಿರುವ ಅವರ ನಿವಾಸ ಹಾಗು ಬೆಳಿಗ್ಗೆ 9.30 ರಿಂದ 12 ಗಂಟೆವರೆಗೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಆವರಣದಲ್ಲಿ ಸಾರ್ವಜನಿಕ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ನಂತರ ನಗರದ ಬಿಟ್ಟಗೋಡನಹಳ್ಳಿ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಮಲೆನಾಡು ಭಾಗದಲ್ಲಿ ಚುರುಕುಗೊಂಡ ಮುಂಗಾರು

## ಬಯಲುಸೀಮೆ, ಅರೆಮಲೆನಾಡಿನಲ್ಲೂ ಮಳೆಯ ಸಿಂಚನ: ರೈತರಲ್ಲಿ ಆಶಾಭಾವನೆ

• ಪ್ರಜೋದಯ ವರದಿ

**ಹಾಸನ :** ಬಹುತೇಕ ದಿನಗಳಿಂದ ಕೈಕೊಟ್ಟಿದ್ದ ಮುಂಗಾರು ಜೂನ್ ತಿಂಗಳ ಅಂತ್ಯದಲ್ಲಿ ಮತ್ತೆ ಚುರುಕು ಗೊಂಡಿದ್ದು, ಕಳೆದ ಎರಡು ದಿನಗಳಿಂದ ಜಿಲ್ಲೆಯ ಹಲವು ಭಾಗಗಳಲ್ಲಿ ಸಾಧಾರಣ ಮಳೆಯಾಗುತ್ತಿದೆ.

ಆರಂಭದಿಂದಲೇ ಅಬ್ಬರಿಸಬೇಕಿದ್ದ ಆರಿದ್ರ ಮಳೆ ತಿಂಗಳ ಕೊನೆಯಲ್ಲಿ ಚುರುಕುಗೊಂಡಿದ್ದು, ಮಳೆಯ ಕೊರತೆಯಿಂದ ಕಂಗಾಲಾಗಿದ್ದ ರೈತರು ಜಿಲ್ಲಾದ್ಯಂತ ಮಳೆಯಾ ಗುತ್ತಿರುವುದರಿಂದ ನಿಟ್ಟುಸಿರು ಬಿಡುವಂತಾಗಿದೆ.

ಮಲೆನಾಡು ಭಾಗದಲ್ಲಿ ಮೂರು ದಿನಗಳಿಂದ ನಿರಂತರ ಮಳೆಯಾಗುತ್ತಿದೆ. ಸಕಲೇಶಪುರ ತಾಲ್ಲೂಕಿನ ಹೆತ್ತೂರು ಹೋಬಳಿ ವ್ಯಾಪ್ತಿಯಲ್ಲಿ ಸೋಮವಾರ ಸುಮಾರು 2ಇಂಚಿನಷ್ಟು ಮಳೆಯಾಗಿದ್ದು, ಮಂಗಳವಾರವೂ ಒಂದು ಇಂಚಿಗೂ ಅಧಿಕ ಮಳೆ



ದಾಖಲಾಗಿದೆ. ಯಸಳೂರು, ಹಾನುಬಾಳು, ವನಗೂರು ಸೇರಿ ಸುತ್ತಮುತ್ತಲಿನ ಪ್ರದೇಶಗಳಲ್ಲಿಯೂ ಉತ್ತಮ ಮಳೆಯಾಗಿದೆ. ಆಲೂರು ಮತ್ತು ಬೇಲೂರು ತಾಲ್ಲೂಕಿನ ಹಲವು ಗ್ರಾಮಗಳಲ್ಲೂ ವರುಣನ ಸಿಂಚನದಿಂದ ಕೃಷಿ ಚಟುವಟಿಕೆಗಳಿಗೆ ವೇಗ ದೊರೆತಿದೆ.

ಬಯಲುಸೀಮೆ ಹಾಗು ಅರೆ ಮಲೆನಾಡು ಭಾಗಗಳಲ್ಲಿ ಈಗಾಗಲೇ ಬಿತ್ತನೆ ಮಾಡಿದ್ದ ಮುಸುಕಿನ ಜೋಳ, ರಾಗಿ, ಮೆಕ್ಕೆಜೋಳ ಸೇರಿ ವಿವಿಧ ಬೆಳೆಗಳು ಮೊಳಕೆ ಹೊಡೆಯಲು ಹಾಗು ಬೆಳವಣಿಗೆಗೆ ಅನುಕೂಲಕರ ವಾತಾವರಣ ನಿರ್ಮಾಣವಾಗಿದೆ. ಮಲೆನಾಡು ಪ್ರದೇಶಗಳಲ್ಲಿ ಭತ್ತದ ಗದ್ದೆಗಳ ಉಳಿಮೆ, ನಾಟಿ ಪೂರ್ವ ಸಿದ್ಧತೆಗಳು ಚುರುಕುಗೊಂಡಿವೆ.

ಈ ಬಾರಿ ಎಲ್‌ನಿನೊ ಪರಿಣಾಮ ಮುಂಗಾರು ಹಂಗಾಮಿನಲ್ಲಿ ಸಾಮಾನ್ಯಕ್ಕಿಂತ ಶೇ.40ರಷ್ಟು ಮಳೆ ಕೊರತೆಯಾಗುವ ಸಾಧ್ಯತೆ ಇದೆ ಎಂಬ ಆತಂಕ ರೈತರು ಹಾಗೂ ಕೃಷಿ ವಲಯದಲ್ಲಿ ವ್ಯಕ್ತವಾಗಿತ್ತು. ಆದರೆ, ಕಳೆದ ಎರಡು ದಿನಗಳಿಂದ ಸುರಿಯುತ್ತಿರುವ ಮಳೆ ಆ ಆತಂಕವನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಿದ್ದು, ಮುಂಗಾರು ಮತ್ತೆ ಚುರುಕುಗೊಳ್ಳುವ ನಿರೀಕ್ಷೆಯನ್ನು ಹೆಚ್ಚಿಸಿದೆ.

ಜುಲೈ ತಿಂಗಳಲ್ಲೂ ನಿರಂತರ ಮಳೆಯಾದರೆ ಮುಂಗಾರು ಬೆಳೆಗಳು ಉತ್ತಮವಾಗಿ ಬೆಳೆಯಲಿದ್ದು, ಜಲಾಶಯಗಳ ನೀರಿನ ಸಂಗ್ರಹದಲ್ಲೂ ಸುಧಾರಣೆ ಕಂಡು ಬರಲಿದೆ.

# ಜನರ ಆಶೀರ್ವಾದದಿಂದ ಗೆದ್ದಿದ್ದೇನೆ, ಲಾಟರಿಯಿಂದಲ್ಲ

## ಮಾಜಿ ಶಾಸಕ ಪ್ರೀತಮ್ ಜೆ. ಗೌಡ ಟೀಕೆಗೆ ಶಾಸಕ ಹೆಚ್.ಪಿ.ಸ್ವರೂಪ್ ತಿರುಗೇಟು

• ಪ್ರಜೋದಯ ವರದಿ

**ಹಾಸನ :** ಜನರ ಆಶೀರ್ವಾದ ಮತ್ತು ಕುಟುಂಬದ ರಾಜಕೀಯ ಪರಂಪರೆಯ ಬಲದಿಂದ 85 ಸಾವಿರ ಮತಗಳ ಅಂತರದಲ್ಲಿ ಗೆದ್ದಿದ್ದೇನೆ ಹೊರತು, ಲಾಟರಿಯಿಂದ ಶಾಸಕನಾಗಿಲ್ಲವೆಂದು ಮಾಜಿ ಶಾಸಕ ಪ್ರೀತಮ್ ಜೆ.ಗೌಡ ಅವರಿಗೆ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ತಿರುಗೇಟು ನೀಡಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಇನ್ನೂ ರಾಜಕೀಯದಲ್ಲಿ ಅಂಬೆಗಾಲು ಇಡುತ್ತಿದ್ದೇನೆ. ರಾಜ್ಯ ರಾಜಕೀಯದ ಬಗ್ಗೆ ಮಾತನಾಡುವಷ್ಟು ದೊಡ್ಡವನಲ್ಲ. ನನ್ನ ತಂದೆ ಹೆಚ್.ಎಸ್.ಪ್ರಕಾಶ್ ಅವರು ಆರು ಬಾರಿ ಚುನಾವಣೆಯನ್ನು ಎದುರಿಸಿ, ನಾಲ್ಕು ಬಾರಿ ಶಾಸಕರಾಗಿದ್ದರು. ಅವರ ಮಾರ್ಗದರ್ಶನ ಮತ್ತು ಜನರ ಆಶೀರ್ವಾದದಿಂದಲೇ ನಾನು ಶಾಸಕನಾಗಿದ್ದೇನೆಂದರು.



ನಾನೇನೂ ರಾಜಕೀಯಕ್ಕೆ ಹೊಸಬನಲ್ಲ, ಜಿಲ್ಲಾ ಪಂಚಾಯಿತಿ ಸದಸ್ಯ ಹಾಗು ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿರುವ ಅನುಭವಿದೆ. ಕ್ಷೇತ್ರದ ಜನರ ನಾಡಿಮಿಡಿತ ಅರಿತು ಕೆಲಸ ಮಾಡಿದ್ದೇನೆ. ಕ್ಷೇತ್ರದಲ್ಲಿ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದ್ದೇನೆ. ಮುಂದಿನ ದಿನಗಳಲ್ಲಿ ಶಾಶ್ವತ ಅಭಿವೃದ್ಧಿ ಕಾರ್ಯಗಳ ಅಂಕಿ-ಅಂಶಗಳನ್ನು ಜನರ ಮುಂದೆ ಇಡುತ್ತೇನೆಂದು ತಿಳಿಸಿದರು.

ಪ್ರೀತಮ್ ಗೌಡ ಅವರು ಲಾಟರಿ ಶಾಸಕ ಎಂದು ಟೀಕಿಸಿದ್ದ ಕುರಿತು ಪ್ರತಿಕ್ರಿಯಿಸಿದ ಅವರು, ನಾನು ಎಂದಿಗೂ ಲಾಟರಿ ಆಡಿಲ್ಲ, ಲಾಟರಿ ಬಗ್ಗೆ ಆಳ-ಅಗಲ ಗೊತ್ತಿರುವವರು ಅದರ ಬಗ್ಗೆ ಮಾತನಾಡುತ್ತಾರೆ. ನನಗೆ ಅದರ ಬಗ್ಗೆ ಯಾವುದೇ ಅನುಭವವಿಲ್ಲವೆಂದು ಹೇಳಿದರು.

ತಮ್ಮ ಕುಟುಂಬದ ರಾಜಕೀಯ ಹಿನ್ನಲೆಯನ್ನು ಉಲ್ಲೇಖಿಸಿದ ಅವರು, ನಮ್ಮ ತಾತ ಪುರಸಭೆ ಸದಸ್ಯರಾಗಿದ್ದರು. ತಂದೆ ನಗರಸಭೆ ಸದಸ್ಯರಾಗಿಯೂ, ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ನಮ್ಮ ಇತಿಹಾಸ ಗೊತ್ತಿಲ್ಲದೆ ಕೆಲವರು ಮಾತನಾಡುತ್ತಿದ್ದಾರೆ. ನಾವು ಹಲವು ವರ್ಷಗಳಿಂದ ಕ್ಷೇತ್ರದ ಜನರ

» ನಾಲ್ಕನೇ ಪುಟದಲ್ಲಿ

**ತಾಳ್ಮೆಯಿಂದ ರಾಜಕೀಯ ಮಾಡುತ್ತೇನೆ**

ಮುಂದಿನ ಚುನಾವಣೆಯ ಟಿಕೆಟ್ ವಿಚಾರದ ಕುರಿತು ಈಗ ಮಾತನಾಡುವುದಿಲ್ಲ. ಚುನಾವಣೆ ಬಂದಾಗ ನೋಡೋಣ. ನಾನು ತಾಳ್ಮೆಯಿಂದ ರಾಜಕೀಯ ಮಾಡುತ್ತೇನೆ. ಉದ್ವೇಗಕ್ಕೆ ಒಳಗಾಗುವುದಿಲ್ಲ. ಹೆಚ್.ಡಿ.ದೇವೇಗೌಡರು, ಹೆಚ್.ಡಿ.ಕುಮಾರಸ್ವಾಮಿ ಹಾಗು ಹೆಚ್.ಡಿ.ರೇವಣ್ಣ ಅವರ ರಾಜಕೀಯ ಗರಡಿಯಲ್ಲಿ ಬೆಳೆದವನು. ನನ್ನ ಚೌಕಟ್ಟಿನೊಳಗೆ ಮಾಡಬೇಕಾದ ಕೆಲಸವನ್ನು ಮಾಡುತ್ತಿದ್ದೇನೆ. ಟಿಕೆಟ್ ನನಗೇ ಎಂದು ನಾನು ಎಲ್ಲಿಯೂ ಹೇಳಿಲ್ಲ. ಮತದಾರರು, ಕುಮಾರಣ್ಣ ಹಾಗು ರೇವಣ್ಣ ಅವರಿಗೆ ಧಕ್ಕೆ ತರುವ ಕೆಲಸ ಮಾಡುವುದಿಲ್ಲವೆಂದು ಹೆಚ್.ಪಿ.ಸ್ವರೂಪ್ ಅವರು ಸ್ಪಷ್ಟಪಡಿಸಿದರು.

# ಅಡ್ಡ ಮತದಾನ ಆರೋಪ : ಹೆಚ್.ಕೆ.ಸುರೇಶ್ ಪ್ರಮಾಣ

## ಬೇಲೂರು ಚನ್ನಕೇಶವಸ್ವಾಮಿ, ಧರ್ಮಸ್ಥಳ ಮಂಜುನಾಥ ಸ್ವಾಮಿ ಸನ್ನಿಧಿಯಲ್ಲಿ ಆಣೆ

• ಪ್ರಜೋದಯ ವರದಿ

**ಹಾಸನ:** ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಆರೋಪ ಕೇಳಿ ಬಂದ ಹಿನ್ನಲೆಯಲ್ಲಿ ಶಾಸಕ ಹೆಚ್.ಕೆ.ಸುರೇಶ್ ಅವರು ಬೇಲೂರಿನ ಶ್ರೀ ಚನ್ನಕೇಶವಸ್ವಾಮಿ ಸನ್ನಿಧಿಯ ಬಲಿ ಕಲ್ಲಿನ ಮೇಲೆ ಪ್ರಮಾಣ ಮಾಡಿದ ನಂತರ ತಮ್ಮ ಬೆಂಬಲಿಗರೊಂದಿಗೆ ಧರ್ಮಸ್ಥಳಕ್ಕೆ ತೆರಳಿ ಆಣೆ ಮಾಡಿದರು.

ಎಲ್ಲಾ ಬಿಜೆಪಿ ಶಾಸಕರು ಧರ್ಮಸ್ಥಳದ ಶ್ರೀ ಮಂಜುನಾಥ ಸ್ವಾಮಿಯ ಮೇಲೆ ಆಣೆ ಮಾಡಬೇಕೆಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ



ಹೇಳಿದಾಗ ವಿರೋಧ ವ್ಯಕ್ತವಾದ ಕಾರಣ ಬಿ.ವೈ.ವಿಜಯೇಂದ್ರ ಅವರು ಮಾತ್ರ ಧರ್ಮಸ್ಥಳಕ್ಕೆ ತೆರಳಿ ಆಣೆ ಮಾಡಿದ್ದರು. ಇದರ ಬೆನ್ನಲ್ಲೆ ಬೇಲೂರು ಕ್ಷೇತ್ರದ ಶಾಸಕ ಹೆಚ್. ಕೆ.ಸುರೇಶ್ ಅವರು ಮಂಗಳವಾರ ಬೆಳಿಗ್ಗೆ ಶ್ರೀಚನ್ನಕೇಶವಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿದ ನಂತರ ಬಲಿಕಲ್ಲಿನ ಎರಡು ಕೈಗಳನ್ನು ಇಟ್ಟು ತಾನು ಅಡ್ಡ ಮತದಾನ ಮಾಡಿಲ್ಲವೆಂದು ಪ್ರಮಾಣ ಮಾಡಿದರು.

ಚನ್ನಕೇಶವಸ್ವಾಮಿ, ಸೌಮ್ಯನಾಯಕಿ, ರಂಗನಾಯಕಿ ದರ್ಶನ ಮಾಡಿದ್ದೇನೆ. ಪೂರ್ವ ಜನ್ಮದ ಪುಣ್ಯ ನನಗೆ ಭಗವಂತನ ಬಲ ಭಾಗದಲ್ಲಿ ವಾಸ ಮಾಡುವ ಅವಕಾಶ ಸಿಕ್ಕಿದ್ದು, ಕ್ಷೇತ್ರದ ಸೇವೆ ಮಾಡಲು ಅವಕಾಶ ಕೊಟ್ಟಿದ್ದಾನೆ. ಈ ಬಲಿ ಕಲ್ಲೇ ಸಾಕ್ಷಿ. ನಾನು ಅಡ್ಡ ಮತದಾನ ಮಾಡಿಲ್ಲ, ಪಕ್ಷ ದ್ರೋಹ ಮಾಡಿಲ್ಲವೆಂದು ಮೂರು ಬಾರಿ ಉಚ್ಚಾರ ಮಾಡಿದರು.

ಇದು ಈ ಕ್ಷೇತ್ರಕ್ಕೆ ಮಾಡಿರುವ ದೊಡ್ಡ ಷಡ್ಯಂತ್ರ. ಈ ಕ್ಷೇತ್ರಕ್ಕೆ ಪ್ರಧಾನಿ ಮೋದಿ ಅವರು ಬಂದು ಪ್ರಚಾರ ಮಾಡಿದ್ದರು. ಅವರಿಗೆ ಅನ್ಯಾಯ ಮಾಡಿದರೆ ಭಗವಂತ ಕ್ಷಮಿಸಲ್ಲ. ಆ ಪಕ್ಷದಲ್ಲಿ ಇದ್ದು, ಪ್ರಾಮಾಣಿಕವಾಗಿ

» ನಾಲ್ಕನೇ ಪುಟದಲ್ಲಿ

# ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ಪ್ರಾರಂಭ

## ಭಾನು ಮುಷ್ತಾಕ್ ಎಸ್‌ಐಆರ್ ಅರ್ಜಿ ಭರ್ತಿ ಮಾಡುವ ಮೂಲಕ ಚಾಲನೆ

• ಪ್ರಜೋದಯ ವರದಿ

**ಹಾಸನ:** ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ಮಂಗಳವಾರದಿಂದ ಜಿಲ್ಲಾದ್ಯಂತ ಆರಂಭವಾಗಿದೆ. ಬೂಕರ್ ಪ್ರಶಸ್ತಿ ವಿಜೇತೆ ಭಾನು ಮುಷ್ತಾಕ್ ಅವರು ಎಸ್‌ಐಆರ್ ಅರ್ಜಿ ಭರ್ತಿ ಮಾಡುವ ಮೂಲಕ ಚಾಲನೆ ನೀಡಿದರು.

ಭಾನುಮುಷ್ತಾಕ್ ಅವರ ಮನೆಗೆ ತೆರಳಿದ ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರು ಗಣತಿ ನಮೂನೆ ಅರ್ಜಿ ವಿತರಿಸಿದರು. ಅರ್ಜಿ ಸ್ವೀಕರಿಸಿ ಭರ್ತಿ ಮಾಡಿ ಒಂದು ಪ್ರತಿಯನ್ನು ಜಿಲ್ಲಾಡಳಿತಕ್ಕೆ ನೀಡಿ ಒಂದು ಪ್ರತಿಯನ್ನು ಸಾಹಿತಿ ಭಾನುಮುಷ್ತಾಕ್



ಪಡೆದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಅರ್ಜಿ ಭರ್ತಿ ಮಾಡಿ ಆಧಾರ್ ಕಾರ್ಡ್, ಹಳೆಯ ಎಪಿಕ್ ಕಾರ್ಡ್ ನೀಡಿದ್ದರಿಂದ ಬಹಳ ಸುಲಭವಾಗಿ ಆಯಿತು. ದ್ವಿಪ್ರತಿಯಲ್ಲಿ ಒಂದು ಪ್ರತಿಯನ್ನು ಜಿಲ್ಲಾಡಳಿತಕ್ಕೆ ಕೊಡುತ್ತೇವೆ, ಇನ್ನೊಂದು ಪ್ರತಿಯನ್ನು ತಾವೇ ಇಟ್ಟುಕೊಳ್ಳುತ್ತೇವೆ. ಈ ಪ್ರಕ್ರಿಯೆ ನಡೆಯಬೇಕು. ನಾವು ದೇಶದ ನಾಗರಿಕರು ಎಂದು ಬಹಳ

» ನಾಲ್ಕನೇ ಪುಟದಲ್ಲಿ

## ವಕೀಲರ ಪರಿಷತ್ ಚುನಾವಣೆ: ಜೆ.ಪಿ.ಶೇಖರ್‌ಗೆ ಗೆಲುವು



• ಪ್ರಜೋದಯ ವರದಿ

**ಹಾಸನ:** ಕರ್ನಾಟಕ ರಾಜ್ಯ ವಕೀಲರ ಪರಿಷತ್ ಚುನಾವಣೆಯಲ್ಲಿ ಜಿಲ್ಲೆಯ ಜೆ.ಪಿ.ಶೇಖರ್ ಅವರು ಗೆಲುವು ಸಾಧಿಸಿದ್ದಾರೆ.

ವಕೀಲರ ಪರಿಷತ್‌ನಲ್ಲಿ ಒಟ್ಟು ಚುನಾಯಿತ 23 ಸದಸ್ಯರಿದ್ದು, ಸುಪ್ರೀಂ ಕೋರ್ಟ್ ನಾಮನಿರ್ದೇಶನ ಮಾಡುವ ಇಬ್ಬರು ಸೇರಿ ಒಟ್ಟು 25 ಮಂದಿ ಸದಸ್ಯರು ಕಾರ್ಯನಿರ್ವಹಿಸಲಿದ್ದಾರೆ. ಆ ಪೈಕಿ, ಜೆ.ಪಿ.ಶೇಖರ್ ಅವರು ಚುನಾಯಿತ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಕಳೆದ ಚುನಾವಣೆಯಲ್ಲಿ ಸೋಲು ಕಂಡಿದ್ದ ಅವರು ಈ ಬಾರಿ ಗೆಲುವು ಸಾಧಿಸಿದ್ದಾರೆ.

## ಮುಂಗಾರು ಹಂಗಾಮಿನಲ್ಲಿ ಮಳೆ ಕೊರತೆ : ಶಾಸಕ ಹೆಚ್.ಪಿ.ಸ್ವರೂಪ್ ಸಲಹೆ

# ರೈತರು ಪರ್ಯಾಯ ಬೆಳೆಗಳತ್ತ ಗಮನ ಹರಿಸಬೇಕು

• ಪ್ರಜೋದಯ ವರದಿ

**ಹಾಸನ:** ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಮಳೆ ಕೊರತೆ ಎದುರಾಗುವ ಸಾಧ್ಯತೆ ಇರುವುದರಿಂದ ರೈತರು ಕೃಷಿ ಇಲಾಖೆ ನೀಡುವ ಸಲಹೆಗಳನ್ನು ಪಾಲಿಸಿ ಪರ್ಯಾಯ ಬೆಳೆಗಳತ್ತ ಗಮನ ಹರಿಸಬೇಕೆಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ತಿಳಿಸಿದರು.

ನಗರದ ಜಂಟಿ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಮಂಗಳವಾರ ನಡೆದ ಬೆಳೆ ಉತ್ಪಾದನೆ, ಬೆಳೆ ಸಮೀಕ್ಷೆ ಹಾಗು ಜೋಳದ ಬಿಳಿ ಸುಳಿ ರೋಗ ನಿರ್ವಹಣಾ ಕ್ರಮಗಳ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಜೋಳಕ್ಕೆ ಬಿಳಿ ಸುಳಿ ರೋಗ ಕಾಣಿಸಿಕೊಂಡಿದ್ದು, ಕೃಷಿ ಇಲಾಖೆ ಈಗಾಗಲೇ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದೆ. ಜೋಳದ ಬೆಳೆಯನ್ನು ಸಂಪೂರ್ಣವಾಗಿ ಬಿಡಲು ಸಾಧ್ಯವಾಗದಿದ್ದರೆ, ಜೋಳದ ಮಧ್ಯದ ಸಾಲುಗಳಲ್ಲಿ ದ್ವಿದಳ ಬೆಳೆಗಳನ್ನು ಬೆಳೆಯಲು ಕೃಷಿ ಇಲಾಖೆ ನೀಡಿರುವ ಸಲಹೆಯನ್ನು ರೈತರು ಪಾಲಿಸಬೇಕೆಂದರು.

ನಾನೂ ಈ ಬಾರಿ 40 ಚೀಲ ಆಲೂಗೆಡ್ಡೆ



ಬಿತ್ತನೆ ಮಾಡಿದ್ದೇನೆ. ಮಳೆ ಕೊರತೆಯಿಂದ ಸಾಕಷ್ಟು ತೊಂದರೆ ಅನುಭವಿಸುತ್ತಿದ್ದೇನೆ. ಹವಾಮಾನಕ್ಕೆ ಅನುಗುಣವಾಗಿ ಬೆಳೆ ಆಯ್ಕೆ ಮಾಡುವುದು ಅತ್ಯಗತ್ಯ. ರಾಗಿಯನ್ನು ಪರ್ಯಾಯ ಬೆಳೆಯಾಗಿ ಆಯ್ದುಕೊಳ್ಳುವುದು ಉತ್ತಮ. ರಸಗೊಬ್ಬರಕ್ಕೆ ಕೊರತೆಯಾಗದಂತೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ರಮೇಶ್ ಕುಮಾರ್ ಅವರು ಮಾತನಾಡಿ, ಜಿಲ್ಲೆಯಾದ್ಯಂತ ಹಲವು ವರ್ಷಗಳಿಂದ ಒಂದೇ ಜಮೀನಿನಲ್ಲಿ ನಿರಂತರವಾಗಿ ಜೋಳ ಬೆಳೆಯುತ್ತಿರುವ ಪರಿಣಾಮ ಬಿಳಿ ಸುಳಿ ರೋಗ ವ್ಯಾಪಕವಾಗಿ ಕಾಣಿಸಿಕೊಳ್ಳುತ್ತಿದ್ದು, ಪರಿಸ್ಥಿತಿ ಇದೇ ರೀತಿ ಮುಂದುವರಿದರೆ ಆಲೂಗೆಡ್ಡೆಯಂತೆಯೇ ಜೋಳ ಬೆಳೆಯುವುದೂ ಕಷ್ಟವಾಗುವ ಸಾಧ್ಯತೆ ಇದೆ ಎಂದು ಎಚ್ಚರಿಕೆ ನೀಡಿದರು.

ಕಳೆದ 10 ರಿಂದ 15 ವರ್ಷಗಳಿಂದ ಒಂದೇ ಜಮೀನಿನಲ್ಲಿ ನಿರಂತರವಾಗಿ ಜೋಳ ಬೆಳೆಯುತ್ತಿರುವುದರಿಂದ ಮಣ್ಣಿನ ಮೂಲಕ ಹಾಗೂ ವಾತಾವರಣದಿಂದ ರೋಗ ಹರಡುತ್ತಿದೆ. ಬೀಜದಿಂದ ಹರಡುವ ರೋಗವನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬಹುದಾದರೂ, ಮಣ್ಣು ಮತ್ತು ಗಾಳಿಯ ಮೂಲಕ ಹರಡುವ ರೋಗವನ್ನು ಸಂಪೂರ್ಣ ತಡೆಯುವುದು ಸಾಧ್ಯವಿಲ್ಲ. ಆದ್ದರಿಂದ ಬೆಳೆ ಪದ್ಧತಿಯಲ್ಲಿ ಬದಲಾವಣೆ ತರುವುದು ಅನಿವಾರ್ಯವಾಗಿದೆ ಎಂದು ಹೇಳಿದರು.

ಈ ವರ್ಷ ಮುಂಗಾರು ಮಳೆ ಸಾಮಾನ್ಯಕ್ಕಿಂತ ಕಡಿಮೆಯಾಗುವ ಸಾಧ್ಯತೆ ಇದ್ದು, ಆಗಸ್ಟ್ ತಿಂಗಳಲ್ಲಿಯೂ ಮಳೆ ಕೊರತೆ ಮುಂದುವರಿಯಬಹುದೆಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈ ಹಿನ್ನಲೆ ರೈತರು ಜೋಳದ ಜೊತೆಗೆ ರಾಗಿ, ತೊಗರಿ, ಹುರಳಿ, ಅಲಸಂದೆ ಸೇರಿ ದ್ವಿದಳ ಧಾನ್ಯಗಳನ್ನು ಬೆಳೆಯುವ ಮೂಲಕ ಬೆಳೆ ವೈವಿಧ್ಯತೆ ಅಳವಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

**ಗೊಬ್ಬರ ಕೊರತೆ ಕುರಿತು ರೈತರ ಅಸಮಾಧಾನ**

ಸಭೆಯಲ್ಲಿ ಪಾಲ್ಗೊಂಡಿದ್ದ ರೈತರು, ಮಳೆ ಕೊರತೆಯಿಂದ ಬೆಳೆ ಉಳಿಸಿಕೊಳ್ಳುವ ಬಗ್ಗೆ ಆತಂಕ ವ್ಯಕ್ತಪಡಿಸಿದರು. ಈ ವರ್ಷ ಮಳೆ ಕಡಿಮೆಯಾಗುವ ಮುನ್ಸೂಚನೆ ಇದ್ದರೂ ಆರಂಭದಲ್ಲೇ ಜೋಳ ಬಿತ್ತನೆಗೆ ಅವಕಾಶ

» ನಾಲ್ಕನೇ ಪುಟದಲ್ಲಿ

**ಬೆಳೆ ವಿಮೆ ಮಾಡಿಸಿಕೊಳ್ಳಲು ಕರೆ**

**ಜಿಲ್ಲೆಯಲ್ಲಿ 13 ಬೆಳೆಗಳಿಗೆ ಬೆಳೆ ವಿಮೆ ಸೌಲಭ್ಯ ಲಭ್ಯವಿದೆ. ಜಿಲ್ಲೆಯ ಸುಮಾರು 3.31 ಲಕ್ಷ ರೈತರ ಪೈಕಿ ಕೇವಲ ಒಂದು ಲಕ್ಷ ರೈತರು ಮಾತ್ರ ಬೆಳೆ ವಿಮೆ ಮಾಡಿಸಿಕೊಂಡಿದ್ದಾರೆ. ಉಳಿದ ಎರಡು ಲಕ್ಷಕ್ಕೂ ಹೆಚ್ಚು ರೈತರು ಇನ್ನೂ ವಿಮೆ ಮಾಡಿಸದಿರುವುದು ಆತಂಕಕಾರಿ. ಕೇಂದ್ರ ಸರ್ಕಾರದ ವಿವಿಧ ಕೃಷಿ ಯೋಜನೆಗಳ ಪ್ರಯೋಜನ ಪಡೆಯಲು ಅಗತ್ಯವಾಗಿರುವ ಸೆಂಟ್ರಲ್ ಐಡಿ ನೋಂದಣಿ ಕಾರ್ಯ ಪ್ರಗತಿಯಲ್ಲಿದ್ದು, ಇನ್ನೂ 39 ಸಾವಿರಕ್ಕೂ ಹೆಚ್ಚು ರೈತರು ನೋಂದಣಿ ಮಾಡಿಸಿಕೊಂಡಿಲ್ಲ. ಗ್ರಾಮ ಮಟ್ಟದಲ್ಲಿ ಜಾಗೃತಿ ಮೂಡಿಸಿ ಶೀಘ್ರ ನೋಂದಣಿ ಪೂರ್ಣಗೊಳಿಸುವಂತೆ ಕೃಷಿ ಅಧಿಕಾರಿಗಳಿಗೆ ಕೃಷಿ ಇಲಾಖೆ ಜಂಟಿ ನಿರ್ದೇಶಕ ರಮೇಶ್ ಕುಮಾರ್ ಅವರು ತಿಳಿಸಿದರು.**

## ಜಿಲ್ಲೆಗಿಂದು ಸಚಿವ ರಾಮಲಿಂಗಾರೆಡ್ಡಿ

**ಹಾಸನ :** ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಅವರು ಜು.1 ರಂದು ಜಿಲ್ಲೆಯಲ್ಲಿ ಪ್ರವಾಸ ಮಾಡಲಿದ್ದು, ಮಧ್ಯಾಹ್ನ 2 ಗಂಟೆಗೆ ಐದಳ್ಳ ಕಾವಲ್ ಕಾಮಗಾರಿ ವೀಕ್ಷಣೆ ಹಾಗೂ ಮಧ್ಯಾಹ್ನ 3.30ಕ್ಕೆ ರಾಮದೇವಹಳ್ಳ ಕಾವಲ್ ಕಾಮಗಾರಿ ವೀಕ್ಷಣೆ ಮಾಡಲಿದ್ದಾರೆ.


## ಜುಲೈ 11 ರಂದು ರಾಷ್ಟ್ರೀಯ ಲೋಕ್ ಅದಾಲತ್

**ಹಾಸನ :** ರಾಷ್ಟ್ರೀಯ ಮತ್ತು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ, ರಾಜ್ಯಾದ್ಯಂತ ಜುಲೈ 11 ರಂದು ರಾಷ್ಟ್ರೀಯ ಜನತಾ ನ್ಯಾಯಾಲಯ ನಡೆಯಲ್ಲಿದ್ದು, ನ್ಯಾಯಾಲಯದಲ್ಲಿ ಬಾಕಿ ಇರುವ ಎಲ್ಲಾ ವಿಧದ ವ್ಯಾಜ್ಯಗಳನ್ನು ಸಾರ್ವಜನಿಕರು ಬಗೆಹರಿಸಿಕೊಳ್ಳಬಹುದಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಜಿ.ಕೆ. ದಾಕ್ಷಾಯಿಣಿ ಅವರು ತಿಳಿಸಿದ್ದಾರೆ.

C M Y K

**ಕರ್ನಾಟಕದಲ್ಲಿ ಪಂಚಗ್ಯಾರಂಟಿ ಯೋಜನೆಯನ್ನು ಘೋಷಿಸಿದ್ದ ಕಾಂಗ್ರೆಸ್ ನಡೆಯನ್ನು ಟೀಕಿಸಿದ್ದ ಬಿಜೆಪಿ ಹಾಗೂ ಇತರೆ ಪಕ್ಷಗಳು ಇದೀಗ ಅದೇ ಮಾರ್ಗದಲ್ಲಿ ಸಾಗಿದೆ ಎನ್ನುವುದು ಬೇರೆ. ಭವಿಷ್ಯದಲ್ಲಿ ಈ ಗ್ಯಾರಂಟಿ ಘೋಷಣೆಗಳಿಲ್ಲದೇ ಚುನಾವಣೆ ನಡೆಸೋದು ಹೇಗೆ ಎನ್ನುವ ಸ್ಥಿತಿಗೆ ದೇಶ ಬಂದು ನಿಂತಿದೆ.**

# ಆರ್ಥಿಕ ಸಂಕಷ್ಟ ನಿವಾರಿಸುವುದೇ ಗ್ಯಾರಂಟಿ ಪರಿಷ್ಕರಣೆ?




ಅಶ್ವತ್ಥಕಟ್ಟೆ
ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದ ಗದ್ದುಗೆ ಏರಿ ಮೂರು ವರ್ಷ ಪೂರೈಸಿ, ಮುಂದಿನ ಚುನಾವಣೆಗೆ ಸಿದ್ಧತೆ ನಡೆಸಿಕೊಳ್ಳುತ್ತಿದೆ. ಕಳೆದ ಚುನಾವಣೆಯಲ್ಲಿ ಗೆಲುವಿನ ಮಹತ್ವದ ಪಾತ್ರ ವಹಿಸಿದ್ದ ಪಂಚ ಗ್ಯಾರಂಟಿ ಯೋಜನೆಗಳು ಸರಕಾರದ ಪ್ರಮುಖ ಸಾಧನೆಯ ಪೈಕಿ ಅಗ್ರಸ್ಥಾನದಲ್ಲಿ ಕಾಣಿಸುತ್ತಿವೆ. ಈಗಲೂ ಸರಕಾರದ ಸಾಧನೆಯ ಮೊದಲ ಹಾಗೂ ಕೊನೆಯ ವಾಕ್ಯ ಪಂಚ ಗ್ಯಾರಂಟಿ ಯೋಜನೆಗೆ ಸಂಬಂಧಿಸಿದ್ದಾಗಿರುತ್ತದೆ. ಬಡವರಿಗೆ ಆರ್ಥಿಕ ಶಕ್ತಿ ನೀಡಬೇಕು ಎನ್ನುವ ಉದ್ದೇಶದಿಂದ ಆರಂಭಿಸಿದ್ದ ಪಂಚ ಗ್ಯಾರಂಟಿ ಯೋಜನೆಗಳು ಸರಕಾರದ ಬೊಕ್ಕಸಕ್ಕೆ ಬಹುದೊಡ್ಡ ಹೊರೆಯಾಗಿರುವುದು ಎಷ್ಟು ನಿಜವೋ, ಚುನಾವಣೆಗಳಲ್ಲಿ ಉಚಿತ ಕೊಡುಗೆ ಅನಿವಾರ್ಯ ಎನ್ನುವ ಸ್ಥಿತಿಯನ್ನು ದೇಶಾದ್ಯಂತ ನಿರ್ಮಿಸಿರುವುದು ಅಷ್ಟೇ ಸತ್ಯ.

ಕರ್ನಾಟಕದಲ್ಲಿ ಪಂಚಗ್ಯಾರಂಟಿ ಯೋಜನೆಯನ್ನು ಘೋಷಿಸಿದ್ದ ಕಾಂಗ್ರೆಸ್ ನಡೆಯನ್ನು ಟೀಕಿಸಿದ್ದ ಬಿಜೆಪಿ ಹಾಗೂ ಇತರೆ ಪಕ್ಷಗಳು ಇದೀಗ ಅದೇ ಮಾರ್ಗದಲ್ಲಿ ಸಾಗಿದೆ ಎನ್ನುವುದು ಬೇರೆ. ಭವಿಷ್ಯದಲ್ಲಿ ಈ ಗ್ಯಾರಂಟಿ ಘೋಷಣೆಗಳಿಲ್ಲದೇ ಚುನಾವಣೆ ನಡೆಸೋದು ಹೇಗೆ ಎನ್ನುವ ಸ್ಥಿತಿಗೆ ದೇಶ ಬಂದು ನಿಂತಿದೆ.

ಆರಂಭದಲ್ಲಿ ವಿರೋಧಿಸಿದ್ದ ಪಕ್ಷಗಳು ಇಂದು ಗ್ಯಾರಂಟಿ ಯೋಜನೆಗಳ ಹಾದಿಯಲ್ಲಿಯೇ ಸಾಗಿರುವುದು ರಾಜಕೀಯ ಹಾಗೂ ಮತದಾರರಲ್ಲಿ ಸೃಷ್ಟಿಸಿರುವ ಪ್ರಭಾವಕ್ಕೆ ಸಾಕ್ಷಿಯಾಗಿದೆ. ಕರ್ನಾಟಕಕ್ಕೆ ಸೀಮಿತಗೊಳಿಸಿ ಪಂಚ ಗ್ಯಾರಂಟಿ ಯೋಜನೆಗಳನ್ನು ನೋಡುವುದಾದರೆ, ಅಲ್ಲಿ ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರಕಾರ ಪಂಚಗ್ಯಾರಂಟಿ ಯೋಜನೆಗಳಿಗೆ ಬರೋಬ್ಬರಿ 1.34 ಲಕ್ಷ ಕೋಟಿ ರು.ಗೂ ಹೆಚ್ಚು ಖರ್ಚು ಮಾಡಿದೆ. ಈ ಪಂಚಗ್ಯಾರಂಟಿ ಯೋಜನೆಗಳ ಅನುಷ್ಠಾನದ ಅಡ್ಡ ಪರಿಣಾಮ ಎನ್ನುವಂತೆ ಶಾಸಕರ ಅನುದಾನದಲ್ಲಿ ಖೋತಾ, ಅಭಿವೃದ್ಧಿ ಯೋಜನೆಗಳಿಗೆ ಅನುದಾನ ಕೊರತೆ, ನಿರ್ವಹಣೆಗೆ ಸಾಲದ ಮೊರೆ ಸೇರಿದಂತೆ ಹಲವು ರೀತಿಯ ಸಮಸ್ಯೆಯಾಗಿದೆ. ಆದರೆ ಆರ್ಥಿಕವಾಗಿ ಕರ್ನಾಟಕ ಸಮರ್ಥವಿರುವುದರಿಂದ ಸರಕಾರ ಎಲ್ಲವನ್ನು ಮೀರಿ ಯೋಜನೆಯನ್ನು ಆಚೀಚೆ ಮಾಡಿಕೊಂಡು ಮುನ್ನಡೆಸಿಕೊಂಡು ಹೋಗುತ್ತಿದೆ.

ಆದರೆ ಈಗ ಬರುತ್ತಿರುವ ಒಂದೊಂದೇ ಸಿಎಜಿ ವರದಿಗಳು ಕರ್ನಾಟಕ ಗ್ಯಾರಂಟಿ ಯೋಜನೆಗಳಲ್ಲಿರುವ ಲೋಪಗಳನ್ನು ಎತ್ತಿ ಹಿಡಿಯುತ್ತಿವೆ. 2023 ವಿಧಾನಸಭಾ ಚುನಾವಣಾ ಸಮಯದಲ್ಲಿ ಕಾಂಗ್ರೆಸ್ ನಾಯಕರು ಪಂಚಗ್ಯಾರಂಟಿ ಯೋಜನೆಯನ್ನು ಘೋಷಿಸಿದಾಗಲೇ, ಫಲಾನುಭವಿಗಳ ಬಗ್ಗೆಯೂ ಸ್ಪಷ್ಟನೆ ನೀಡಿ ಎನ್ನುವ ಮಾತುಗಳು ಕೇಳಿ ಬಂದಿತ್ತು.

ಆದರೆ ಆ ಸಮಯದಲ್ಲಿ ಎಲ್ಲರಿಗೂ ಅನ್ವಯವೆಂದಿದ್ದರು. ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಕ್ತಿ ಯೋಜನೆಯ ಬಗ್ಗೆ ಸ್ಪಷ್ಟನೆ ನೀಡುವಾಗ, ಮಹದೇವಪ್ಪ (ಅಂದಿನ ಸಚಿವ) ಅವರ ಪತ್ನಿಗೂ ಫ್ರೀ.. ನನ್ನ ಪತ್ನಿಗೂ ಫ್ರೀ ಎಂದು ಘೋಷಿಸಿದ್ದರು. ನಿಜವಾದ ಸಮಸ್ಯೆ ಶುರುವಾಗಿದ್ದೇ ಈ ಹಂತದಲ್ಲಿ. ಬಡತನ ರೇಖೆಗಿಂತ ಕೆಳಗಿರುವವರಿಗೆ ಈ ಯೋಜನೆಯನ್ನು ವಿಸ್ತರಣೆ ಮಾಡಿದ್ದರೆ ದೊಡ್ಡ ಸಮಸ್ಯೆಯಾಗುತ್ತಿರಲಿಲ್ಲ. ಅದಾಗಲೇ ಅಂತ್ಯೋದಯ ಕಾರ್ಡ್ ಹೊಂದಿರುವವರಿಗೆ ಉಚಿತ ವಿದ್ಯುತ್ ಹಾಗೂ ಆಹಾರ ಸಾಮಗ್ರಿಯನ್ನು ಸರಕಾರಗಳಿಂದ ನೀಡಲಾಗುತ್ತಿತ್ತು. ಆದರೆ ಸಮಸ್ಯೆ ಶುರುವಾಗಿದ್ದರೂ, ಶಕ್ತಿ ಯೋಜನೆಯನ್ನು ಯಾರು ಬೇಕಾದರೂ ಬಳಸಬಹುದು, ಗೃಹಜ್ಯೋತಿ ಯೋಜನೆಗೆ 200 ಯುನಿಟ್ ಬಳಕೆಯೊಂದನ್ನೇ ಮಾನದಂಡವನ್ನಾಗಿ ಮಾಡಿದ್ದು ಹಾಗೂ ಗೃಹಲಕ್ಷ್ಮೀ ಯೋಜನೆಗೆ ಮನೆ ಯಜಮಾನಿಯೊಂದೇ ಮಾನದಂಡವನ್ನಾಗಿ ಮಾಡಿದ್ದು ಆರ್ಥಿಕ ಹೊರೆ ಈ ಪ್ರಮಾಣದಲ್ಲಿ ಏರಿಕೆಯಾಗಲು ಕಾರಣವಾಯಿತು ಎಂದರೆ ತಪ್ಪಾಗುವುದಿಲ್ಲ. ಅರ್ಹರಿಗೆ ಕಲ್ಯಾಣ ಯೋಜನೆಗಳನ್ನು ವಿಸ್ತರಿಸುವುದು ತಪ್ಪಿಲ್ಲ. ಆದರೆ ಎಲ್ಲರಿಗೂ ಎಂದಿದ್ದೇ ಇಂದಿನ ಈ ಸಮಸ್ಯೆಗೆ ಕಾರಣ.

ಇದಾದ ಬಳಿಕ ಗೃಹಲಕ್ಷ್ಮೀ ಯೋಜನೆಯ ಹಣ ದುರುಪಯೋಗದ ಬಗ್ಗೆ ಅಲ್ಲಲ್ಲಿ ಕೇಳಿಬಂದಿತ್ತು. ಅದಾದ ಬಳಿಕ ಗ್ಯಾರಂಟಿ ಅನುಷ್ಠಾನ ಸಮಿತಿಯೂ ಮೃತಪಟ್ಟ ಮಹಿಳೆಯರ ಖಾತೆಗೂ ಅನುದಾನ ಹೋಗುತ್ತಿದೆ ಎನ್ನುವ ವರದಿಯನ್ನು ಸಲ್ಲಿಸಿತ್ತು. ಈ ಬಗ್ಗೆ ಕ್ರಮ ವಹಿಸುವ ಮೊದಲೇ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅಧಿಕಾರ ವಹಿಸಿಕೊಂಡಿದ್ದರಿಂದ ಅವರು, ಅಧಿಕಾರಕ್ಕೆ ಬಂದ ಕೆಲವೇ ದಿನದಲ್ಲಿ ಪಂಚಗ್ಯಾರಂಟಿ ಯೋಜನೆಗಳ ಪರಿಷ್ಕರಣೆ ಹಾಗೂ ಮರು ಅರ್ಜಿಯನ್ನು ಕರೆಯುವ ಪ್ರಸ್ತಾಪ ಮಾಡಿದರು.

ಇದಕ್ಕೆ ಸಹಜವಾಗಿಯೇ ಪ್ರತಿಪಕ್ಷಗಳಿಂದ ವಿರೋಧ ವ್ಯಕ್ತವಾಗಿದ್ದರಿಂದ ಮೃತಪಟ್ಟಿರುವವರ ಖಾತೆಗೆ ಅನುದಾನ ಹೋಗಿರುವ ವಿಷಯದಲ್ಲಿ ಕ್ರಮ ವಹಿಸಲು ಸರಕಾರ ಪರಿಷ್ಕರಣೆಗೆ ಮುಂದಾಗಿದೆ ಎಂದು ಸ್ಪಷ್ಟನೆ ನೀಡುವ ಕೆಲಸವನ್ನು ಮಾಡಿತ್ತು. ಆದರೆ ಅದನ್ನೂ ಮೀರಿದ ಲೋಪವಾಗಿರುವ ಬಗ್ಗೆ ಸಿಎಜಿ ಎತ್ತಿ ಹಿಡಿದಿರುವುದು ಇದೀಗ ಇಡೀ ಯೋಜನೆ ಅರ್ಹರಿಗೆ ತಲುಪಿ ದೆಯೇ ಎನ್ನುವ ಅನುಮಾನವನ್ನು ಹುಟ್ಟಿಸುತ್ತಿದೆ.

ಪ್ರಮುಖವಾಗಿ ಸುಮಾರು 19020 ಫಲಾನುಭವಿಗಳು ಒಂದೇ ಬ್ಯಾಂಕ್ ಖಾತೆಗೆ ಅಟ್ಯಾಚ್ ಆಗಿದ್ದಾರೆ. ಒಬ್ಬ ಫಲಾನುಭವಿಗೆ ಒಂದು ಖಾತೆ ಎನ್ನುವ ನಿಯಮವಿದ್ದರೂ, ಈ ಪ್ರಮಾಣದ ಹಣ ಒಂದೇ ಖಾತೆಯೊಂದಿಗೆ ಜೋಡಣೆಯಾಗಿದ್ದರೂ ಈ ಬಗ್ಗೆ ಇಲಾಖೆ ಏಕೆ ಕ್ರಮವಹಿಸಿಲ್ಲ? ಒಂದೇ ಖಾತೆಗೆ ಹಣ ಹರಿದಿರುವುದು ಹೇಗೆ ಎನ್ನುವ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ. ಇದಿಷ್ಟೇ ಅಲ್ಲದೇ, 23,262 ಫಲಾನುಭವಿಗಳಿಗೆ ಬ್ಯಾಂಕ್ ಖಾತೆಯೇ ಇಲ್ಲದಿದ್ದರೂ ಅವರ ಹೆಸರಿನಲ್ಲಿ 46.52 ಕೋಟಿ ರು ಸಂದಾಯವಾಗಿರುವುದು, ಖಾತೆಯಿಲ್ಲದಿದ್ದರೂ ಡಿಬಿಟಿ ಮೂಲಕ ಹಣ ವರ್ಗಾವಣೆಯಾಗಿರುವ ಬಗ್ಗೆ ಪ್ರಶ್ನೆಗಳು ಮೂಡಿವೆ.

ಈ ಬಗ್ಗೆ ಸಿಎಜಿ ಎತ್ತಿರುವ ಪ್ರಶ್ನೆಗಳಿಗೆ ಈಗಾಗಲೇ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸ್ಪಷ್ಟೀಕರಣವನ್ನು ನೀಡಲಾಗಿದ್ದು, ಆಧಾರ್ ಆಧಾರಿತ ಪಾವತಿ ವ್ಯವಸ್ಥೆಯಿಂದ ಯೋಜನೆ ಅನುಷ್ಠಾನವಾಗುವುದರಿಂದ ಜಂಟಿ ಖಾತೆಗಳನ್ನು ಹೊಂದಿರುವ ಫಲಾನುಭವಿಗಳ ಪ್ರಕರಣದಲ್ಲಿ ಒಂದೇ ಖಾತೆಗೆ ಹಣ ಜಮೆಯಾಗಿರುವುದು ಕಂಡುಬಂದಿದೆ. ಇನ್ನು ಫಲಾನುಭವಿಗಳು ತಮ್ಮ ಇಚ್ಛೆಯಂತೆ ಆಧಾರ್ ಜೋಡಣೆಯನ್ನು ಮತ್ತೊಂದು ಬ್ಯಾಂಕ್ ಖಾತೆಗೆ ಬದಲಾಯಿಸಿಕೊಳ್ಳಲು ಸಂಪೂರ್ಣ ಅವಕಾಶವಿರುವುದರಿಂದ, ಬೇರೆ ಬೇರೆ ತಿಂಗಳುಗಳಲ್ಲಿ ಬೇರೆ ಬೇರೆ ಖಾತೆಗಳಿಗೆ ಹಣ ಜಮೆಯಾಗಿರುವ ಸಾಧ್ಯತೆಯಿರುತ್ತದೆ ಎಂದು ಸಮರ್ಥನೆ ನೀಡಿದೆ.

ಆದರೆ ಕರ್ನಾಟಕದ ಮಾದರಿಯಲ್ಲಿಯೇ ತೆಲಂಗಾಣ, ಹಿಮಾಚಲ ಪ್ರದೇಶದಲ್ಲಿಯೂ ಘೋಷಣೆ ಮಾಡಿ, ಅಧಿಕಾರದ ಗದ್ದುಗೆಯನ್ನು ಕಾಂಗ್ರೆಸ್ ಹಿಡಿದಿತ್ತು. ಆದರೆ ಅಧಿಕಾರಕ್ಕೆ ಬಂದು ಎರಡು ವರ್ಷ ಕಳೆಯುವಷ್ಟರಲ್ಲಿ ಈ ಎರಡೂ ರಾಜ್ಯಗಳು ಆರ್ಥಿಕವಾಗಿ ಜರ್ಜರಿತವಾಗಿದೆ. ಚುನಾವಣೆಯಲ್ಲಿನ ಗೆಲುವಿಗೆ ಮಾಡೆಲ್ ರೀತಿ ಕರ್ನಾಟಕದ ಗ್ಯಾರಂಟಿ ಯೋಜನೆಗಳನ್ನು ಮಾಡಿಕೊಂಡ ಇತರೆ ಪಕ್ಷಗಳು, ಚುನಾವಣಾ ತಂತ್ರಗಾರಿಕೆಯ ಭಾಗವಾಗಿ ಹತ್ತು ಹಲವು ಆಕರ್ಷಕ ಘೋಷಣೆಗಳನ್ನು ಮಾಡಿವೆ, ಮಾಡುತ್ತಿವೆ. ಘೋಷಣೆ ಮಾಡಿಕೊಂಡು ಅಧಿಕಾರದ ಗದ್ದುಗೆ ಹಿಡಿದಿರುವ ಅನೇಕ ರಾಜ್ಯಗಳು, ಈಗ ಯೋಜನೆಗಳನ್ನು ಪೂರೈಸಲು ಸಾಲಗಳ ಮೊರೆ ಅಥವಾ ಅನುದಾನ ಕಡಿತದ ಮೊರೆ ಹೋಗುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯ.

ಚುನಾವಣೆಗಳ ಗೆಲುವಿಗೆ ರಾಜಕೀಯ ಪಕ್ಷಗಳಿಂದ ಘೋಷಣೆಯಾಗುತ್ತಿರುವ ಉಚಿತ ಯೋಜನೆಗಳಿಂದ ಆಗುತ್ತಿರುವ ಆರ್ಥಿಕ ಹೊರೆಯ ಬಗ್ಗೆ ಈಗಾಗಲೇ ಆತಂಕದ ಮಾತುಗಳು ಶುರುವಾಗಿದೆ. ಸರಕಾರಗಳ ಅತಿರೇಕದ ಉಚಿತ ಕೊಡುಗೆಗಳು ದೇಶದ ದೀರ್ಘಾವಧಿ ಆರ್ಥಿಕ ಸ್ಥಿರತೆಗೆ ಮಾರಕ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಇತ್ತೀಚೆಗೆ ಆತಂಕ ವ್ಯಕ್ತಪಡಿಸಿತ್ತು.

ಪ್ರಮುಖವಾಗಿ ಬಜೆಟ್‌ನ ಬಹುಪಾಲು ಹಣ ಉಚಿತ ಯೋಜನೆಗಳಿಗೆ ವ್ಯಯವಾಗುವುದರಿಂದ ರಸ್ತೆ, ಶಿಕ್ಷಣ ಮತ್ತು ಆರೋಗ್ಯದಂತಹ ಮೂಲಸೌಕರ್ಯಗಳ ಮೇಲಿನ ಬಂಡವಾಳ ಹೂಡಿಕೆ ಗಣನೀಯವಾಗಿ ಕಡಿಮೆಯಾಗುತ್ತಿದೆ. ಇದರೊಂದಿಗೆ ರಾಜ್ಯಗಳ ಒಟ್ಟು ಸಾಲವು ಜಿಡಿಪಿಯ ಶೇ.29.5ಕ್ಕೆ ಏರುವ ಸಾಧ್ಯತೆಯಿದ್ದು, ಸಾಲದ ಬಡ್ಡಿ ಪಾವತಿಗೇ ಹೆಚ್ಚಿನ ಆದಾಯ ವ್ಯರ್ಥವಾಗುತ್ತಿದೆ ಎನ್ನುವ ಆತಂಕ ವ್ಯಕ್ತಪಡಿಸಿತ್ತು.

ಫ್ರೀಬಿಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆಯ ವೇಳೆ, ಸುಪ್ರೀಂ ಕೋರ್ಟ್ ಸಹ ಚುನಾವಣಾ ಪ್ರಣಾಳಿಕೆಗಳಲ್ಲಿ ರಾಜಕೀಯ ಪಕ್ಷಗಳು ಘೋಷಿಸುವ ಮಿತಿಮೀರಿದ ಉಚಿತ ಕೊಡುಗೆಯ ಸಂಸ್ಕೃತಿ ದೇಶದ ಆರ್ಥಿಕತೆಗೆ ಬಹುದೊಡ್ಡ ಹೊಡೆತ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿತ್ತು. ಕಲ್ಯಾಣ ಯೋಜನೆಗಳ ನೆಪದಲ್ಲಿ ಘೋಷಿಸುವ ರಾಜಕೀಯ ಪಕ್ಷಗಳನ್ನು ಹೇಗೆ ನಿಯಂತ್ರಿಸಲಾಗುತ್ತಿದೆ ಎಂದು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಕೇಂದ್ರ ಸರಕಾರ ಮತ್ತು ಚುನಾವಣಾ ಆಯೋಗಕ್ಕೆ ನೋಟಿಸ್ ಜಾರಿ ಮಾಡಿದೆ.

ಅತಿರೇಕದ ಉಚಿತ ಕೊಡುಗೆಗಳು ರಾಜ್ಯಗಳ ಆರ್ಥಿಕತೆಯನ್ನು ದಿವಾಲು ಮಾಡಬಹುದು ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹದಗೆಡಿಸಬಹುದು ಎಂದು ಹೇಳಿದೆ. ಉಚಿತ ಶಿಕ್ಷಣ, ಆರೋಗ್ಯ ಮತ್ತು ಸಬ್ಸಿಡಿ ಆಹಾರದಂತಹ ಕಲ್ಯಾಣ ಕಾರ್ಯಕ್ರಮಗಳು ಸರಕಾರದ ಸಾಂವಿಧಾನಿಕ ಕರ್ತವ್ಯಗಳಾಗಿವೆ. ಆದರೆ ಚುನಾವಣೆಗಾಗಿ ನೀಡುವ ಗ್ರಾಹಕ ವಸ್ತುಗಳು ಅಥವಾ ಬೇಷರತ್ ನಗದು ವರ್ಗಾವಣೆಗಳು ಆರ್ಥಿಕತೆಗೆ ಹಾನಿಕಾರಕ ಎಂದು ಅಭಿಪ್ರಾಯಪಟ್ಟಿವೆ.

ಕರ್ನಾಟಕದಲ್ಲಿ ಗ್ಯಾರಂಟಿ ಯೋಜನೆ ಜಾರಿಗೊಂಡ ಕೆಲವೇ ತಿಂಗಳಲ್ಲಿ ಈ ಯೋಜನೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ಮೇಲುಸ್ತುವಾರಿಯ ರೀತಿಯಲ್ಲಿ ರಾಜ್ಯ ಸರಕಾರ ಗ್ಯಾರಂಟಿ ಅನುಷ್ಠಾನ ಸಮಿತಿಯನ್ನು ರಚಿಸಿತ್ತು. ಸರಕಾರಿ ಅನುದಾನದಲ್ಲಿ ಈ ಸಮಿತಿಯನ್ನು ರಚಿಸಿ, ಕಾಂಗ್ರೆಸ್ ಕಾರ್ಯಕರ್ತರಿಗೆ ಸರಕಾರಿ ಸೌಲಭ್ಯ ನೀಡಲಾಗುತ್ತಿದೆ ಎನ್ನುವ ಆರೋಪವನ್ನು ಪ್ರತಿಪಕ್ಷಗಳು ಮಾಡಿದ್ದು ಬೇರೆ ಮಾತು. ಆದರೆ ರಾಜ್ಯ, ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ರಚಿಸಲಾಯಿತು.


ರಾಜ್ಯಮಟ್ಟದ ಸಮಿತಿಯ ಅಧ್ಯಕ್ಷರಿಗೆ ಸಚಿವ ಸಂಪುಟ ದರ್ಜೆಯ ಸ್ಥಾನಮಾನ ನೀಡಿದರೆ, ಉಪಾಧ್ಯಕ್ಷರುಗಳಿಗೆ ರಾಜ್ಯ ಸಂಪುಟ ದರ್ಜೆಯ ಸ್ಥಾನಮಾನವನ್ನು ಸರಕಾರ ನೀಡಿತ್ತು. ರಾಜ್ಯ ಮಟ್ಟದ ಸಮಿತಿ ರಾಜ್ಯಾದ್ಯಂತ ಸಂಚಾರ ಮಾಡಿ, ಯೋಜನೆಗಳ ಸ್ಥಿತಿ-ಗತಿ, ಅರ್ಹರಿಗೆ ಯೋಜನೆಗಳು ತಲುಪುತ್ತಿವೆಯೇ ಎನ್ನುವುದನ್ನು ಪರಾಮರ್ಶೆ ನಡೆಸಬೇಕಿತ್ತು. ಆದರೆ ಗ್ಯಾರಂಟಿ ಅನುಷ್ಠಾನ ಸಮಿತಿಯ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ಹೊರತುಪಡಿಸಿದರೆ, ಇನ್ಯಾರು ಕಾರ್ಯ ನಿರ್ವಹಿಸುತ್ತಿದ್ದಾರೆ ಎನ್ನುವ ಪ್ರಶ್ನೆಗೆ ಹಲವರ ಬಳಿ ಉತ್ತರವಿಲ್ಲ.

ಕೆಲವೊಂದಷ್ಟು ಕಡೆ ಗ್ಯಾರಂಟಿ ಸಮಿತಿ ಅಧ್ಯಕ್ಷ ಎಚ್.ಎಂ. ರೇವಣ್ಣ ಸಭೆ ನಡೆಸಿದ್ದಾರೆ. ಆದರೆ ಇನ್ನುಳಿದ ಉಪಾಧ್ಯಕ್ಷರು, ಸದಸ್ಯರು ಏನು ಮಾಡುತ್ತಿದ್ದಾರೆ ಎನ್ನುವ ಪ್ರಶ್ನೆಗೆ ಉತ್ತರವಿಲ್ಲ. ಒಂದು ವೇಳೆ ಇದು ನಿಜವೇ ಆದರೂ, ಕೋಟ್ಯಂತರ ರುಪಾಯಿ ವ್ಯಯಿಸಿ, ಸ್ಥಾಪಿಸಿರುವ ಸಮಿತಿಯ ಮೂಲ ಉದ್ದೇಶವೇ ಮರೆಯಾದಂತಾಯಿತು.

ಇಡೀ ದೇಶಕ್ಕೆ ಮಾದರಿಯಾಗುವ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದ ಕರ್ನಾಟಕದ ಕಾಂಗ್ರೆಸ್ ಇದೀಗ, ಈ ಯೋಜನೆಯಲ್ಲಿರುವ ಲೋಪಗಳನ್ನು ಸರಿಪಡಿಸುವಲ್ಲಿಯೂ ಮಾದರಿಯಾಗಬೇಕಿದೆ. ಗೃಹಲಕ್ಷ್ಮೀ ಯೋಜನೆಯ ಅನುದಾನ ಮೃತಪಟ್ಟವರ ಖಾತೆಗೆ ಹೋಗಿರುವುದು ತಿಳಿದಾಗ, ಮೃತಪಟ್ಟವರ ಬಗ್ಗೆ ಮಾಹಿತಿ ನೀಡಬೇಕಿರುವುದು ಕುಟುಂಬ ಸದಸ್ಯರ ಕರ್ತವ್ಯ. ಆದ್ದರಿಂದ ಇದು ವ್ಯವಸ್ಥೆಯ ಲೋಪಕ್ಕಿಂತ ಹೆಚ್ಚಾಗಿ ಮೃತಪಟ್ಟ ಕುಟುಂಬಗಳಿಂದ ಆಗಿರುವ ಲೋಪವೆಂದು ಸಮರ್ಥಿಸಿಕೊಳ್ಳುವ ಕೆಲಸವನ್ನು ಸರಕಾರ ಮಾಡಿತ್ತು. ಆದರೀಗ, ಒಂದೇ ಖಾತೆಗೆ ಸಾವಿರಾರು ಜನರ ಹೆಸರು ಲಿಂಕ್ ಆಗಿರುವುದು, ಕೆಲ ಸಾವಿರ ಖಾತೆಗೆ ತಿಂಗಳಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಹಣ ಜಮೆಯಾಗಿರುವುದು ಸಿಎಜಿ ವರದಿಯಲ್ಲಿ ಪ್ರಸ್ತಾಪವಾಗಿರುವುದು ವ್ಯವಸ್ಥೆ ಯಲ್ಲಿರುವ ಲೋಪವೇ ಕಾರಣ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗಿದೆ.

ಗ್ಯಾರಂಟಿ ಯೋಜನೆಯಲ್ಲಿ ಆಗುತ್ತಿರುವ ಲೋಪಗಳನ್ನು ಸರಿಪಡಿಸಿಕೊಳ್ಳಲು ಈಗ ಪರಿಷ್ಕರಣೆ ಮಾಡಲು ಮುಂದಾಗಿರುವುದು ಸ್ವಾಗತಾರ್ಹ. ಪರಿಷ್ಕರಣೆಯ ಸಮಯದಲ್ಲಿ ಅರ್ಹರಿಗೆ ಸಿಗುವಂತೆ ಮಾಡಬೇಕಾದ ಕೆಲಸವನ್ನು ಸರಕಾರ ಮಾಡಬೇಕಿದೆ. ಆದರೆ ಪರಿಷ್ಕರಣೆಯ ಸಮಯದಲ್ಲಿ ಅರ್ಹರು ಎಂದು ಗುರುತಿಸಲು ಇರುವ ಬಿಪಿಎಲ್‌ಗಳಲ್ಲಿಯೇ ಲಕ್ಷಾಂತರ ಕಾರ್ಡ್‌ಗಳು ಬೋಗಸ್ ಎನ್ನುವ ಆರೋಪಗಳಿವೆ. ಸದ್ಯದ ಪರಿಸ್ಥಿತಿಯಲ್ಲಿ ಎಲ್ಲವನ್ನೂ ಶುದ್ಧೀಕರಣ ಮಾಡಲು ಸಾಧ್ಯವೇ ಎನ್ನುವ ಪ್ರಶ್ನೆಗೆ ಮೌನವೇ ಉತ್ತರವಾಗಿದೆ.

**– ರಂಜಿತ್ ಎಚ್ ಅಶ್ವತ್ಥ್**






# ಪ್ರಾಕೃತಿಕ ಸೊಬಗು ತಾಣ ಸಕಲೇಶಪುರ




ಸಕಲೇಶಪುರ ಕರ್ನಾಟಕದ ಹಾಸನ ಜಿಲ್ಲೆಯಲ್ಲಿರುವ ಒಂದು ಸುಂದರ ಮಲೆನಾಡು ಪ್ರವಾಸಿ ತಾಣವಾಗಿದೆ. ಪಶ್ಚಿಮ ಘಟ್ಟಗಳ ಮಡಿಲಿನಲ್ಲಿ ನೆಲೆಸಿರುವ ಈ ಪ್ರದೇಶವು ಹಚ್ಚಹಸಿರಿನ ಬೆಟ್ಟಗಳು, ಕಾಫಿ ತೋಟಗಳು, ಮಸಾಲೆ ಬೆಳೆಗಳು, ಜಲಪಾತಗಳು, ದಟ್ಟ ಅರಣ್ಯಗಳು ಮತ್ತು ತಂಪಾದ ಹವಾಮಾನದಿಂದ ಪ್ರಸಿದ್ಧವಾಗಿದೆ. ಬೆಂಗಳೂರಿನಿಂದ ಸುಮಾರು 220 ಕಿ.ಮೀ. ದೂರದಲ್ಲಿರುವ ಈ ತಾಣವು ವಾರಾಂತ್ಯದ ಪ್ರವಾಸಕ್ಕೆ ಅತ್ಯುತ್ತಮ ಆಯ್ಕೆಯಾಗಿದೆ.

**ಭೌಗೋಳಿಕ ವೈಶಿಷ್ಟ್ಯ:** ಸಕಲೇಶಪುರವು ಸಮುದ್ರಮಟ್ಟದಿಂದ ಸುಮಾರು 950 ಮೀಟರ್ ಎತ್ತರದಲ್ಲಿದೆ. ಈ ಪ್ರದೇಶವು ಪಶ್ಚಿಮ ಘಟ್ಟದ ಜೀವ ವೈವಿಧ್ಯಮಯ ಪ್ರದೇಶವಾಗಿದ್ದು, ವರ್ಷಪೂರ್ತಿ ಹಸಿರಿನಿಂದ ಕಂಗೊಳಿಸುತ್ತದೆ. ಇಲ್ಲಿ ಉತ್ತಮ ಮಳೆಯಾಗುವುದರಿಂದ ಪ್ರಕೃತಿ ಸದಾ ಚೈತನ್ಯದಿಂದ ಕೂಡಿರುತ್ತದೆ.

**ಇತಿಹಾಸ:** ಸಕಲೇಶಪುರದ ಹೆಸರು ಶಾಕಲೇಶ್ವರ ದೇವಾಲಯದಿಂದ ಬಂದಿದೆ ಎಂದು ಹೇಳಲಾಗುತ್ತದೆ. ಈ ಪ್ರದೇಶವು ಹೊಯ್ಸಳರ ಹಾಗೂ ನಂತರ ಟಿಪ್ಪು ಸುಲ್ತಾನರ ಆಳ್ವಿಕೆಯಲ್ಲಿ ಮಹತ್ವ ಪಡೆದಿತ್ತು. ಟಿಪ್ಪು ಸುಲ್ತಾನರು ನಿರ್ಮಿಸಿದ ಮಂಜರಾಬಾದ್ ಕೋಟೆ ಇಲ್ಲಿನ ಪ್ರಮುಖ ಐತಿಹಾಸಿಕ ಸ್ಮಾರಕವಾಗಿದೆ.

**ಪ್ರಮುಖ ಪ್ರವಾಸಿ ತಾಣಗಳು**

1. ಮಂಜರಾಬಾದ್ ಕೋಟೆ ನಕ್ಷತ್ರಾಕಾರದ ಕೋಟೆ, ಬೆಟ್ಟಗಳ ಅದ್ಭುತ ನೋಟ.
2. ಬಿಸಿಲೆ ಘಾಟ್ ಪಶ್ಚಿಮ ಘಟ್ಟದ ವಿಹಂಗಮ ದೃಶ್ಯಗಳಿಗೆ ಪ್ರಸಿದ್ಧ.
3. ಜೇನುಕಲ್ಲು ಗುಡ್ಡ ಚಾರಣ (ಟ್ರೆಕ್ಕಿಂಗ್) ಪ್ರಿಯರಿಗೆ ಮೆಚ್ಚಿನ ತಾಣ.



4. ಮಂಜೇಹಳ್ಳಿ ಜಲಪಾತ ಮಳೆಗಾಲದಲ್ಲಿ ಅತ್ಯಂತ ಸುಂದರವಾಗಿ ಕಾಣುತ್ತದೆ.
5. ಶಾಕಲೇಶ್ವರ ದೇವಾಲಯ ಪುರಾತನ ಧಾರ್ಮಿಕ ಕ್ಷೇತ್ರ.
6. ಕಾಫಿ ಮತ್ತು ಮಸಾಲೆ ತೋಟಗಳು ಕಾಫಿ, ಏಲಕ್ಕಿ, ಮೆಣಸು ಹಾಗೂ ಚಹಾ ತೋಟಗಳ ನೈಸರ್ಗಿಕ ಸೊಬಗು.

**ನೈಸರ್ಗಿಕ ಸೌಂದರ್ಯ:** ಸಕಲೇಶಪುರದ ಎಲ್ಲೆಡೆ ಹಸಿರು ಬೆಟ್ಟಗಳು, ಮೋಡಗಳ ಹೊದಿಕೆ, ತಂಪಾದ ಗಾಳಿ ಮತ್ತು ಹಕ್ಕಿಗಳ ಕಲರವ ಮನಸ್ಸಿಗೆ ನೆಮ್ಮದಿಯನ್ನು ನೀಡುತ್ತದೆ. ಮಳೆಗಾಲದಲ್ಲಿ ಈ ಪ್ರದೇಶವು ಇನ್ನಷ್ಟು ಆಕರ್ಷಕವಾಗಿ ಕಾಣುತ್ತದೆ. ಪ್ರಕೃತಿ ಛಾಯಾಗ್ರಹಣ ಮತ್ತು ಪಕ್ಷಿ ವೀಕ್ಷಣೆಗೆ ಇದು ಅತ್ಯುತ್ತಮ ಸ್ಥಳವಾಗಿದೆ.

**ಸಾಹಸ ಚಟುವಟಿಕೆಗಳು:** ಟ್ರೆಕ್ಕಿಂಗ್, ಕ್ಯಾಂಪಿಂಗ್, ಪ್ರಕೃತಿ ವೀಕ್ಷಣೆ, ಛಾಯಾಗ್ರಹಣ, ಕಾಫಿ ತೋಟಗಳ ಸುತ್ತಾಟ, ಜಲಪಾತಗಳ ವೀಕ್ಷಣೆ.

ಅಲ್ಲಿನ ಕೃಷಿ : ಸಕಲೇಶಪುರವು ಕಾಫಿ, ಏಲಕ್ಕಿ, ಮೆಣಸು, ಅಡಿಕೆ ಮತ್ತು ಚಹಾ ಬೆಳೆಗಳಿಗೆ ಪ್ರಸಿದ್ಧವಾಗಿದೆ. ಇಲ್ಲಿನ ಕಾಫಿ ತೋಟಗಳು ದೇಶ-ವಿದೇಶಗಳಲ್ಲಿ ಹೆಸರು ಪಡೆದಿವೆ.

**ಹವಾಮಾನ :**

**ಅಕ್ಟೋಬರ್ ಫೆಬ್ರವರಿ:** ಪ್ರವಾಸಕ್ಕೆ ಅತ್ಯುತ್ತಮ ಸಮಯ.

**ಜೂನ್ ಸೆಪ್ಟೆಂಬರ್:** ಮಳೆಗಾಲದಲ್ಲಿ ಹಸಿರು



ಸೌಂದರ್ಯ ಹೆಚ್ಚಾಗುತ್ತದೆ.

**ಮಾರ್ಚ್ ಮೇ:** ವಾತಾವರಣ ಆಹ್ಲಾದಕರವಾಗಿರುತ್ತದೆ.

**ತಲುಪಬಹುದು ಹೀಗೆ :**

**ರಸ್ತೆ ಮಾರ್ಗ:** ಬೆಂಗಳೂರುಮಂಗಳೂರು ರಾಷ್ಟ್ರೀಯ ಹೆದ್ದಾರಿ (ಎನ್‌ಎಚ್75) ಮೂಲಕ.

**ರೈಲು ಮಾರ್ಗ:** ಸಕಲೇಶಪುರ ರೈಲು ನಿಲ್ದಾಣ.

**ವಿಮಾನ ಮಾರ್ಗ:** ಸಮೀಪದ ವಿಮಾನ ನಿಲ್ದಾಣ ಮಂಗಳೂರು.

**ಪ್ರವಾಸದ ಅನುಭವ:** ಸಕಲೇಶಪುರಕ್ಕೆ ಭೇಟಿ ನೀಡಿದಾಗ ಹಚ್ಚಹಸಿರಿನ ಬೆಟ್ಟಗಳು, ಕಾಫಿ ತೋಟಗಳು, ತಂಪಾದ ಗಾಳಿ ಮತ್ತು ಮಂಜಿನಿಂದ ಆವೃತವಾದ ಪ್ರಕೃತಿ ಮನಸ್ಸಿಗೆ ಅಪಾರ ಸಂತೋಷವನ್ನು ನೀಡುತ್ತದೆ. ಮಂಜರಾಬಾದ್ ಕೋಟೆಯಿಂದ ಕಾಣುವ ನಿಸರ್ಗದ ದೃಶ್ಯಗಳು ಹಾಗೂ ಬಿಸಿಲೆ ಘಾಟ್‌ನ ಸೌಂದರ್ಯ ಮರೆಯಲಾಗದ ಅನುಭವವನ್ನು ಉಂಟುಮಾಡುತ್ತದೆ. ಸ್ಥಳೀಯರ ಆತಿಥ್ಯ, ಮಲೆನಾಡಿನ ಸಾಂಪ್ರದಾಯಿಕ ಆಹಾರ ಮತ್ತು ಶಾಂತ ವಾತಾವರಣ ಈ ಪ್ರವಾಸವನ್ನು ಇನ್ನಷ್ಟು ಸ್ಮರಣೀಯವಾಗಿಸುತ್ತದೆ.

ಸಕಲೇಶಪುರವು ಕರ್ನಾಟಕದ ಅತ್ಯಂತ ಸುಂದರ ಮಲೆನಾಡು ಪ್ರವಾಸಿ ತಾಣಗಳಲ್ಲಿ ಒಂದಾಗಿದೆ. ಪ್ರಕೃತಿ ಸೌಂದರ್ಯ, ಐತಿಹಾಸಿಕ ಪರಂಪರೆ, ಸಾಹಸ ಚಟುವಟಿಕೆಗಳು ಮತ್ತು ಆಹ್ಲಾದಕರ ಹವಾಮಾನದಿಂದಾಗಿ ವಿದ್ಯಾರ್ಥಿಗಳು, ಕುಟುಂಬಗಳು ಹಾಗೂ ಪ್ರಕೃತಿ ಪ್ರಿಯರು ಒಮ್ಮೆಯಾದರೂ ಭೇಟಿ ನೀಡಬೇಕಾದ ಅದ್ಭುತ ಸ್ಥಳವಾಗಿದೆ.

**– ರಮೇಶ ನಾಯ್ಕ, ಉಪ್ಪುಂದ,** ಬೈಂದೂರು

**ಅರವತ್ತರ ಇಳಿವಯಸ್ಸಿನಲ್ಲಿರುವ ಅಲ್ಕಾ ಯಾಜ್ಞಿಕ್ ಸಿನಿಮಾಗಳಿಗೆ ಹಾಡಲಿ ಅಂತೇನೂ ದುರಾಸೆ ಇಲ್ಲ ನಮಗೆ. ಆಕೆ ಈಗಾಗಲೇ ಕೊಟ್ಟಿರುವ ಹಾಡುಗಳೇ ಸಾಕಷ್ಟಿವೆ. ಅದನ್ನೇ ಸಾವಿರ ಸಾವಿರ ಬಾರಿ ಕೇಳಿ ತಣಿಯಬಹುದು. ಇಷ್ಟು ಹಾಡುಗಳನ್ನು ಕೊಟ್ಟು, ನಮ್ಮ ಭಾವತಂತಿಗಳನ್ನು ಮೀಟಿದಾಕೆಗೆ ಇಂಥ ಅನ್ಯಾಯ ಯಾಕೆ ಅಂತಷ್ಟೇ ಕಂಪ್ಲೇಂಟು**

# ಆ ದೇವರಿಗೂ ಕೆಲವೊಮ್ಮೆ ವಿಕೃತ ಖುಷಿ!

ಪದಸಾಗರ
ಹೀಗೊಂದು ಆಲೋಚನೆ ಆಗಾಗ ಬರ್ತಾ ಇರುತ್ತೆ. ಇದ್ದಕ್ಕಿದ್ದಂತೆ ಕಿವುಡಾಗಿ ಬಿಟ್ಟರೆ ಜಗತ್ತು ಬದುಕು ಆ ಕ್ಷಣದಿಂದ ಹೇಗನಿಸಬಹುದು? ಇದ್ದಕ್ಕಿದ್ದಂತೆ ಅಂಥತ್ವ ಬಂದುಬಿಟ್ಟರೆ, ಸಡನ್ನಾಗಿ ಮೂಗನಾಗಿ ಬಿಟ್ಟರೆ ಆ ಫೀಲಿಂಗ್ ಹೇಗಿರುತ್ತದೆ? ಇಷ್ಟು ವರ್ಷದಿಂದ ಮಾತನಾಡುತ್ತಿರುವ ಕನ್ನಡ ಪೂರ್ತಿಯಾಗಿ ಮರೆತು ಹೋಗಿ ಬಿಟ್ಟರೆ, ಈ ಭಾಷೆ ಹೇಗೆ ಸೌಂಡ್ ಆಗಬಹುದು? ಅರ್ಥವಾಗದ ವಿದೇಶಿ ಭಾಷೆಯಂತನಿಸಬಹುದಾ? ಈತನಕ ಬರೆದು ಓದಿ ಮಾಡಿರುವ ಕನ್ನಡ ಲಿಪಿ ಏಕಾಏಕಿ ಅಪರಿಚಿತವಾಗಿಬಿಟ್ಟರೆ, ಅಕ್ಷರಗಳು ಹೇಗೆ ಕಾಣಿಸಬಹುದು? ಮಲಯಾಳಂ ತಮಿಳುಗಳ ಥರ ಯಾವುದೋ ಆಕೃತಿಗಳಂತಷ್ಟೇ ಕಾಣಬಹುದಾ? ಒಂದೇ ಸಲ ನಾಲಗೆ ರುಚಿ ಕಳ್ಕೊಂಡುಬಿಟ್ಟಿದೆ ಅಂತ ಕೊರೋನಾ ಟೈಮಲ್ಲಿ ಸೋಂಕಿತರು ಹೇಳುತ್ತಿದ್ದಾಗ, ಆ ಅನುಭವಕ್ಕಾದರೂ ಒಮ್ಮೆ ಕೊರೋನಾ ಬರಬಾರದೇ ಅಂತ ಹಪಹಪಿಸಿದ್ದೆ.

ಕುರುಡು ಕಿವುಡು ಮತ್ತು ಮೂಗನಾದರೆ ಆ ಫೀಲಿಂಗ್ ಹೇಗಿರುತ್ತದೆ ಎಂಬುದನ್ನು ಪ್ರಾಯೋಗಿಕವಾಗಿ ಅನುಭವಿಸಬಹುದು. ಕಿವಿಗೆ ಹತ್ತಿ ತುರುಕಿಕೊಂಡು ಏನೂ ಕೇಳಿಸದಂತೆ ನಿಶ್ಶಬ್ದವಾಗಿಸಿ ಕೊಳ್ಳಬಹುದು. ಕಣ್ಣು ಮುಚ್ಚಿಕೊಂಡರಾಯ್ತು. ಮಾತನಾಡುವುದಿಲ್ಲ ಅಂದುಕೊಂಡರಾಯ್ತು. ಆದರೆ ಆ ಸ್ಥಿತಿ ಬದುಕಿನ ಅನಿವಾರ್ಯವಾಗಿ ಹೋದರೆ? ಅನಿರೀಕ್ಷಿತವಾಗಿ ಆ ಪರಿಸ್ಥಿತಿಗೆ ಬಲಿಯಾದರೆ? ಆ ಬದುಕನ್ನು ಊಹಿಸಲೂ ಅಸಾಧ್ಯ ಅಲ್ಲವಾ? ಹಿರಿಯ ನಟ ಬಾಲಕೃಷ್ಣನಿಗೆ ಕಿವಿ ಕೇಳಿಸುತ್ತಿರಲಿಲ್ಲವಂತೆ.

ಆದರೂ ನೂರಾರು ಚಿತ್ರಗಳಲ್ಲಿ ಎದುರಿನವರ ನಟನೆ, ತುಟಿಚಲನೆ ನೋಡಿ ಅರ್ಥ ಮಾಡಿಕೊಂಡು ಭಾವಪೂರ್ಣವಾಗಿ ಅಭಿನಯಿಸುತ್ತಿದ್ದರಂತೆ ಎಂಬ ವಿಷಯ ಗೊತ್ತಾದಾಗ ಅಚ್ಚರಿಯ ಜತೆಗೆ ಮನಸು ಭಾವುಕವಾಗಿತ್ತು. ಬಾಲಣ್ಣನನ್ನು ಅಂದಿನ ತನಕ ನೋಡಿದಂತೆ ಕೇವಲ ನಟನಾಗಿ ನೋಡಲಾಗಲೇ ಇಲ್ಲ.

ರವಿ ಬೆಳಗೆರೆ ತಮ್ಮ ಖಾಸ್ ಬಾತ್ ಅಂಕಣದಲ್ಲಿ ಮಣಿಕಾಂತನ ನಿಶ್ಶಬ್ದ ಲೋಕದಂದು ಸ್ಫೋಟ ಎಂಬ ನಿಜಕಥೆಯೊಂದನ್ನು ಬರೆದಾಗ, ಕಣ್ತುಂಬಿಕೊಂಡು ಓದಿದ್ದೆ. ಮಣಿಕಾಂತನ ಜೀವನ ಚಿತ್ರವನ್ನು ಕಲ್ಪಿಸಿಕೊಂಡಿದ್ದೆ. ಕೋಶಿಶ್, ಶೋರ್, ಖಾಮೋಷಿ ಚಿತ್ರಗಳು ಕಣ್ಮುಂದೆ ಬಂದಿದ್ದವು.

ಮಣಿಕಾಂತ್- ಪುಟ್ಟಿ ಪಾತ್ರಗಳು ಸಂಜೀವ್ ಕುಮಾರ್ ಜಯಾ ಬಚ್ಚನ್ ಆಗಿ ಕಾಣಿಸಿದ್ದವು. ಮಣಿಕಾಂತನನ್ನೊಮ್ಮೆ ನೋಡಬೇಕು ಎಂದು ತೀವ್ರವಾಗಿ ಅನಿಸಿಬಿಟ್ಟಿತ್ತು. ನಂತರ ಬದುಕು ಅವರನ್ನು ನನಗೆ ಅಣ್ಣನಂಥ ಗೆಳೆಯನನ್ನಾಗಿಸಿತು. ಅವರ ನಿಶ್ಶಬ್ದ ಪ್ರಪಂಚವನ್ನು ಹತ್ತಿರದಿಂದ ನೋಡುವ ಅನುಭವಿಸುವ ಅವಕಾಶ ಒದಗಿಸಿತು. ಅವರ ಜಗತ್ತಿನ ಸುಖಗಳು, ಕಷ್ಟಗಳು ಎಲ್ಲವೂ ತಕ್ಕಮಟ್ಟಿಗೆ ಅರ್ಥವಾಗುತ್ತಾ ಹೋಯ್ತು. ಆದರೆ ಕೆಲವು ಬಾರಿ ಜಗತ್ತಿನ ಕ್ರೌರ್ಯ ಮತ್ತು ಸೌಂದರ್ಯಗಳಿರುವುದೇ ಅದರಲ್ಲಿ ಅನಿಸಿಬಿಡುತ್ತದೆ. ಹಾಡು ಕೇಳಿಸಿಕೊಳ್ಳಲಾಗದ ಮಣಿಕಾಂತ್ ಕೈಲಿ ಹಾಡು ಹುಟ್ಟಿದ ಸಮಯ ಎಂಬ ಅದ್ಭುತ ಪುಸ್ತಕ ಬರೆಸಿಬಿಡುತ್ತದೆ.

ಸರ್ವೇಂದ್ರಿಯಗಳು ಅದ್ಭುತವಾಗಿದ್ದರೂ ಬರೆಯಲಾಗದಂಥ ಅದ್ಭುತ ಬರಹಗಳನ್ನು ತಮ್ಮ ಕಲ್ಪನಾಶಕ್ತಿ ಬಳಸಿ, ತಮ್ಮ ಭಾವುಕತೆ ಬಳಸಿ, ಯಾವುದೋ ಅತೀಂದ್ರಿಯ ಶಕ್ತಿಯಿಂದೆಂಬಂತೆ ಬರೆದು ರಾಜ್ಯದ ಬೆಸ್ಟ್ ಸೆಲ್ಲರ್ ಪುಸ್ತಕಗಳ ಕರ್ತೃ ಆಗಿಬಿಡುತ್ತಾರೆ ಮಣಿಕಾಂತ್. ಆದರೂ ನಮ್ಮಂಥ ವರ ಕೊರಗು, ದೇವರೆಡೆಗಿನ ಕಂಪ್ಲೇಂಟ್ ತೀರುವುದಿಲ್ಲ. ಮಣಿಕಾಂತ್‌ಗೆ ಇದೊಂದು ವಿಷಯದಲ್ಲಿ ದೇವರು ಹೀಗೆ ಮಾಡಬಾರದಿತ್ತು ಎಂದು ಅನಿಸುತ್ತಲೇ ಇರುತ್ತದೆ.

ಇವೆಲ್ಲವೂ ಮನಸಿನ ಒರಳುಕಲ್ಲಿನಲ್ಲಿ ರುಬ್ಬಲಾರಂಭಿಸಿದ್ದು ಮೊನ್ನೆ ಅಲ್ಕಾ ಯಾಜ್ಞಿಕ್‌ಳನ್ನು ಪದ್ಮಭೂಷಣ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕಂಡಾಗ. ಹಿನ್ನೆಲೆ ಗಾಯಕಿಯರು ಅಂದರೆ ಅವರು ನೋಡೋಕೆ ಅಷ್ಟರಲ್ಲೇ ಇರ್ತಾರೆ ಅನಿಸಿದ್ದ ಕಾಲವದು. ಲತಾ ಮಂಗೇಶ್ಕರ್, ಆಶಾ ಭೋಸ್ಲೆ, ಎಸ್ ಜಾನಕಿ, ಎಲ್ಲರೂ ನಮಗೆ ಧ್ವನಿಯಿಂದಷ್ಟೇ ಇಷ್ಟವಾಗಿದ್ದರು.

ನೋಡೋಕೆ ಎಂದಿಗೂ ಗ್ಲಾಮರಸ್ ಅನಿಸಿದ್ದೇ ಇಲ್ಲ. ಹೀಗಿದ್ದೂ ಅಷ್ಟೆಲ್ಲ ರೊಮ್ಯಾಂಟಿಕ್ ಆಗಿ ಹಾಡೋಕೆ ಹೇಗೆ ಸಾಧ್ಯ, ಆ ಇಂಪಿನ ಧ್ವನಿ ಹೊರಡಿಸೋಕೆ ಹೇಗೆ ಸಾಧ್ಯ ಎಂಬ ಭಾವ ಮೂಡಿಸಿದ್ದರು. ಆ ಹೊತ್ತಲ್ಲಿ ಅನುರಾಧಾ ಪೌಡ್ವಾಲ್ ಬಂದಾಗ, ಧ್ವನಿಯ ಜತೆಗೆ ತನ್ನ ಸಾಂಪ್ರದಾಯಿಕ ಲುಕ್ಕಿನಿಂದ ಒಂದು ಲೆವೆಲ್ಲಿನ ಸುಂದರಿಯೇ ಅನಿಸಿದ್ದಳು. ಆದರೆ ಆಕೆಯ ಬೆನ್ನುಬೆನ್ನ ಬಂದಳಲ್ಲ ಅಲ್ಕಾ ಯಾಜ್ಞಿಕ್, ಧ್ವನಿಯಿಂದ ಪರಿಚಯವಾದಾಕೆಯನ್ನು ಹೀಗಿರಬಹುದು ಅಂತ ಊಹಿಸಿಯೇ ಇರಲಿಲ್ಲ.

ಆ ನೈಸ್ ನೈಸ್ ಜಾರು ತಲೆಗೂದಲು, ಬೆಳ್ಳನೆಯ ಮೈಬಣ್ಣ, ಸಲ್ವಾರ್ ಧರಿಸಿದ ಅಲ್ಕಾ ಯಾಜ್ಞಿಕ್ ನೋಡಿದಾಗ ಸಿಂಗರ್ ಹೀಗೂ ಇರಬಹುದು ಎಂದು ಮೊದಲ ಬಾರಿಗೆ ಅನಿಸಿತ್ತು. ಅಲ್ಲಿ ತನಕ ಸಿನಿಮಾದಲ್ಲಿ ಹಾಡೊಂದನ್ನು ನೋಡಿದಾಗ ಹೀರೋಯಿನ್ ಮಾತ್ರ ಕಾಣುತ್ತಿದ್ದಳು. ಅಲ್ಕಾಳನ್ನು ನೋಡಿದ ನಂತರ ಆಕೆಯ ಗಾಯನದಲ್ಲಿ ಅದ್ಯಾರೇ ಹೀರೋಯಿನ್ ತೆರೆ ಮೇಲಿದ್ದರೂ ತೆರೆ ಹಿಂದಿನ ಅಲ್ಕಾ ಯಾಜ್ಞಿಕ್ ಕೂಡ ಕಣ್ಣೆದುರು ಬಂದು ಬಂದು ಹೋಗುತ್ತಿದ್ದಳು.

ಶ್ರೇಯಾ ಘೋಷಾಲ್ ಎಂಬ ಅದ್ಭುತ ಚೆಲುವೆ ಮತ್ತು ಅತ್ಯದ್ಭುತ ಕಂಠದ ಗಾಯಕಿ ಬರುವ ತನಕವೂ ಅಲ್ಕಾ ಹೀರೋಯಿನ್ ಮಟೀರಿಯಲ್ ಅನಿಸುವ ಗಾಯಕಿಯೇ ಅನಿಸುತ್ತಿದ್ದಳು. ಗಾಯಕಿ ಮೇಲೂ ಕ್ರಶ್ ಆಗುವಂತಿದ್ದಳು ಅಲ್ಕಾ ಯಾಜ್ಞಿಕ್.



ಆಕೆ ಹಾಡಿದ್ದ ಹಾಡುಗಳಾದರೂ ಎಂಥೆಂಥವು. ಏಕ್ ದೋ ತೀನ್.., ಚುರಾ ಕೇ ದಿಲ್ ಮೇರಾ, ಟಿಪ್ ಟಿಪ್ ಬರ್ಸಾ ಪಾನಿ.., ಉಹೂಂ.. ಪಟ್ಟಿ ಮಾಡ್ತಾ ಹೋದ್ರೆ, ಇಡೀ ಪೇಪರ್ ಸಾಲಲಿಕ್ಕಿಲ್ಲ. ಎರಡೂವರೆ ಸಾವಿರ ಹಾಡುಗಳಲ್ಲಿ, ಏನಿಲ್ಲ ಅಂದ್ರೂ, ಒಂದು ಸಾವಿರ ಹಾಡುಗಳನ್ನು ಇಷ್ಟ ಇಷ್ಟ ಅಂತ ಪಟ್ಟಿ ಮಾಡಬೇಕಾಗುತ್ತದೆ.

ದೇವರಿಗೆ ಯಾಕೆ ಇಂಥದ್ದೊಂದು ಕೆಟ್ಟ ಆಟ ಆಡೋ ಚಟ? ಕಟ್ಟುಕಥೆ ಬರೆಯೋವ್ನಿಗೂ, ಡಾರ್ಕ್ ಸ್ಟೋರಿಗಳನ್ನು ಬರೆಯೋವ್ನಿಗೂ ತನ್ನ ಕಥೆಯ ಕೆಲವು ಪಾತ್ರಗಳ ಮೇಲೆ ದಯೆ, ಕರುಣೆ ಪ್ರೀತಿ ಇರುತ್ತದೆ. ಅವುಗಳಿಗೆ ಕೆಡುಕು ಮಾಡುವುದಿಲ್ಲ. ಆದರೆ ದೇವರ ಲೆಕ್ಕಾಚಾರ ತೀರಾ ಕ್ರೂರ. ಸಾವಿರಾರು ಹಾಡುಗಳನ್ನು ಹಾಡಿದಾಕೆಗೆ, ಕೋಟ್ಯಂತರ ಕಿವಿಗಳನ್ನು ಇಂಪುಸ್ವರದಿಂದ ತಂಪು ಮಾಡಿದಾಕೆಗೆ, ಇದ್ದಕ್ಕಿದ್ದಂತೆ ಕಿವಿಯೇ ಕೇಳಿಸದಂತೆ ಮಾಡಿಬಿಡುತ್ತಾನೆ. ಜಗತ್ತು ಆಕೆಯ ಹಾಡುಗಳನ್ನು ಕೇಳಿ ನಲಿಯುತ್ತಿದ್ದರೆ, ಆಕೆಗೆ ಮಾತ್ರ ಇಡೀ ಜಗತ್ತೇ ನಿಶ್ಶಬ್ದ.

ಹಾಡು ಬಿಡಿ, ಮಾತೂ ಕೇಳಿಸುವುದಿಲ್ಲ. ಅದೊಂದು ದಿನ ವಿಮಾನದಿಂದ ಇಳಿದು ಹೊರಬರುವ ತನಕ ಎಲ್ಲವೂ ಕೇಳುತ್ತಿದ್ದ ಕಿವಿಗಳಿಗೆ ದಿಢೀರ್ ನಿಶ್ಶಬ್ದ ಆವರಿಸುತ್ತದೆ. ಸಂಪೂರ್ಣ ನಿಶ್ಶಬ್ದ. ಮೌನ! ತನಗೇನೂ ಕೇಳುತ್ತಿಲ್ಲ ಅಂತ ಮನಸು ಒಪ್ಪಿಕೊಳ್ಳಲು, ನಂಬಲು ಅಷ್ಟು ಸುಲಭವಾಗಿ ಸಾಧ್ಯವಾ? ಉಹೂಂ. ವೈದ್ಯರು ಆಕೆಯ ಶ್ರವಣ ಸಮಸ್ಯೆಗೆ ಇಟ್ಟ ಹೆಸರು ಸೆನ್ಸರಿನ್ಯೂರೋ ಹಿಯರಿಂಗ್ ಲಾಸ್ ಅಂತ. ಗಾಯಕಿಯೊಬ್ಬಳಿಗೆ ಕೇವಲ ಧ್ವನಿಪೆಟ್ಟಿಗೆ ಮಾತ್ರ ಆಸ್ತಿ ಅಲ್ಲ. ಕಿವಿಗಳು ಅದಕ್ಕಿಂತ ದೊಡ್ಡ ಆಸ್ತಿ. ತಾನೇ ಹಾಡಿದ್ದ ಹಾಡುಗಳನ್ನೂ ಆಕೆ ಕೇಳದಂತಾಗಿಬಿಡುವುದು ಅಂದರೆ, ಹಾಡ ದಂತಾಗುವುದು ಅಂದರೆ, ಅದು ಹೃದಯವನ್ನೇ ಕಳೆದುಕೊಂಡಂತೆ.

ನಮ್ಮ ಪಾಲಿಗೆ ಎಸ್ಪಿಬಿ ಹೇಗೋ, ಆಕೆಯ ಜಮಾನದ ಹಿಂದಿ ಕೇಳುಗರಿಗೆ ಅಲ್ಕಾ ಯಾಜ್ಞಿಕ್ ಹಾಗೆ. ಆಕೆ ಕೇವಲ ಗಾಯಕಿ ಅಲ್ಲ. ಆಕೆ ಹಲವರ ಬಾಲ್ಯ ಯೌವ್ವನಗಳ ಹಿನ್ನೆಲೆ ಸಂಗೀತ, ಅಲ್ಕಾ ಅಂದರೆ ಸ್ಕೂಲ್ ಡೇ ಡ್ಯಾನ್ಸಿನ ಸಾಂಗು, ಅಲ್ಕಾ ಅಂದರೆ ಕೊಳ್ಳುವ ಕ್ಯಾಸೆಟ್‌ಗೊಂದು ಗ್ಯಾರಂಟಿ ಕಾರ್ಡ್, ಅಲ್ಕಾ ಅಂದರೆ ಚಿತ್ರಹಾರ್, ಅಲ್ಕಾ ಅಂದ್ರೆ ಅಂತ್ಯಾಕ್ಷರಿ, ಅಲ್ಕಾ ಅಂದರೆ ರೇಡಿಯೋದಲ್ಲಿ ಬಯಸುವ ಅಚ್ಚರಿ ಗೀತೆ, ಅಲ್ಕಾ ಅಂದ್ರೆ ಮಾಧುರಿ, ಅಲ್ಕಾ ಅಂದ್ರೆ ಜೂಹಿ, ಕಾಜೋಲ್, ಶಿಲ್ಪಾ ಶೆಟ್ಟಿ, ಮನಿಷಾ ಕೊಯಿರಾಲ... ಅಲ್ಕಾ ಅಂದ್ರೆ ವೆಡ್ಡಿಂಗ್ ಸಾಂಗ್, ಅಲ್ಕಾ ಅಂದ್ರೆ ರೊಮ್ಯಾಂಟಿಕ್ ಸಾಂಗ್. ರೊಮಾ ಅಂದರೇನು ಅಂತ ಗೊತ್ತಿಲ್ಲದ ವಯಸ್ಸಿನಲ್ಲಿ ಧ್ವನಿಯಿಂದಲೇ ರೊಮ್ಯಾಂಟಿಕ್ ಭಾವ ಹುಟ್ಟಿಸಿದವಳು, ಲವ್ವಂದ್ರೇನು ಅಂತ ಗೊತ್ತಿಲ್ಲದ ವಯಸ್ಸಿನಲ್ಲಿ ಬ್ರೇಕಪ್ ನೋವನ್ನು ಅರ್ಥ ಮಾಡಿಸಿದವಳು.

ಆಟೋ, ಬೀಡಾ ಶಾಪ್, ಬಸ್ಸು, ಕಾರು, ಬ್ಯೂಟಿ ಪಾರ್ಲರ್. ಆಕೆ ಆವರಿಸಿಕೊಂಡಿರದ ಜಾಗವೇ ಇರಲಿಲ್ಲ. ಜೀವನದ ಭಾಗವೇ ಆಗಿ ಹೋಗಿದ್ದ ಆಕೆಗೆ ಫಿಲ್ಮ್ ಫೇರ್, ರಾಷ್ಟ್ರಪ್ರಶಸ್ತಿ ಏನೆಲ್ಲ ಬಂದಿದ್ದರೂ ಪದ್ಮಭೂಷಣ ಗೌರವ ಸಿಕ್ಕಾಗ, ಆಕೆಯನ್ನು ಕಣ್ತುಂಬಿಕೊಳ್ಳಲೊಂದು ಅವಕಾಶ ಎಂದೇ ಅಭಿಮಾನಿಗಳು ಕಾದಿದ್ದರು. ಆದರೆ ಆಕೆ ವೀಲ್ ಚೇರ್‌ನಲ್ಲಿ ಬಂದಳು. ಯಾರೋ ಕೈ ಹಿಡಿದು ನಡೆಸಿಕೊಂಡು ಬಂದರು.

ನಿಶ್ಶಕ್ತಿಯಲ್ಲಿ, ನಿಶ್ಶಬ್ದದಲ್ಲಿ ಬಂದು ಪ್ರಧಾನಿಗೆ ಕೈಮುಗಿದು ರಾಷ್ಟ್ರಪತಿಗಳತ್ತ ನಡೆದು ಹೋಗುತ್ತಿದ್ದರೆ, ಆಕೆಗೆ ಚಪ್ಪಾಳೆಗಳೂ ಕೇಳಿಸುತ್ತಿರಲಿಲ್ಲ. ದೇವ್ರು ತನ್ನ ಸ್ಕ್ರಿಪ್ಟ್‌ಗಳಲ್ಲಿ ಯಾಕೆ ಇಂಥ ಕೆಟ್ಟ ಎಮೋಷನಲ್ ದೃಶ್ಯಗಳನ್ನು ಬರೀತಾನೆ? ಒಬ್ಬರಿಗೆ ಅನ್ಯಾಯ ಮಾಡೋದ್ರಲ್ಲಿ, ಅವರನ್ನು ಇಷ್ಟಪಡುವ ಮಂದಿಯನ್ನು ಅಳಿಸುವುದರಲ್ಲಿ ಇಷ್ಟೊಂದು ವಿಕೃತ ಆನಂದವಾ ಅವನಿಗೆ? ಅಲ್ಕಾ ಯಾಜ್ಞಿಕ್‌ಗೆ ಸಿಕ್ಕ ಗೌರವಗಳು, ಪ್ರಶಸ್ತಿಗಳು, ಆಕೆ ಬರೆದ ದಾಖಲೆಗಳು, ಹಾಡಿದ ಹಿಟ್ ಸಾಂಗ್‌ಗಳ ಪಟ್ಟಿ, ಆಕೆ ಹುಟ್ಟಿದ್ದು, ಬೆಳೆದಿದ್ದು ಎಲ್ಲ ಕಥೆಗಳೂ ಗೂಗಲ್ಲಲ್ಲಿ, ವಿಕಿಪಿಡಿಯಾಗಳಲ್ಲಿ ಸಿಕ್ಕುತ್ತವೆ.

ನಾನು ಬರೆದು ಹೇಳಬೇಕಿರೋದೇನೂ ಇಲ್ಲ. ಆದರೆ ಆಕೆಗೆ ದೇವರಿಂದ ಯಾಕಿಂಥ ಅನ್ಯಾಯ ಆಯ್ತು ಅಂತ ಮಾತ್ರ ಯಾವ ವಿಕಿಪಿಡಿಯಾ ಗೂಗಲ್ ಎಐಗಳೂ ಹೇಳಲಾರವು. ಆಕೆ ಕೂಡ ತನ್ನ ನೋವನ್ನು ಹೇಳಿಕೊಳ್ಳುವ ಬದಲು, ಜಗತ್ತಿಗೆ ಜಾಗ್ರತೆ ಹೇಳಿದ್ದಳು. ಇಯರ್ ಫೋನ್ ಬಳಸಬೇಡಿ ಅಂತ. ಇಯರ್ ಫೋನ್ ಬಳಸಿದ್ದಕ್ಕೆ ಆಕೆಗೆ ಹಾಗಾಯ್ತಾ? ಗೊತ್ತಿಲ್ಲ.

ಅರವತ್ತರ ಇಳಿವಯಸ್ಸಿನಲ್ಲಿರುವ ಅಲ್ಕಾ ಯಾಜ್ಞಿಕ್ ಸಿನಿಮಾಗಳಿಗೆ ಹಾಡಲಿ ಅಂತೇನೂ ದುರಾಸೆ ಇಲ್ಲ ನಮಗೆ. ಆಕೆ ಈಗಾಗಲೇ ಕೊಟ್ಟಿರುವ ಹಾಡುಗಳೇ ಸಾಕಷ್ಟಿವೆ. ಅದನ್ನೇ ಸಾವಿರ ಸಾವಿರ ಬಾರಿ ಕೇಳಿ ತಣಿಯಬಹುದು. ಇಷ್ಟು ಹಾಡುಗಳನ್ನು ಕೊಟ್ಟು, ನಮ್ಮ ಭಾವತಂತಿಗಳನ್ನು ಮೀಟಿದಾಕೆಗೆ ಇಂಥ ಅನ್ಯಾಯ ಯಾಕೆ ಅಂತಷ್ಟೇ ಕಂಪ್ಲೇಂಟು. ಅಲ್ಕಾ ತನ್ನ ಹಾಡುಗಳನ್ನು ಕೇಳಿ ಫ್ಲ್ಯಾಶ್ ಬ್ಯಾಕ್ ಅನುಭವಿಸಬೇಕು. ತನ್ನ ಮುಂದಿನ ಪೀಳಿಗೆಯವರು ಹಾಡುವುದನ್ನು ಕೇಳಬೇಕು, ತನ್ನದೇ ಗೀತೆಯನ್ನು ಬೇರೆಯವರು ಹಾಡುವುದು ಕೇಳಿ ಮುದಗೊಳ್ಳಬೇಕು.. ತಾನೇ ಗುನುಗಿಕೊಳ್ಳುವುದನ್ನು ಕೇಳಿಸಿಕೊಳ್ಳಬೇಕು.

ಬದುಕಿನ ಕೊನೆಕ್ಷಣದಲ್ಲೂ ಆಕೆಗೆ ಸಂಗೀತವೆಂಬುದು ಕಿವಿಯಲ್ಲಿ ಅನುರಣಿಸುತ್ತಿರಬೇಕು. ಒಂದು ಕೆಟ್ಟಘಳಿಗೆಯಲ್ಲಿ ಆಕೆಯ ಜಗತ್ತನ್ನು ನಿಶ್ಶಬ್ದಗೊಳಿಸಿದ ಹಾಗೆ, ಒಂದೊಳ್ಳೆ ಘಳಿಗೆ ಬಂದು ದಿಢೀರ್ ಆಕೆಗೆ ಎಲ್ಲವೂ ಕೇಳಿಸುವಂತಾಗಿ ಬಿಡಬಾರದೇ.. ನಮಗೋಸ್ಕರ...? ಕೆಲವರಿಗೆ ದೇವರು ಏನನ್ನೋ ಕಿತ್ತುಕೊಂಡು, ನಂತರ ಸಮಾಧಾನಪಡಿಸಲು ಇನ್ನೇನೋ ಕೊಡುತ್ತಾನೆ. ಕೆಲವರಿಗೆ ಮೊದಲು ಎಲ್ಲ ಕೊಟ್ಟು ನಂತರ ಅತಿಮುಖ್ಯವಾದುದನ್ನೇ ಕಿತ್ತುಕೊಂಡು ಬಿಡುತ್ತಾನೆ. ಎರಡನೆಯದು ಅತಿಘೋರ. ಏನಂತೀರಿ?

**– ನವೀನ್** ಸಾಗರ್

## ಭಾರತದ 31 ನೇ ಸೇನಾ ಮುಖ್ಯಸ್ಥರಾಗಿ
# ಜನರಲ್ ಧೀರಜ್ ಸೇಠ್ ಅಧಿಕಾರ

• ಪ್ರಜೋದಯ ವರದಿ



**ನವದೆಹಲಿ:** ಭಾರತದ 31 ನೇ ಸೇನಾ ಮುಖ್ಯಸ್ಥರಾಗಿ ಜನರಲ್ ಧೀರಜ್ ಸೇಠ್ ಅವರು ಮಂಗಳವಾರ ಅಧಿಕಾರ ವಹಿಸಿಕೊಂಡರು.

ಮಿಲಿಟರಿಯಲ್ಲಿ ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ ನಂತರ ಜನರಲ್ ಉಪೇಂದ್ರ ದ್ವಿವೇದಿ ಅವರ ಸೇವಾವಧಿ ಇಂದು ಮುಕ್ತಾಯವಾಯಿತು. ಅವರ ಉತ್ತರಾಧಿಕಾರಿಯಾಗಿ ಜನರಲ್ ಧೀರಜ್ ಸೇಠ್ ಅಧಿಕಾರ ಸ್ವೀಕರಿಸಿದರು.

ಹೆಚ್ಚಿನ ಸ್ವಾವಲಂಬನೆ, ಆಧುನಿಕ ತಂತ್ರಜ್ಞಾನ ಮತ್ತು ಯುದ್ಧ ಸನ್ನದ್ಧತೆಯ ಕಡೆಗೆ ಭಾರತೀಯ ಸಶಸ್ತ್ರ ಪಡೆ ಸಜ್ಜಾಗುತ್ತಿರುವಂತೆಯೇ 1.3 ಮಿಲಿಯನ್‌ನ ಬಲಶಾಲಿ ಭಾರತೀಯ ಸೇನೆಯ ನಾಯಕತ್ವವನ್ನು ಅವರು ವಹಿಸಿಕೊಂಡಿದ್ದಾರೆ. ಭಾರತದ ಗಡಿಗಳಲ್ಲಿ ನಿರಂತರ ಅಪ್ರಚೋದಿತ ದಾಳಿಯಂತಹ ಸಂದರ್ಭಗಳಲ್ಲಿ ಅವರು ಸೇನೆಯ ಅತ್ಯುನ್ನತ ಜವಾಬ್ದಾರಿಯನ್ನು ವಹಿಸಿಕೊಂಡಿದ್ದು, ಕಾರ್ಯಾಚರಣೆ ಮತ್ತು ಮುಂದೆ ಸಾಮರ್ಥ್ಯ ಅಭಿವೃದ್ಧಿಯತ್ತ ತಮ್ಮ ಗಮನ ಕೇಂದ್ರೀಕರಿಸಬೇಕಾಗಿದೆ.

ಖಡಕ್‌ವಾಸ್ಲಾದ ರಾಷ್ಟ್ರೀಯ ರಕ್ಷಣಾ ಅಕಾಡೆಮಿಯ ಹಳೆಯ ವಿದ್ಯಾರ್ಥಿಯಾದ ಜನರಲ್ ಸೇಠ್ ಅವರನ್ನು ಡಿಸೆಂಬರ್ 1986 ರಲ್ಲಿ ಆರ್ಮರ್ಡ್ ಕಾರ್ಪ್ಸ್‌ಗೆ ನಿಯೋಜಿಸಲಾಗಿತ್ತು. ಸೇನಾ ಮುಖ್ಯಸ್ಥರಾಗುವ ಮುನ್ನಾ ಅವರು ಸೇನಾ ಸಿಬ್ಬಂದಿಯ ಉಪ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು.

ಈ ಹಿಂದೆ ಜೈಪುರದಲ್ಲಿರುವ ಸೌತ್ ವೆಸ್ಟರ್ನ್ ಮತ್ತು ಸದರ್ನ್ ಕಮಾಂಡ್ ಎರಡನ್ನೂ ಮುನ್ನಡೆಸಿದರು. ಪಶ್ಚಿಮ ಮುಂಭಾಗದಲ್ಲಿ ಎರಡು ಕಾರ್ಯಾಚರಣೆಯ ಸೇನಾ ಕಮಾಂಡ್‌ಗಳಿಗೆ ಕಮಾಂಡ್ ಮಾಡಿದ ಕೆಲವೇ ಅಧಿಕಾರಿಗಳಲ್ಲಿ ಇವರು ಒಬ್ಬರಾಗಿದ್ದಾರೆ.

ಸುಮಾರು 40 ವರ್ಷಗಳ ಮಿಲಿಟರಿ ವೃತ್ತಿಜೀವನದಲ್ಲಿ ಜನರಲ್ ಸೇಠ್, ವಿವಿಧ ಕಾರ್ಯಾಚರಣೆಯ ಪರಿಸರಗಳಲ್ಲಿ ಪ್ರತಿಯೊಂದು ಹಂತದಲ್ಲೂ ಕಮಾಂಡ್ ಹುದ್ದೆಯನ್ನು ಅಲಂಕರಿಸಿದ್ದಾರೆ. ಏಪ್ರಿಲ್ 1 ರಂದು ಉಪ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಳ್ಳುವ ಮುನ್ನ ಅವರು ಪುಣೆ ಮೂಲದ ದಕ್ಷಿಣ ಕಮಾಂಡ್‌ನ ಮುಖ್ಯಸ್ಥರಾಗಿದ್ದರು. ಇದು ಕಳೆದ ವರ್ಷ ಆಪರೇಷನ್ ಸಿಂಧೂರ್ ಸಮಯದಲ್ಲಿ ಉನ್ನತ ಮಟ್ಟದ ಕಾರ್ಯಾಚರಣೆಯ ಸನ್ನದ್ಧತೆಯನ್ನು ಕಾಯ್ದುಕೊಂಡಿತ್ತು.

# ಪೋಷಕರು ಮಕ್ಕಳಿಗೆ ನೀತಿ, ನಿಯಮ ಕಲಿಸಬೇಕು

## ರಾಮಭಟ್ಟರ ಹಿತನುಡಿ | ಶಾಲಿನಿ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಅಕ್ಷರಾಭ್ಯಾಸ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಶಾಲೆಗಳಲ್ಲಿ ಮಕ್ಕಳು ಅಕ್ಷರ ಕಲಿಯುವುದರ ಜೊತೆಗೆ ನೀತಿ, ನಿಯಮ, ಶಿಸ್ತು, ಶುದ್ಧ ನಡತೆಯನ್ನು ಪೋಷಕರು ತಮ್ಮ ಮನೆಗಳಲ್ಲಿ ಕಲಿಸಬೇಕು. ಪೋಷಕರನ್ನು ಮಕ್ಕಳು ಅನುಕರಿಸು ವುದರಿಂದ ಮೊದಲಿಗೆ ಪೋಷಕರು ಉತ್ತಮ ಗುಣಗಳನ್ನು ರೂಪಿಸಿಕೊಂಡು ಮಕ್ಕಳಿಗೂ ಉತ್ತಮ ಗುಣಗಳನ್ನು ಕಲಿಸುವ ಕೆಲಸವಾಗ ಬೇಕು ಎಂದು ವೇದಬ್ರಹ್ಮ ರಾಮಭಟ್ಟರು ಹೇಳಿದರು.

ಪಟ್ಟಣದಲ್ಲಿನ ಶಾಲಿನಿ ಇಂಟರ್ ನ್ಯಾಷನಲ್ ಸ್ಕೂಲ್‌ನಲ್ಲಿ ಶಾಲೆಯ ಎಲ್‌ಕೆಜಿ, ಯುಕೆಜಿ, ಮತ್ತು ಬೇಬಿ ಕೇರ್ ಮಕ್ಕಳಿಗಾಗಿ ನಡೆಸಿದ ಅಕ್ಷರಾಭ್ಯಾಸ ಕಾರ್ಯಕ್ರಮದಲ್ಲಿ 150ಕ್ಕೂ ಹೆಚ್ಚು ಮಕ್ಕಳಿಗೆ ವರ್ಣಮಾಲೆಯ ಮೊದಲಕ್ಷರ 'ಅ' ಅಕ್ಷರ ಬರೆಸುವ ಮೂಲಕ ಅಕ್ಷರಾಭ್ಯಾಸ ನೇರವೇರಿಸಿ ನಂತರ ಮಾತನಾಡಿದ ಅವರು, ಶೈಕ್ಷಣಿಕ ಆರಂಭದಲ್ಲಿ ಮಕ್ಕಳಿಗೆ ಶಾಲೆಗಳಲ್ಲಿ ಅಕ್ಷರಾಭ್ಯಾಸ ನಡೆಸುವ ಮೂಲಕ ಕಲಿಕೆಗೆ ಆರಂಭ ನೀಡಲಾಗುತ್ತದೆ.



40 ವರ್ಷಗಳ ಇತಿಹಾಸವುಳ್ಳ, ಅತ್ಯಂತ ಕಡಿಮೆ ವೆಚ್ಚದಲ್ಲಿ ಉತ್ತಮ ಶಿಕ್ಷಣ ನೀಡುವ ಶಾಲಿನಿ ಸಂಸ್ಥೆಯಲ್ಲಿ ಅಕ್ಷರಾಭ್ಯಾಸ ಕಾರ್ಯಕ್ರಮ ಆಯೋಜಿಸಿ ಸರಸ್ವತಿಯನ್ನು ಆರಾಧಿಸಲಾಗುತ್ತಿದೆ. ಈ ಮೂಲಕ ಮಕ್ಕಳಿಗೆ ಉತ್ತಮ ವಿದ್ಯೆ, ಸಂಸ್ಕಾರ ಸಿಗಲಿ, ದೇಶಕ್ಕೆ ಒಳ್ಳೆ ಪ್ರಜೆಯಾಗಬೇಕಾದರೇ ತಮ್ಮ ಮಗುವಿಗೆ ಏನೆಲ್ಲಾ ಕೊಡಬೇಕು ಎಂಬುದನ್ನು ಪೋಷಕರು ಅರಿತಿರಬೇಕು. ಮಕ್ಕಳು ಪೋಷಕರುನ್ನು ನೋಡಿ ಅವರನ್ನೆ ಅನುಸರಿಸುವುದರಿಂದ ಸದ್ಬುದ್ಧಿ, ಸಮಯ ಪ್ರಜ್ಞೆ, ಸದ್ಗುಣಗಳನ್ನು ಅಳವಡಿಸಿಕೊಂಡು ಮಕ್ಕಳಿಗೂ ಕಲಿಸಿ ಸಮಾಜಕ್ಕೆ ಕೈಲಾದ ಕೊಡುಗೆ ನೀಡುವಂತೆ ರೂಪಿಸುವಲ್ಲಿ ಮುಂದಾಗಬೇಕೆಂದರು.

ಈಗಿನ ಪೋಷಕರು ತಮ್ಮ ಕೆಲಸ ಸುಲಭವಾಗಲೆಂದು ಮಕ್ಕಳ ಕೈಗೆ ಮೊಬೈಲ್ ಕೊಟ್ಟು ಕೂರಿಸುತ್ತಾರೆ. ಊಟ ಮಾಡಿಸಲು ಗಂಟೆಗಟ್ಟಲೆ ಮೊಬೈಲ್ ಕೊಡುವುದರಿಂದ ಮುಂದೆ ಅದೇ ಗೀಳು ಹತ್ತಿಕೊಂಡು ಬೇಗ ಮೊಬೈಲ್ ಚಟಕ್ಕೆ ದಾಸರಾಗುತ್ತಿದ್ದಾರೆ. ಮಕ್ಕಳಿಗೆ ಉತ್ತಮ ಪುಸ್ತಕಗಳನ್ನು ಓದುವಂತೆ ಪ್ರೇರಿಸಬೇಕು ಎಂದು ಮನವಿ ಮಾಡಿದರು.

ಮಕ್ಕಳಿಗೆ ಸಣ್ಣ ವಯಸ್ಸಿನಲ್ಲಿಯೇ ಉತ್ತಮ ಗುಣಗಳನ್ನು ಹಾಗೂ ನಡತೆಯನ್ನು ಕಲಿಸಿದರೆ ಸಮಾಜಕ್ಕ ಉತ್ತಮ ವ್ಯಕ್ತಿಗಳಾಗುತ್ತಾರೆ ಎಂದರು.

ಮುಖ್ಯ ಶಿಕ್ಷಕಿ ದೀಪ್ತಿ ಸೋಫಿಯಾ ಮಾತನಾಡಿ, ಮಾತನಾಡಿ, ವಿಶ್ವಕವಿ ಹೇಳಿದಂತೆ ಮಗುವೊಂದು ಹುಟ್ಟುತ್ತಾ ವಿಶ್ವಮಾನವ, ಬೆಳೆಯುತ್ತಾ ಅಲ್ಪಮಾನವನಾಗುತ್ತಿದ್ದಾನೆ. ಬೆಳೆದಂತೆಲ್ಲಾ ಜಾತಿ, ಧರ್ಮದ ಕಬಂದಗಳಲ್ಲಿ ಬಂಧಿಯಾಗುತ್ತಿರುವ ದಿನಗಳಲ್ಲಿ ನಮ್ಮ ಶಾಲೆಯೂ ಸರ್ವಧರ್ಮದ ಶಾಂತಿಯ ಕೇಂದ್ರ, ಇಲ್ಲಿ ಯಾವುದೇ ಧರ್ಮ, ಜಾತಿಯ ವಿಷಬೀಜವನ್ನು ಬಿತ್ತದೇ, ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ಕಲಿಸುವುದರೊಂದಿಗೆ ಪರಿಸರದ ಕಾಳಜಿ, ಪೋಷಕರು, ಸಂಬಂಧಿಕರು, ಗುರುಹಿರಿಯರ ಮಹತ್ವ, ಪ್ರೀತಿ ಸಾರಿ ಕಲಿಕೆಗೆ ತೊಡಗಿಸಲಾಗುತ್ತದೆ ಎಂದು ಅವರು ತಿಳಿಸಿದರು.

ಶಾಲಿನಿ ಇಂಟರ್ ನ್ಯಾಷನಲ್ ಸ್ಕೂಲ್ ಸಂಸ್ಥಾಪಕರದಾ ನಂಜುಂಡೇಗೌಡ ದಂಪತಿಗಳು ಶಾರದಾಂಭೆ ಪೂಜೆ ನೆರವೇರಿಸಿದರು. ತರುವಾಯ ರಾಮಭಟ್ಟರು ಪ್ರತಿ ಮಗುವಿಗೂ ಅಕ್ಷರಾಭ್ಯಾಸ ನಡೆಸಿ ಸಿಹಿ ಹಂಚಿದರು. ಈ ವೇಳೆ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಸಿ.ಎನ್.ಅಶೋಕ್, ರಾಧ ಅಶೋಕ್, ಶಿಕ್ಷಕರು ಇದ್ದರು.

## ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಜನ್ಮದಿನ ಅಂಗವಾಗಿ ಗಿಡ ನೆಟ್ಟು ಹಸಿರು ನಮನ



• ಪ್ರಜೋದಯ ವರದಿ

**ಸಕಲೇಶಪುರ:** ವೃಕ್ಷಮಾತೆ ಡಾ. ಸಾಲುಮರದ ತಿಮ್ಮಕ್ಕ ಅವರ 115ನೇ ಜನ್ಮದಿನದ ಅಂಗವಾಗಿ, ಅವರ ಪವಿತ್ರ ಸ್ಮರಣಾರ್ಥ ಸಕಲೇಶಪುರದ ಹೊಸ ಬಸ್ ನಿಲ್ದಾಣದ ಎದುರು ನೆರಳಿನ ಗಿಡಗಳನ್ನು ನೆಟ್ಟು ಹಸಿರು ನಮನ ಸಲ್ಲಿಸಲಾಯಿತು. ಹಸಿರು ಕರ್ನಾಟಕ ಫೌಂಡೇಶನ್ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಗಿಡ ನೆಡುವ ಮೂಲಕ ಪರಿಸರ ಸಂರಕ್ಷಣೆಯ ಸಂಕಲ್ಪ ಕೈಗೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಪರಿಸರ ಪ್ರೇಮಿ ಇತಿಹಾಸ್ ಜಿ.ಎಸ್, ಡಾ. ಸಾಲುಮರದ ತಿಮ್ಮಕ್ಕ ಅವರ ಪರಿಸರ ಪ್ರೇಮ ಮತ್ತು ಸೇವಾ ಮನೋಭಾವ ಪ್ರತಿಯೊಬ್ಬರಿಗೂ ಮಾದರಿಯಾಗಿದೆ. ಅವರ ಜನ್ಮದಿನದಂದು ಪ್ರತಿಯೊಬ್ಬರೂ ಕನಿಷ್ಠ ಒಂದು ಗಿಡ ನೆಟ್ಟು ಅದರ ಪೋಷಣೆಯ ಹೊಣೆ ಹೊತ್ತರೆ, ಅದೇ ಅವರಿಗೆ ಸಲ್ಲಿಸುವ ನಿಜವಾದ ಗೌರವ ಎಂದು ಅಭಿಪ್ರಾಯಪಟ್ಟರು.

ಹಸಿರೇ ಉಸಿರು ಪ್ರತಿಯೊಬ್ಬರೂ ಒಂದು ಗಿಡ ನೆಟ್ಟು ಪ್ರಕೃತಿಯನ್ನು ಉಳಿಸೋಣ ಎಂಬ ಸಂದೇಶದೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಸಾರಿಗೆ ಸಂಚಾರ ನಿಯಂತ್ರಣಾಧಿಕಾರಿ ವಿಜಯ್ ಕುಮಾರಿ, ಸಿದ್ದಲಿಂಗೇಶ್ವರ ಬೇಕರಿಯ ಚಂದ್ರಶೇಖರ್, ಆಟೋ ಚಾಲಕರು ಹಾಗೂ ಬಸ್ ನಿಲ್ದಾಣದ ಸಿಬ್ಬಂದಿ ವರ್ಗ ಭಾಗವಹಿಸಿದ್ದರು.

# ವಿದ್ಯಾರ್ಥಿಗಳು ಹೆಚ್ಚೆಚ್ಚು ಪುಸ್ತಕಗಳನ್ನು ಓದಬೇಕು

• ಪ್ರಜೋದಯ ವರದಿ

**ಹಾಸನ:** ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಪುಸ್ತಕಗಳನ್ನು ಓದಬೇಕು. ಮೊಬೈಲ್‌ಗೆ ಅವಲಂಬಿತರಾಗುವ ವಿದ್ಯಾರ್ಥಿಗಳು ಅದರಲ್ಲಿರುವ ಉತ್ತಮ ಮಾಹಿತಿ ಮತ್ತು ಒಳ್ಳೆಯದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮುಂದೆ ಸಾಗಬೇಕು ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಮಾನಸ ತಿಳಿಸಿದರು.




ವಿಜಯನಗರ ಬಡಾವಣೆ ಪ್ರತಿಷ್ಠಿತ ಕಾಲೇಜು ಟಾರ್ಗೆಟ್ ಪದವಿಪೂರ್ವ ಕಾಲೇಜಿನಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ಕನ್ನಡ ಸಂಸ್ಕೃತಿ ಇಲಾಖೆ ಇವರ ವತಿಯಿಂದ ವಿದ್ಯಾರ್ಥಿಗಳಿಗೆ ನಾ ಮೆಚ್ಚಿದ ಪುಸ್ತಕ ಓದು ಕಾರ್ಯಕ್ರಮ ಹಾಗೂ ಶೈಕ್ಷಣಿಕ ವರ್ಷದ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಸ್ವಾಗತ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಶೇಷ ಉಪನ್ಯಾಸ ನೀಡಿದ ಸಾಹಿತಿ ಗೊರೂರು ಅನಂತರಾಜು ವಿದ್ಯಾರ್ಥಿಗಳಿಗೆ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಓದು ಜೀವನದಲ್ಲಿ ಅತ್ಯಗತ್ಯ. ಓದಿ ಜ್ಞಾನಾರ್ಜನೆ ಹೆಚ್ಚಿಸಿಕೊಳ್ಳುವಲ್ಲಿ ಪುಸ್ತಕಗಳು ಸಹಕಾರಿ. ಹಣ ಕಳವು ಆಗಬಹುದು. ನಿಮ್ಮ ಓದಿನಿಂದ ಪಡೆದ ಜ್ಞಾನವನ್ನು ಯಾರೂ ಕಸಿದುಕೊಳ್ಳಲು ಸಾಧ್ಯವಿಲ್ಲ. ತಾವು ವಿದ್ಯಾರ್ಥಿ ದಿನಗಳಲ್ಲಿ ಕಥೆ ಸಾಹಿತ್ಯ ಓದುವ ಹವ್ಯಾಸ ರೂಢಿಸಿಕೊಂಡಿದ್ದು ನಾನು ಅವ ರಂತೆಯೇ ಸಾಹಿತಿ ಆಗಬೇಕೆಂಬ ಆಸೆ ಓದುವ ಬರೆಯುವ ಹವ್ಯಾಸ ಬೆಳೆಸಿಕೊಂಡ ಕಾರಣಕ್ಕೆ ಈಡೇರಿದೆ. ನೀವು ವಿದ್ಯಾರ್ಥಿಗಳು ಓದುವ ಬರೆಯುವ ಪ್ರಯತ್ನಗಳಿಂದಾಗಿ ನಿಮ್ಮ ಭವಿಷ್ಯ ರೂಪಿಸಿಕೊಳ್ಳಿ ಎಂದರು.

ಕಾಲೇಜು ಪ್ರಾಂಶುಪಾಲ ಹೆಚ್. ಕೆ.ರಾಹುಲ್ ಮಾತನಾಡಿ, ಕಾಲೇಜು ಇಷ್ಟು ಯಶಸ್ವಿಯಾಗಿ ಮುಂದುವರಿಸಿಕೊಂಡು ಹೋಗಲು ಅದಕ್ಕೆ ಸಹಕಾರ ನೀಡುತ್ತಿರುವ ಪೋಷಕರಿಗೆ ವಿದ್ಯಾರ್ಥಿಗಳಿಗೆ ಅಭಿನಂದನೆ ತಿಳಿಸಿದರು.

ಪುಸ್ತಕ ಪ್ರಾಧಿಕಾರದ ಸದಸ್ಯ ಡಾ.ಕುಶಾಲ್ ಬರಗೂರು ಅವರು ಮಾತನಾಡಿ, ಶಿಕ್ಷಣ ವ್ಯವಸ್ಥೆ ಇದೀಗ ತುಂಬಾ ಬದಲಾವಣೆಯಾಗಿದ್ದು ಎಲ್ಲರಿಗೂ ತಮ್ಮ ಅಂಗೈಯಲ್ಲಿ ಎಲ್ಲವನ್ನು ತಿಳಿದುಕೊಳ್ಳುವ ತಂತ್ರಜ್ಞಾನ ಬೆಳೆದಿದೆ ಎಂದು ಆಧುನಿಕ ವಿದ್ಯಾಭ್ಯಾಸ ಪ್ರಗತಿ, ವಿದ್ಯಾರ್ಥಿಗಳು ಅದರ ಸದುಪಯೋಗ ಪಡೆದುಕೊಳ್ಳುವ ಬಗ್ಗೆ ಮನವರಿಕೆ ಮಾಡಿದರು.

ನಿವೃತ್ತ ಪ್ರಾಂಶಪಾಲ ಎ.ಹೆಚ್. ಗಣೇಶ್ ಅಂಕಪುರ ಹಾಗೂ ಪುಸ್ತಕ ಪ್ರಾಧಿಕಾರದ ಸದಸ್ಯರು, ವಿದ್ಯಾರ್ಥಿಗಳಾದ ಭೂಮಿಕಾ ಎಸ್ ಗೌಡ, ಲೇಪನ ಎಂ ಗೌಡ, ಹರ್ಷಿತ್ ಎಸ್.ಎಂ, ದವನ, ಸಮೀಕ್ಷಾ, ವರ್ಷಿಣಿ, ಪ್ರಥಮ ಪಿಯುಸಿ ವಿದ್ಯಾರ್ಥಿಗಳಾದ ಹರ್ಷಿತ, ಸೃಷ್ಟಿ, ಇಂಚರ ವಿ.ಗೌಡ, ವಿದ್ಯಾ ಕೆ. ಗೌಡರು ಭಾಗವಹಿಸಿ ಪ್ರಶಸ್ತಿ ಪತ್ರ ಪುಸ್ತಕ ಬಹುಮಾನ ಪಡೆದರು. ಗೋಪಾಲ್ ಬಿ, ಟಿ.ಎ. ಸುನೀಲ್ ಇನ್ನಿತರರು ಭಾಗಿಯಾಗಿದ್ದರು.

# ನಿತ್ಯ ಮಾಡಿದ ಪಾಠವನ್ನು ಅಂದೇ ಓದಿ ಮನನ ಮಾಡಿಕೊಳ್ಳಿ

• ಪ್ರಜೋದಯ ವರದಿ

**ಅರಕಲಗೂಡು:** ಶಾಲೆಯ ಶಿಕ್ಷಕರ ಶ್ರಮ ಹಾಗೂ ವಿದ್ಯಾರ್ಥಿಗಳ ಪ್ರಯತ್ನದಿಂದ ಈ ಶಾಲೆಗೆ ಶೇ. 100 ಫಲಿತಾಂಶ ದೊರಕಿದ್ದು ಮುಂದೆಯೂ ಸಹ ಇದೇ ರೀತಿ ಫಲಿತಾಂಶಗಳು ದೊರಕಬೇಕು. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ನಿತ್ಯ ಮಾಡಿದ ಪಾಠವನ್ನು ಅಂದೇ ಓದಿ ಮನನ ಮಾಡಿಕೊಳ್ಳಿ. ವಿದ್ಯಾರ್ಥಿಗಳು ಮುಂದೆ ಜೀವನದಲ್ಲಿ ಏನಾಗಬೇಕು ಎಂಬುದನ್ನು ಈಗಲೇ ಚಿಂತನೆ ಮಾಡಿ ಚನ್ನಾಗಿ ಅಭ್ಯಾಸ ಮಾಡಿ ಆ ಗುರಿಯನ್ನು ಮುಟ್ಟಿ ಸಮಾಜಕ್ಕೆ, ಕುಟುಂಬಕ್ಕೆ ಒಳ್ಳೆಯ ಹೆಸರನ್ನು ತನ್ನಿ ಎಂದು ಶಾಸಕ ಎ.ಮಂಜು ತಿಳಿಸಿದರು.



ತಾಲ್ಲೂಕಿನ ಕೊಣನೂರು ಬಿವಿಎಂ ಬಾಲಿಕಾ ಅನುದಾನಿತ ಪ್ರೌಢಶಾಲೆಯಲ್ಲಿ 2025-26 ನೇ ಸಾಲಿನಲ್ಲಿ ಶಾಲೆಗೆ ಶೇ.100 ಫಲಿತಾಂಶ ನೀಡಿದ 38 ವಿದ್ಯಾರ್ಥಿಗಳಿಗೆ ಅಭಿನಂದನೆ ಹಾಗೂ 29 ವರ್ಷಗಳ ಸುಧೀರ್ಘ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿದ ಶಿಕ್ಷಕ ದ್ಯಾವಯ್ಯ ಅವರಿಗೆ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ಉತ್ತಮವಾಗಿ ಕಟ್ಟಿಕೊಳ್ಳುವುದು ಶಿಕ್ಷಣದಿಂದ ಮಾತ್ರ ಸಾಧ್ಯ. ಹೀಗಾಗಿ ವಿದ್ಯಾರ್ಥಿ ಜೀವನದಲ್ಲಿ ಇಷ್ಟ ಹಾಗೂ ಕಷ್ಟ ಪಟ್ಟು ಅಭ್ಯಾಸ ಮಾಡುವ ಮೂಲಕ ಉತ್ತಮ ಭವಿಷ್ಯ ಕಟ್ಟಿಕೊಳ್ಳಿ ಎಂದು ತಿಳಿಸುತ್ತಾ, ಈ ಶಾಲೆಯ ಉತ್ತಮ ಶಿಕ್ಷಕ ದ್ಯಾವಯ್ಯ ರವರು ನಿವೃತ್ತಿ ಹೊಂದುತ್ತಿರುವುದು ನಮ್ಮ ಆಡಳಿತ ಮಂಡಳಿಗೆ ನೋವಿದೆ. ಇವರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ 2025-26 ನೇ ಸಾಲಿನಲ್ಲಿ ಶಾಲೆಗೆ ಶೇ 100 ಫಲಿತಾಂಶ ನೀಡಿದ 38 ವಿದ್ಯಾರ್ಥಿಗಳನ್ನು ಹಾಗೂ 29 ವರ್ಷಗಳ ಸುಧೀರ್ಘ ಸೇವೆ ಸಲ್ಲಿಸಿ ವಯೋ ನಿವೃತ್ತಿ ಹೊಂದಿದ ಶಿಕ್ಷಕ ದ್ಯಾವಯ್ಯ ರವರನ್ನು ಶಾಸಕ ಎ. ಮಂಜು ಹಾಗೂ ಶಾಲಾ ಆಡಳಿತ ಮಂಡಳಿಯವರು ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಶಾಲಾ ಆಡಳಿತ ಮಂಡಳಿಯ ಉಪಾಧ್ಯಕ್ಷ ಪುಟ್ಟರಾಜೇಗೌಡ, ಕಾರ್ಯದರ್ಶಿ ಚಂದ್ರಶೇಖರ್, ನಿರ್ದೇಶಕರಾದ ಚೌಡೇಗೌಡ, ಸೋಮಶೇಖರ್, ನಿಂಗಣ್ಣ, ಕೆ.ಆರ್.ಶಿವಣ್ಣ, ನಾಗರಾಜ್, ಕೆ.ವಿ.ಶ್ರೀನಿವಾಸ ಮೂರ್ತಿ, ಲೋಕನಾಥ್, ಕಂಬೇಗೌಡ, ಕೆ.ಕೆ.ನಾಗರಾಜ್, ಸಿಆರ್‌ಪಿ ಕೆ.ಕೆ.ಕುಮಾರ್, ಶಿಕ್ಷಕರಾದ ಟಿ.ಪಿ. ಕುಮಾರ್, ಕೆ.ಎಲ್.ಜಗದೀಶ್, ವಿದ್ಯಾರ್ಥಿಗಳು ಹಾಜರಿದ್ದರು.

## ಸಾಹಿತ್ಯಕ ಸ್ಪರ್ಧೆ: ರಾಜ್ಯಮಟ್ಟಕ್ಕೆ ಆಯ್ಕೆ

• ಪ್ರಜೋದಯ ವರದಿ



**ಹಾಸನ:** ಇತ್ತೀಚೆಗೆ ನಗರದಲ್ಲಿ ಆಯೋಜಿಸಿದ್ದ ವಲಯ ಮಟ್ಟದ (Zonal Level) ಸಾಹಿತ್ಯಕ ಸ್ಪರ್ಧೆ (Literary Competitions) ಗಳಲ್ಲಿ ನಗರದ ಎಸ್.ಆರ್.ಎಸ್ ಪ್ರಜ್ಞಾ ಪಿ.ಯು. ಕಾಲೇಜು (ಐ.ಎಸ್.ಸಿ) ವಿದ್ಯಾರ್ಥಿಗಳು ಭಾಗವಹಿಸಿ ಹಲವು ವಿಭಾಗಗಳಲ್ಲಿ ಬಹುಮಾನ ಗಳಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿ ಕಾಲೇಜಿಗೆ ಕೀರ್ತಿ ತಂದಿರುತ್ತಾರೆ.

ಕಾಲೇಜಿನ ವಿದ್ಯಾರ್ಥಿಗಳಾದ ಡಿಂಪಲ್ ಗೌಡ. ಡಿ ಹಾಗೂ ಖ್ಯಾನ್ ಸಿಂಫ್ವಿ ರವರು ಚರ್ಚಾ ಸ್ಪರ್ಧೆ ವಿಭಾಗದಲ್ಲಿ ಹಾಗೂ ನಿಶಾಂತ್ ಗೌಡ ಸಿ.ಎಂ. ಅವರು ಚಿತ್ರಕಲಾ ಸ್ಪರ್ಧೆ ವಿಭಾಗದಲ್ಲಿ ಕ್ರಮವಾಗಿ ಪ್ರಥಮ ಸ್ಥಾನ ಪಡೆದು ಚಿನ್ನದ ಪದಕ ಹಾಗೂ ಪ್ರಶಸ್ತಿ ಪತ್ರ ಗಳಿಸಿ ರಾಜ್ಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿರುತ್ತಾರೆ.

ದುಶ್ಯಂತ್ ಗೌಡ ಸಿ.ವಿ ಅವರು ಸೃಜನಾತ್ಮಕ ವಾಕ್ಚಾತುರ್ಯ ಸ್ಪರ್ಧೆ (Declamation) ವಿಭಾಗದಲ್ಲಿ ಹಾಗೂ ಮಿಸ್. ತನ್ವಿಕ ಅವರು ಸೃಜನಾತ್ಮಕ ಲೇಖನ ಸ್ಪರ್ಧೆ ವಿಭಾಗದಲ್ಲಿ ಮತ್ತು ವಿ. ಧನಲಕ್ಷ್ಮೀ ಹಾಗೂ ಹಾದಿಯ ಹರ್ಮೇನ್ ಅವರು ರಸಪ್ರಶ್ನೆ ಸ್ಪರ್ಧೆಯಲ್ಲಿ ಕ್ರಮವಾಗಿ ದ್ವಿತೀಯ ಸ್ಥಾನ ಪಡೆದು ಬೆಳ್ಳಿಯ ಪದಕ ಹಾಗೂ ಪ್ರಶಸ್ತಿ ಪತ್ರ ಪಡೆದಿದ್ದಾರೆ.

ಎಲ್ಲಾ ಬಹುಮಾನ ವಿಜೇತ ವಿದ್ಯಾರ್ಥಿಗಳಿಗೆ ಕಾಲೇಜಿನ ಆಡಳಿತ ಮಂಡಳಿ ಸದಸ್ಯರು ಹಾಗೂ ಉಪನ್ಯಾಸಕ ವೃಂದದವರು ಅಭಿನಂದನೆ ತಿಳಿಸಿ, ರಾಜ್ಯ ಮಟ್ಟದ ಸ್ಪರ್ಧೆಯ ಯಶಸ್ಸಿಗೆ ಶುಭಾಶಯ ಕೋರಿದ್ದಾರೆ.

# ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೆ ಸಹಕರಿಸಿ

## ಉಪ ವಿಭಾಗಾಧಿಕಾರಿ ಹುಲುಮನಿ ತಿಮ್ಮಣ್ಣ

ಆಲೂರು: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಎಸ್ ಆರ್) ಜತೆಗೆ ಹೊಸ ಮತದಾರರ ನೋಂದಣಿ ಕಾರ್ಯಕ್ಕೆ, ಮಂಗಳವಾರ ಉಪ ವಿಭಾಗಾಧಿಕಾರಿ ಹುಲುಮನಿ ತಿಮ್ಮಣ್ಣ ಅವರು, ಬೋಸ್ಮಾನಹಳ್ಳಿ ಗ್ರಾಮದಲ್ಲಿ ಮಾಜಿ ಶಾಸಕ ಎಚ್.ಕೆ.ಕುಮಾರಸ್ವಾಮಿ ಅವರ ಮನೆಯಲ್ಲಿ ಚಾಲನೆ ನೀಡಿದರು.



ಈ ಸಂದರ್ಭದಲ್ಲಿ ಹುಲುಮನೆ ತಿಮ್ಮಣ್ಣ ಅವರು ಮಾತನಾಡಿ, ಮತಗಟ್ಟೆ ಅಧಿಕಾರಿಗಳು ಮನೆಗಳಿಗೆ ಭೇಟಿ ನೀಡಿದಾಗ, ಆ ಮನೆಯ ಪ್ರತಿ ಮತದಾರರಿಗೂ ಗಣತಿ ನಮೂನೆ ಎರಡು ಪ್ರತಿಗಳನ್ನು ನೀಡುತ್ತಾರೆ. ಎರಡನ್ನೂ ಭರ್ತಿ ಮಾಡಿದ ನಂತರ ಆಧಾರ್ ಕಾರ್ಡು, ಇತ್ತೀಚಿನ ಭಾವಚಿತ್ರ ಅಂಟಿಸಿ ಸಹಿ ಮಾಡಬೇಕು. ಒದನ್ನು ಬಿಎಲ್‌ಒಗಳಿಗೆ ನೀಡಿ, ಮತ್ತೊಂದಕ್ಕೆ ಅವರ ಸಹಿ ಪಡೆದು ಸಂಗ್ರಹಸಿಟ್ಟುಕೊಳ್ಳಬೇಕು. 2002 ರಲ್ಲಿ ಮ್ಯಾಪಿಂಗ್ ಆಗಿದ್ದರೆ ಯಾವುದೆ ದಾಖಲೆ ಕೊಡುವ ಅವಶ್ಯಕತೆ ಇಲ್ಲ.

ಮತಗಟ್ಟೆ ಅಧಿಕಾರಿಗಳು ಮನೆಗಳಿಗೆ ಭೇಟಿ ನೀಡಿ ಗಣತಿ ನಮೂನೆಗಳನ್ನು ಸ್ವಿಕರಿಸಿದರೆ, ಅಂತಹ ಮನೆಗಳಿಗೆ ನೇರಳೆ ಬಣ್ಣದ ಚೌಕಾಕಾರದ ಸ್ಟಿಕ್ಕರ್ ಅಂಟಿಸಲಾಗುತ್ತದೆ ಎಂದು ತಿಳಿಸಿದ ಅವರು, ಪ್ರತಿಯೊಬ್ಬರೂ ವಿಶೇಷ ಸಮಗ್ರ ಪರಿಷ್ಕರಣೆಗೆ ಸಹಕರಿಸಬೇಕು ಎಂದು ಇದೇ ಸಂದರ್ಭದಲ್ಲಿ ಮನವಿ ಮಾಡಿದರು.


ಗಣತಿ ನಮೂನೆ ಸಂಗ್ರಹಿಸುವ ಕಾರ್ಯ ಜು. 29 ಕ್ಕೆ ಕೊನೆಗೊಳ್ಳಲಿದೆ. ಗಣತಿ ನಮೂನೆ ಭರ್ತಿ ಮಾಡಿ ಸಲ್ಲಿಸದವರ ಹೆಸರನ್ನು ಕರಡು ಪಟ್ಟಿಯಲ್ಲಿ ಸೇರಿಸುವುದಿಲ್ಲ, ಅಂತಹವರು ಮತದಾರರ ಪಟ್ಟಿಯಿಂದ ಹೊರಗುಳಿಯುತ್ತಾರೆ.

ಮನೆಗೆ ಬೀಗ ಹಾಕಿದ್ದರೆ ಕೆಂಪು ಬಣ್ಣದ ವೃತ್ತಾಕಾರದ ಸ್ಟಿಕ್ಕರ್ ಅಂಟಿಸಲಾಗುತ್ತದೆ. ಈ ಸ್ಟಿಕ್ಕರ್‌ಗಳಲ್ಲಿ ಮನೆಗೆ ಭೇಟಿ ನೀಡಿದ್ದ ಮತಗಟ್ಟೆ ಅಧಿಕಾರಗಳ ಹೆಸರು, ಫೋನ್ ನಂಬರ್ ಹಾಗೂ ಮುಂದಿನ ಬಾರಿ ಪುನ: ಅವರು ಭೇಟಿ ನೀಡುವ ದಿನಾಂಕ ಇರುತ್ತದೆ. ಒಂದು ಮನೆಗೆ ಒಟ್ಟು ಮೂರು ಬಾರಿ ಭೇಟಿ ನೀಡುವುದನ್ನು ಆಯೋಗ ಕಡ್ಡಾಯಗೊಳಿಸಿದೆ ಎಂದರು.

ಮಾಜಿ ಸಚಿವ ಎಚ್.ಕೆ. ಕುಮಾರಸ್ವಾಮಿ ಅವರು ತಮ್ಮ ಪತ್ನಿ ಚಂಚಲ ಕುಮಾರಸ್ವಾಮಿಯವರೊಂದಿಗೆ ಎನ್ಯುಮರೇಷನ್ ಫಾರಂ ಭರ್ತಿ ಮಾಡಿ ಮಾತನಾಡಿ, ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆ ಪ್ರಾರಂಭವಾಗಿರುವುದು ಉತ್ತಮ ಕೆಲಸ. ಮಲೆನಾಡು ಭಾಗದಲ್ಲಿ ಬಹುತೇಕ ಕಾರ್ಮಿಕರು ಇರುವುದರಿಂದ, ಸಂಜೆ 5 ಗಂಟೆ ನಂತರ ಅವರನ್ನು ಭೇಟಿ ಮಾಡಿ ಪಟ್ಟಿ ಪರಿಷ್ಕರಣೆ ಮಾಡುವುದು ಒಳಿತು ಎಂದರು.

ಈ ಸಂದರ್ಭದಲ್ಲಿ ಚುನಾವಣೆ ಶಾಖೆ ಶಿರಸ್ತೆದಾರ್ ಜಿ.ಮಂಜುಳ, ಜನಾರ್ಧನ, ಎಚ್.ಎಂ.ಮಧುಕುಮಾರ್, ಕೆ.ಎಸ್.ಶಿವಾನಂದ, ರಾಜಸ್ವ ನಿರೀಕ್ಷಕ ಎಂ.ಎಸ್. ಗೋವಿಂದರಾಜು, ಮೇಲ್ವಿಚಾರಕ ಮಂಜಪ್ಪ, ಮತಗಟ್ಟೆ ಅಧಿಕಾರಿ ಲಲಿತ ಇನ್ನಿತರರು ಹಾಜರಿದ್ದರು.

## ಕಾಡಾನೆಗಳ ಸಂಚಾರ: ಎಚ್ಚರಿಕೆ



• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಹೆಬ್ಬನಹಳ್ಳಿ ಹಾಗೂ ಹರನಹಳ್ಳಿ ಗ್ರಾಮಗಳ ಸಮೀಪ ಎರಡು ಕಾಡಾನೆಗಳು ಸಂಚರಿಸುತ್ತಿರುವ ಹಿನ್ನೆಲೆಯಲ್ಲಿ, ವಲಯ ಅರಣ್ಯಾಧಿಕಾರಿ ಹೇಮಂತ್ ಕುಮಾರ್ ನೇತೃತ್ವದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಗ್ರಾಮಸ್ಥರಿಗೆ ಮುನ್ನೆಚ್ಚರಿಕೆ ಸೂಚನೆ ನೀಡಿದರು.


ಗ್ರಾಮಗಳಲ್ಲಿ ಸಾರ್ವಜನಿಕರಿಗೆ ರಾತ್ರಿ ಹಾಗೂ ಮುಂಜಾನೆ ವೇಳೆಯಲ್ಲಿ ಅನಗತ್ಯವಾಗಿ ಹೊರಗೆ ಸಂಚರಿಸದಂತೆ, ಒಬ್ಬೊಬ್ಬರಾಗಿ ಓಡಾಡುವುದನ್ನು ತಪ್ಪಿಸಿ ಎಚ್ಚರಿಕೆಯಿಂದ ಇರಬೇಕೆಂದು ಅಧಿಕಾರಿಗಳು ಮನವಿ ಮಾಡಿದರು. ಕಾಡಾನೆಗಳು ಕಂಡುಬಂದಲ್ಲಿ ಅವುಗಳ ಸಮೀಪ ಹೋಗದೆ ತಕ್ಷಣ ಅರಣ್ಯ ಇಲಾಖೆಗೆ ಮಾಹಿತಿ ನೀಡುವಂತೆ ತಿಳಿಸಿದರು.

ಅರಣ್ಯ ಇಲಾಖೆ ಸಿಬ್ಬಂದಿ ಗ್ರಾಮಗಳಲ್ಲಿ ಜಾಗೃತಿ ಮೂಡಿಸಿ, ಕಾಡಾನೆಗಳ ಚಲನವಲನದ ಬಗ್ಗೆ ನಿರಂತರ ನಿಗಾ ವಹಿಸಲಾಗಿದ್ದು, ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ ಎಂದು ವಲಯ ಅರಣ್ಯಾಧಿಕಾರಿಗಳು ತಿಳಿಸಿದರು. ಗ್ರಾಮಸ್ಥರು ಆತಂಕಕ್ಕೆ ಒಳಗಾಗದೆ ಇಲಾಖೆಯ ಸೂಚನೆಗಳನ್ನು ಪಾಲಿಸುವಂತೆ ಮನವಿ ಮಾಡಿದರು.

## ಹಂತ ಹಂತವಾಗಿ ಒತ್ತುವರಿ ತೆರವು ಕಾರ್ಯಾಚರಣೆ
# 10 ಎಕರೆ ಅರಣ್ಯ ಭೂಮಿ ತೆರವು

• ಪ್ರಜೋದಯ ವರದಿ

**ಸಕಲೇಶಪುರ:** ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಅವರ ಆದೇಶದ ಮೇರೆಗೆ ದಾಖಲಿಸಲಾದ 64 ಎ ಪ್ರಕರಣದ ಅನ್ವಯ ಸಕಲೇಶಪುರ ಅರಣ್ಯ ಇಲಾಖೆ ಅಧಿಕಾರಿಗಳು ಸೆಕ್ಷನ್ 4ರ ಮರಗಡಿ ಸರ್ವೆ ನಂ. 54 ರಲ್ಲಿ ಒತ್ತುವರಿಯಾಗಿದ್ದ ಸುಮಾರು 10 ಎಕರೆ ಅರಣ್ಯ ಭೂಮಿಯನ್ನು ತೆರವುಗೊಳಿಸಿ ಇಲಾಖೆ ವಶಕ್ಕೆ ಪಡೆದರು.



ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮಧುಸೂದನ್ ಅವರ ಆದೇಶ ಸಂಖ್ಯೆ ಸ.ಅ.ಸಂ./ಸಕಪು/ಒತ್ತುವರಿ/ಅ.ಮೊ.270/21-22, ದಿನಾಂಕ 22-06-2026ರ ಅನ್ವಯ, ಅಚ್ಚನಹಳ್ಳಿ ಗ್ರಾಮದ ಅನಿಲ್ ಕುಮಾರ್ ಅವರು ಅರಣ್ಯ ಭೂಮಿಯನ್ನು ಅತಿಕ್ರಮಿಸಿರುವ ಹಿನ್ನೆಲೆಯಲ್ಲಿ 64ಎ ಪ್ರಕರಣ ದಾಖಲಿಸಿಕೊಂಡು, ಅದರ ಮುಂದುವರಿದ ಕ್ರಮವಾಗಿ ಒತ್ತುವರಿ ತೆರವು ಕಾರ್ಯಾಚರಣೆ ಕೈಗೊಳ್ಳಲಾಯಿತು.

ಒತ್ತುವರಿಯಾಗಿದ್ದ ಪ್ರದೇಶದಲ್ಲಿ ಬೆಳೆಸಲಾಗಿದ್ದ ಕಾಫಿ, ಅಡಿಕೆ, ಮೆಣಸು ಹಾಗೂ ಬಾಳೆ ಬೆಳೆಗಳಿದ್ದ ಸುಮಾರು 10 ಎಕರೆ ಅರಣ್ಯ ಭೂಮಿಯನ್ನು ಅಧಿಕಾರಿಗಳು ಹದ್ದುಬಸ್ತು ಗುರುತಿಸಿ ಅಧಿಕೃತವಾಗಿ ಇಲಾಖೆ ವಶಕ್ಕೆ ಪಡೆದರು.

ಮಂಗಳವಾರ ಬೆಳಿಗ್ಗೆ ನಡೆದ ಕಾರ್ಯಾ ಚರಣೆಯಲ್ಲಿ ವಲಯ ಅರಣ್ಯಾಧಿಕಾರಿ ಎಚ್.ಆರ್. ಹೇಮಂತ್ ಕುಮಾರ್ ನೇತೃತ್ವದಲ್ಲಿ ಉಪವಲಯ ಅರಣ್ಯಾಧಿಕಾರಿಗಳಾದ ಅರ್ಜುನ್, ಮಂಜುನಾಥ್, ಮಹದೇವ್ ಹಾಗೂ ಧನಂಜಯ್, ಗಸ್ತು ಅರಣ್ಯ ಪಾಲಕರಾದ ಉಮೇಶ್, ಯೋಗೇಶ್, ದೇವರಾಜ್, ದೇವೇಂದ್ರ ಮತ್ತು ಕುಮಾ್ರ ಆರ್ ಆರ್‌ಟಿ ಸಿಬ್ಬಂದಿಗಳಾದ ಸೋಮಶೇಖರ್, ಮದನ್ ಹಾಗೂ ಸುಧೀಶ್ ಭಾಗವಹಿಸಿದ್ದರು.

ವಲಯ ಅರಣ್ಯಾಧಿಕಾರಿ ಎಚ್. ಆರ್.ಹೇಮಂತ್‌ಕುಮಾರ್ ಅವರು ಮಾತನಾಡಿ, ಕಳೆದ ಎರಡು ವರ್ಷಗಳ ಅವಧಿಯಲ್ಲಿ ತಮ್ಮ ವಲಯ ವ್ಯಾಪ್ತಿಯಲ್ಲಿ ಸುಮಾರು 80 ಎಕರೆ ಅರಣ್ಯ ಭೂಮಿಯನ್ನು ಒತ್ತುವರಿಯಿಂದ ಮುಕ್ತಗೊಳಿಸಿ ಇಲಾಖೆ ವಶಕ್ಕೆ ಪಡೆಯಲಾಗಿದೆ ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿಯೂ ಅರಣ್ಯ ಭೂಮಿಯನ್ನು ಅತಿಕ್ರಮಿಸಿಕೊಂಡಿರುವ ಎಲ್ಲಾ ಪ್ರದೇಶಗಳನ್ನು ಗುರುತಿಸಿ, ಕಾನೂನುಬದ್ಧವಾಗಿ ಹಂತ ಹಂತವಾಗಿ ಒತ್ತುವರಿ ತೆರವು ಕಾರ್ಯಾಚರಣೆ ಮುಂದುವರಿಸಲಾಗುವುದು ಎಂದು ಹೇಳಿದರು.

ಒಮ್ಮೆ ಭೂಮಿಯನ್ನು ಅರಣ್ಯ ಪ್ರದೇಶವೆಂದು ಅಧಿಸೂಚನೆ ಮಾಡಿ ಘೋಷಿಸಿದ ಬಳಿಕ ಅದನ್ನು ಬೇರೆ ಉದ್ದೇಶಕ್ಕೆ ಪರಿವರ್ತಿಸುವುದು ಕಾನೂನುಬದ್ಧವಾಗಿ ಅತ್ಯಂತ ಕಷ್ಟಕರವಾಗಿದೆ. ಆದ್ದರಿಂದ ಅರಣ್ಯ ಭೂಮಿಯನ್ನು ಅತಿಕ್ರಮಿಸಿರುವವರು ಸ್ವಯಂ ಪ್ರೇರಿತವಾಗಿ ತೆರವುಗೊಳಿಸು ವುದು ಸೂಕ್ತ ಎಂದು ಮನವಿ ಮಾಡಿದರು.

## ಕೆಪಿಟಿಸಿಎಲ್ ಖಾಸಗೀಕರಣ: ಆಕ್ರೋಶ

• ಪ್ರಜೋದಯ ವರದಿ



**ಅರಸೀಕೆರೆ:** ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ವ್ಯವಸ್ಥಿತವಾಗಿ ಕೆಪಿಟಿಸಿಎಲ್ ಅನ್ನು ಖಾಸಗಿಕರಣ ಮಾಡಲು ಹೊರಟಿದ್ದು ಇದರಿಂದ ರೈತರಿಗೆ ನಷ್ಟವಾಗಲಿದೆ ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ರೈತ ಸಂಘದ ಕಾರ್ಯಾಧ್ಯಕ್ಷ ಬೋರನ ಕೊಪ್ಪಲು ಶಿವಲಿಂಗಪ್ಪ ಮಾತನಾಡಿ, ರಾಜ್ಯದಲ್ಲಿ 70 ಲಕ್ಷಕ್ಕೂ ಹೆಚ್ಚು ಪಂಪ್ ಸೆಟ್ ಬಳಸಿ ಕೊಳವೆ ಬಾವಿ ನೀರಿನಿಂದ ಕೃಷಿ ಚಟುವಟಿಕೆಯನ್ನು ರೈತರು ಮಾಡುತ್ತಿದ್ದಾರೆ. ಅಲ್ಲದೆ ಹೊಲ, ಗದ್ದೆ ತೋಟಗಳಲ್ಲಿ ರೈತರು ಮನೆ ನಿರ್ವಹಿಸಿಕೊಂಡಿದ್ದು ವಿದ್ಯುತ್ ಇಲಾಖೆಯನ್ನ ಖಾಸಗಿ ಅವರ ಕೈಗೆ ಒಪ್ಪಿಸಿದರೆ ಭವಿಷ್ಯದಲ್ಲಿ ರೈತರು ಬಾರಿ ಬೆಲೆ ಎತ್ತಬೇಕಾಗುತ್ತದೆ ಇದಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅನುವು ಮಾಡಿಕೊಟ್ಟದ್ದೆ ಆದರೆ ರೈತ ಸಂಘ ಹಾಗೂ ಹಸಿರು ಸೇನೆ ಬೀದಿಗೆ ಇಳಿದು ಹೋರಾಟ ನಡೆಸಲಿದೆ ಎಂದು ಎಚ್ಚರಿಕೆ ನೀಡಿದರು.

ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ನೇತೃತ್ವದ ಸರ್ಕಾರ ರೈತ ಸಂಘಟನೆಯ ವಿರೋಧದ ನಡುವೆಯೂ ವಿದ್ಯುತ್ ಮೀಟರ್‌ಗಳನ್ನು ಅಳವಡಿಸಲು ಮುಂದಾದಾಗ ಪ್ರೊ|| ನಂಜುಂಡಸ್ವಾಮಿಯವರ ನೇತೃತ್ವದಲ್ಲಿ ವಿದ್ಯುತ್ ಇಲಾಖೆ ಅಳವಡಿಸಿದ್ದ ಮೀಟರ್ ಗಳನ್ನು ಜಿಲ್ಲಾಧಿಕಾರಿಗಳ ಕಚೇರಿಗಳ ಮುಂದೆ ತಂದು ರೈತರು ಸುರಿದಿದ್ದನ್ನ ಸರ್ಕಾರ ಅರಿತುಕೊಳ್ಳಲಿ ಎಂದು ಎಚ್ಚರಿಸಿದರು.

ರೈತ ಮುಖಂಡ ರವಿಕುಮಾರ್ ಮಾತನಾಡಿ, ದೇಶದ ಬೆನ್ನೆಲುಬು ಆಗಿರುವ ರೈತನ ಬದುಕು ಕಟ್ಟಬೇಕಾದ ರಾಜ್ಯ ಮತ್ತು ಕೇಂದ್ರ ಸರ್ಕಾರ ಇತ್ತೀಚಿನ ವರ್ಷಗಳಲ್ಲಿ ರೈತ ವಿರೋಧಿ ಧೋರಣೆ ತಳ್ಳುತ್ತಿರುವುದು ಸರಿಯಲ್ಲ ರೈತ ಸಮುದಾಯಕ್ಕೆ ಧಕ್ಕೆ ಆದರೆ ರೈತ ಸಂಘ ಹಾಗೂ ಹಸಿರು ಸೇನೆ ಇನ್ನು ಮುಂದೆ ಸುಮ್ಮನಿರುವುದಿಲ್ಲ ಎಂದು ಹೇಳಿದರು.

ತಾಲ್ಲೂಕು ರೈತ ಸಂಘದ ಅಧ್ಯಕ್ಷ ಅಣ್ಣನಾಯಕನಹಳ್ಳಿ ಶಿವಮೂರ್ತಿ, ಕಾರ್ಯದರ್ಶಿ ಎಂ.ಪಿ. ಮಲ್ಲಿಕಾರ್ಜುನ್, ಕಾರೆಹಳ್ಳಿ ರವಿ, ಮುದ್ನಳ್ಳಿ ಮಂಜಣ್ಣ, ಸಿದ್ರಳ್ಳಿ ರಾಜಣ್ಣ, ಬೆಲವತ್ತೇಹಳ್ಳಿ ರಘು ಹಾಗೂ ಬೋರನ ಕೊಪ್ಪಲು ರಮೇಶ್ ಅವರು ಉಪಸ್ಥಿತರಿದ್ದರು.

# ಮಠಮಾನ್ಯಗಳ ಪರಂಪರೆಯಿಂದ ಬದುಕು ಸದೃಢ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮಠ ಮಾನ್ಯಗಳ ಪರಂಪರೆಯಿಂದ ವ್ಯಕ್ತಿಯ ಬದುಕು ಸದೃಢಗೊಳ್ಳಲು ಸಾಧ್ಯ, ಶಿಕ್ಷಣ, ವಸತಿ ಸೇರಿದಂತೆ ವಿದ್ಯಾರ್ಥಿಗಳ ಬದುಕನ್ನು ರೂಪಿಸುತ್ತಿದೆ ಎಂದು ನುಗ್ಗೇಹಳ್ಳಿ ಪುರವರ್ಗ ಹಿರೇಮಠದ ಡಾ.ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯಪಟ್ಟರು.




ತಾಲ್ಲೂಕಿನ ನುಗ್ಗೆಹಳ್ಳಿ ಹೋಬಳಿ ಕೇಂದ್ರದ ಪುರವರ್ಗ ಹಿರೇಮಠದಲ್ಲಿ ಶ್ರೀ ಮಠದ ಭಕ್ತರು ಹಾಗೂ ಗ್ರಾಮಸ್ಥರು ಹಮ್ಮಿಕೊಂಡಿದ್ದ ಶ್ರೀ ಮಹೇಶ್ವರ ಶ್ರೀಗಳ 52ನೇ ಜನ್ಮ ವರ್ದಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಮಠ- ಮಾನ್ಯಗಳು ಶಿಕ್ಷಣದ ಜೊತೆಗೆ ಮಾನವೀಯ ಮೌಲ್ಯ ಧರ್ಮ ಸಂಸ್ಕೃತಿಯ ನೆಲಗಟ್ಟಿನ ಬಗ್ಗೆ ತಿಳಿಸುವ ಕೆಲಸವನ್ನು ಮಾಡುತ್ತಿದೆ. ಸಮಾಜಸೇವೆಯಲ್ಲಿ ತಮ್ಮನ್ನು ತಾವು ತೊಡಗಿಕೊಂಡರೆ ಬದುಕಲ್ಲಿ ಸಾರ್ಥಕತೆಯನ್ನು ಕಾಣಲು ಸಾಧ್ಯ. ಜೂನ್ ತಿಂಗಳು ಮುಗಿಯುತ್ತಾ ಬಂದರೂ ಮಳೆಯಾಗುತ್ತಿಲ್ಲ, ಇದರಿಂದ ರೈತಾಪಿ ವರ್ಗ ಪ್ರತಿನಿತ್ಯ ಮಳೆಗಾಗಿ ದೇವರನ್ನು ಪ್ರಾರ್ಥಿಸುತ್ತಿದ್ದಾರೆ. ರಾಜ್ಯದಲ್ಲಿ ಉತ್ತಮ ಮಳೆ ಬೆಳೆಯಾಗಿ ರೈತರ ಬದುಕು ಹಸನಾಗಲಿ ಎಂದು ದೇವರನ್ನು ಪ್ರಾರ್ಥಿಸೋಣ ಎಂದು ಸಲಹೆ ನೀಡಿದರು.

ನಮ್ಮ 52ನೇ ವರ್ಷದ ಜನ್ಮದಿನವನ್ನು ಶ್ರೀಮಠದ ಭಕ್ತರು ಹಾಗೂ ಗ್ರಾಮಸ್ಥರು ಆಚರಿಸುತ್ತಿದ್ದಾರೆ. ಪುರವರ್ಗ ಹಿರೇಮಠದ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಶಿಕ್ಷಣ ಸೇರಿದಂತೆ ಸಮಾಜಮುಖಿ ಕೆಲಸಗಳಿಗೆ ಹೆಚ್ಚಿನ ಒತ್ತು ನೀಡುವ ಮೂಲಕ ಸ್ಪಂದಿಸುವ ಕೆಲಸವನ್ನು ಮಾಡಲಾಗುತ್ತಿದೆ ಎಂದರು.

ತಾಲ್ಲೂಕು ಅರ್ಚಕರ ಸಂಘದ ಅಧ್ಯಕ್ಷ ಶ್ರೀಧರಮೂರ್ತಿ ಮಾತನಾಡಿ, ತಾಲ್ಲೂಕಿನಲ್ಲಿ ಧಾರ್ಮಿಕ ಪರಂಪರೆ ಉಳಿಸುವ ನಿಟ್ಟಿನಲ್ಲಿ ಡಾ.ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ ಹೆಚ್ಚು ಶ್ರಮಿಸುತ್ತಿದ್ದಾರೆ. ಆಧುನಿಕ ಯುಗದಲ್ಲಿ ನಾವೆಲ್ಲರೂ ವೈಜ್ಞಾನಿಕ ಯುಗಕ್ಕೆ ಹೆಚ್ಚು ಮಹತ್ವ ಕೊಡುತ್ತಿದ್ದೇವೆ. ಆದರೆ ಎಷ್ಟೇ ವೈಜ್ಞಾನಿಕವಾಗಿ ಬೆಳೆದರೂ ನಮ್ಮ ಮಣ್ಣಿನ ನೆಲಗಟ್ಟಿನ ಪವಿತ್ರತೆಯನ್ನು ಎಂದು ಮರೆಯಬಾರದು, ಈ ಬಗ್ಗೆ ಎಲ್ಲರೂ ಚಿಂತಿಸುವ ಅಗತ್ಯವಿದೆ ಎಂದರು.

ನಾಗರಿಕ ವೇದಿಕೆ ಅಧ್ಯಕ್ಷ ತೋಟಿ ನಾಗರಾಜ್, ಎಪಿಎಂಸಿ ಮಾಜಿ ಅಧ್ಯಕ್ಷ ದೊರೆಸ್ವಾಮಿ, ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಎನ್.ಜೆ.ಸೋಮನಾಥ್, ಗ್ರಾ.ಪಂ. ಮಾಜಿ ಅಧ್ಯಕ್ಷ ಎನ್.ಎಸ್.ಮಂಜುನಾಥ್, ನಟರಾಜ ಯಾದವ್, ಚಾರಿಟಬಲ್ ಟ್ರಸ್ಟ್ ಉಪಾಧ್ಯಕ್ಷ ಎನ್.ಸಿ. ಕುಮಾರ ಸ್ವಾಮಿ, ಅರ್ಚಕ ಪ್ರಸನ್ನ ಕೇಶವಚಾರ್, ರವೀಶ್‌ಆಚಾರ್, ಪ್ರಮುಖರಾದ ಹೋಟೆಲ್ ಗುರು, ವಿನಯ್ ಬಸವಲಿಂಗಪ್ಪ, ಎನ್.ಎನ್. ಮನು, ಹೋಟೆಲ್ ಮಂಜು, ನಾಗರಾಜ್, ಪಟೇಲ್ ಮುನ್ನ, ಹೋಟೆಲ್ ರಾಜಣ್ಣ, ತ್ರಿಣೇಶ್, ಪ್ರದೀಪ್, ವಿರೂಪಾಕ್ಷ, ಸೇರಿದಂತೆ ಶ್ರೀಮಠದ ಭಕ್ತರು ಹಾಗೂ ಗ್ರಾಮಸ್ಥರು ಹಾಜರಿದ್ದರು.

## ಅಡ್ಡ ಮತದಾನ ಆರೋಪ : ಹೆಚ್.ಕೆ.ಸುರೇಶ್ ಪ್ರಮಾಣ

» ಮೊದಲನೇ ಪುಟದಿಂದ

ಪಕ್ಷದಲ್ಲಿ ಇದ್ದು, ಪ್ರಾಮಾಣಿಕವಾಗಿ ವಿಪಕ್ಷ ನಾಯಕರು ಸೂಚಿಸಿದಂತೆ ನಾನು ಮತ ಚಲಾವಣೆ ಮಾಡಿದ್ದೇನೆ. ಯಾವುದೇ ಅಡ್ಡ ಮತದಾನ ಮಾಡಿಲ್ಲ, ಅದಕ್ಕೆ ಪರಮಾತ್ಮನೇ ಸಾಕ್ಷಿ ಎಂದು ಆಣೆ ಮಾಡಿದರು.

ಅಡ್ಡ ಮತದಾನ ಮಾಡಿದವರನ್ನು ಪತ್ತೆ ಹಚ್ಚಲು ಮಾಜಿ ಸಚಿವ ಸಿ.ಟಿ.ರವಿ ಅವರ ನೇತೃತ್ವದಲ್ಲಿ ಸಮಿತಿ ಮಾಡಿದ್ದು, ಈಗಾಗಲೇ ವರದಿಯನ್ನು ಬಿಜೆಪಿ ರಾಜ್ಯಾಧ್ಯಕ್ಷರಿಗೆ ನೀಡಲಾಗಿದೆ. ಆದರೆ, ಶಾಸಕ ಹೆಚ್.ಕೆ.ಸುರೇಶ್ ಅವರು ಮಾತ್ರ ಶ್ರೀ ಚನ್ನಕೇಶವಸ್ವಾಮಿ ಹಾಗು ಶ್ರೀ ಮಂಜುನಾಥ ಸ್ವಾಮಿ ಮೇಲೆ ಆಣೆ ಮಾಡುತ್ತಿರುವುದು ಹಲವು ಪ್ರಶ್ನೆಗಳನ್ನು ಹುಟ್ಟು ಹಾಕಿದ್ದು, ಷಡ್ಯಂತ್ರ ನಡೆದಿದೆಯಾ ಎಂಬ ಅನುಮಾನ ಹುಟ್ಟು ಹಾಕಿದೆ ಎಂದು ಶಾಸಕರ ಬೆಂಬಲಿಗರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ಕುತಂತ್ರಿಗಳಿಂದ ಷಡ್ಯಂತ್ರ**

ಈ ವೇಳೆ ಮಾತನಾಡಿದ ಹೆಚ್.ಕೆ.ಸುರೇಶ್ ಅವರು, ಪಕ್ಷ ನಿಷ್ಠೆ, ಪ್ರಾಮಾಣಿಕತೆಗೆ ಕುತಂತ್ರಿಗಳು ಷಡ್ಯಂತ್ರ ಮಾಡಿದ್ದಾರೆ. ನಾನು ಅಡ್ಡ ಮತದಾನ ಮಾಡಿಲ್ಲ. ಧರ್ಮಸ್ಥಳದ ಮೇಲೆ ಬುರುಡೆ ಗ್ಯಾಂಗ್ ಹೇಗೆ ಷಡ್ಯಂತ್ರ ಮಾಡಿತ್ತೋ ಅದೇ ರೀತಿ ನನ್ನ ವಿರುದ್ಧ ಷಡ್ಯಂತ್ರ ನಡೆದಿದೆ. ಜಿಲ್ಲೆಯಲ್ಲಿ ಕ್ಷೇತ್ರದ ಮತದಾರರ ಜೊತೆ ಪ್ರಾಮಾಣಿಕ ಸೇವೆ ಮಾಡುತ್ತಿದ್ದು, ನನ್ನ ಶಕ್ತಿ ಹೆಚ್ಚುತ್ತಿದೆ, ಅದನ್ನು ಸಹಿಸಲಾಗದ ಪಿತೂರಿ ನಡೆದಿದೆ. ನನಗೆ ಪಕ್ಷ ತಾಯಿ ಇದ್ದ ಹಾಗೆ, ಇಂತಹವರ ಮೇಲೆ ಆರೋಪ ಹೊರಿಸಿದವರನ್ನ ದೇವರೇನೋಡಿಕೊಳ್ಳಲಿ. ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕೆಂದು ಆಕ್ರೋಶ ವ್ಯಕ್ತಪಡಿಸಿದರು.

# ಏಷ್ಯನ್ ಕ್ರೀಡಾಕೂಟಕ್ಕೆ ಭಾರತ ತಂಡ

## ಹರ್ಮನ್‌ಪ್ರೀತ್ ಕೌರ್ ನಾಯಕಿ, ಸ್ಮೃತಿ ಮಂದಾನ ಉಪನಾಯಕಿ

• ಪ್ರಜೋದಯ ವರದಿ

**ನವದೆಹಲಿ:** ಭಾರತ ಮಹಿಳಾ ಕ್ರಿಕೆಟ್ ತಂಡವು ಇಂಗ್ಲೆಂಡ್‌ನಲ್ಲಿ ನಡೆಯುತ್ತಿರುವ ಐಸಿಸಿ ಟಿ-20 ವಿಶ್ವಕಪ್‌ನಲ್ಲಿ ನಿರೀಕ್ಷಿತ ಪ್ರದರ್ಶನ ತೋರದೆ, ಲೀಗ್‌ನಲ್ಲಿಯೇ ಹೊರಬಿದ್ದಿದೆ. ಈ ನಡುವೆ ಮುಂಬರುವ ಏಷ್ಯನ್ ಕ್ರೀಡಾಕೂಟಕ್ಕೆ ಹರ್ಮನ್‌ಪ್ರೀತ್ ಕೌರ್ ನಾಯಕತ್ವದ 15 ಸದಸ್ಯರ ಭಾರತ ಮಹಿಳಾ ತಂಡವನ್ನು ಪ್ರಕಟಿಸಲಾಗಿದೆ.

ಏಷ್ಯನ್ ಕ್ರೀಡಾಕೂಟವು ಸೆ.19ರಿಂದ ಅಕ್ಟೋಬರ್ 4ರವರೆಗೆ ಜಪಾನ್‌ನ ಐಚಿ- ನಗೋಯಾದಲ್ಲಿ ನಡೆಯಲಿದೆ. ಐಸಿಸಿ ಟಿ-20 ವಿಶ್ವಕಪ್‌ನ ಗುಂಪು ಹಂತದಲ್ಲಿ ಆಸ್ಟ್ರೇಲಿಯಾ ವಿರುದ್ಧ ಸೋಲುವ ಮೂಲಕ ಭಾರತ ತಂಡವು ತನ್ನ ಅಭಿಯಾನ ಕೊನೆಗೊಳಿಸಿದೆ.

2023ರಲ್ಲಿ ಚೀನಾದ ಹ್ಯಾಂಗ್‌ಝೌನಲ್ಲಿ ನಡೆದ ಏಷ್ಯನ್ ಗೇಮ್ಸ್ ಆವೃತ್ತಿಯಲ್ಲಿ ಭಾರತ ಮಹಿಳಾ ತಂಡವು ಚಿನ್ನದ ಪದಕ ಗೆದ್ದುಕೊಂಡಿತ್ತು. ಟಿ-20 ಸ್ವರೂಪದಲ್ಲಿ ನಡೆಯಲಿರುವ ಈ ಕ್ರೀಡಾಕೂಟದಲ್ಲಿ ಹಾಲಿ ಚಾಂಪಿಯನ್ ಭಾರತ ತಂಡವು ಮತ್ತೊಂದು ಪ್ರಶಸ್ತಿ ಮೇಲೆ ಕಣ್ಣಿಟ್ಟಿದೆ.

ಐಸಿಸಿ ಟಿ-20 ವಿಶ್ವಕಪ್‌ನಲ್ಲಿ ಭಾರತ ತಂಡದ ಕಳಪೆ ಪ್ರದರ್ಶನದ ಬಳಿಕ ನಾಯಕಿ ಕೌರ್ ಅವರು ವ್ಯಾಪಕ ಟೀಕೆಗೆ ಒಳಗಾಗಿದ್ದರು. ಅದರ ಹೊರತಾಗಿಯೂ ಆಯ್ಕೆ ಸಮಿತಿ 37 ವರ್ಷದ ಹರ್ಮನ್‌ಪ್ರೀತ್ ಕೌರ್ ಅವರನ್ನೇ ನಾಯಕಿಯನ್ನಾಗಿ ಮುಂದುವರೆಸಿದೆ. ಈ ತಂಡಕ್ಕೆ ಸ್ಮೃತಿ ಮಂದಾನ ಉಪನಾಯಕಿಯಾಗಿ ಆಯ್ಕೆಯಾಗಿದ್ದಾರೆ.

ವಿಶ್ವಕಪ್‌ನಲ್ಲಿದ್ದ ಆಟಗಾರ್ತಿಯರ ಪೈಕಿ ವಿಕೆಟ್ ಕೀಪರ್ ಬ್ಯಾಟರ್ ಯಸ್ತಿಕಾ ಭಾಟಿಯಾ ಅವರನ್ನು ಕೈಬಿಡಲಾಗಿದ್ದು, ಅವರ ಜಾಗಕ್ಕೆ ಜಿ.ಕಮಲಿನಿ ಅವರನ್ನು ಆಯ್ಕೆ ಮಾಡಲಾಗಿದೆ. ವಿಶ್ವಕಪ್ ನಡುವೆ ಪಾದದ ಗಾಯಕ್ಕೆ ತುತ್ತಾಗಿದ್ದ ಕನ್ನಡತಿ ಆಲ್‌ರೌಂಡರ್ ಶ್ರೇಯಾಂಕ ಪಾಟೀಲ್ ಅವರನ್ನು ತಂಡಕ್ಕೆ ಸೇರಿಸಿಕೊಳ್ಳಲಾಗಿದೆ. ಅದಾಗ್ಯೂ ಅವರಿಗೆ ಫಿಟ್‌ನೆಸ್ ಸಾಭೀತು ಪಡಿಸುವ ಸವಾಲು ಇದೆ.



ಭಾರತ ಮಹಿಳಾ ತಂಡವು ಟಿ-20 ವಿಶ್ವಕಪ್‌ನಲ್ಲಿ ಗುಂಪು ಹಂತದಿಂದಲೇ ಹೊರಬಿದ್ದರೂ, 2028ರಲ್ಲಿ ಲಾಸ್ ಏಂಜಲೀಸ್‌ನಲ್ಲಿ ನಡೆಯಲಿರುವ ಒಲಿಂಪಿಕ್ಸ್‌ಗೆ ಏಷ್ಯಾದಿಂದ ನೇರ ಅರ್ಹತೆ ಗಿಟ್ಟಿಸಿಕೊಂಡಿದೆ.

**ಭಾರತದ ತಂಡ:** ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪನಾಯಕಿ), ಶಫಾಲಿ ವರ್ಮಾ, ಜೆಮಿಮಾ ರಾಡ್ರಿಗಸ್, ದೀಪ್ತಿ ಶರ್ಮಾ, ರಿಚಾ ಘೋಷ್ (ವಿಕೆಟ್ ಕೀಪರ್), ಜಿ ಕಮಲಿನಿ (ವಿಕೆಟ್ ಕೀಪರ್), ಭಾರತಿ ಫುಲ್ಮಾಲಿ, ಶ್ರೀ ಚರಣಿ, ರೇಣುಕಾ ಠಾಕೂರ್, ಕ್ರಾಂತಿಗೌಡ್, ಅರುಂಧತಿ ರೆಡ್ಡಿ, ಶ್ರೇಯಾಂಕ ಪಾಟೀಲ್, ರಾಧಾ ಯಾದವ್, ನಂದನಿ ಶರ್ಮಾ.

## ರೈತರು ಪರ್ಯಾಯ ಬೆಳೆಗಳತ್ತ ಗಮನ ಹರಿಸಬೇಕು

» ಮೊದಲನೇ ಪುಟದಿಂದ

ನೀಡಿದ್ದೇಕೆಂದು ಪ್ರಶ್ನಿಸಿ, ಪರ್ಯಾಯ ಬೆಳೆಗಳ ಕುರಿತು ಮೊದಲೇ ಜಾಗೃತಿ ಮೂಡಿಸಬೇಕಿತ್ತೆಂದು ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ ರಸಗೊಬ್ಬರ ಕೊರತೆ ಉಂಟಾಗಿದ್ದು, ಅಗತ್ಯ ಸಮಯದಲ್ಲಿ ಗೊಬ್ಬರ ದೊರೆಯುತ್ತಿಲ್ಲ. ಗೊಬ್ಬರ ಪಡೆಯಲು ರೈತರು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆಂದು ಸಭೆಯಲ್ಲಿ ಅಧಿಕಾರಿಗಳ ಗಮನ ಸೆಳೆದರು.

ಪ್ರತಿಕ್ರಿಯಿಸಿದ ಕೃಷಿ ಅಧಿಕಾರಿಗಳು, ರಾಸಾಯನಿಕ ಯೂರಿಯಾದ ಅತಿಯಾದ ಬಳಕೆಯಿಂದ ಮಣ್ಣಿನ ಫಲವತ್ತತೆ ಕುಸಿಯುತ್ತಿರುವ ಹಿನ್ನಲೆಯಲ್ಲಿ ನ್ಯಾನೋ ಯೂರಿಯಾ ಬಳಕೆಗೆ ಉತ್ತೇಜನ ನೀಡಲಾಗುತ್ತಿದೆ. ಸಮತೋಲನದ ರಸಗೊಬ್ಬರ ಬಳಕೆಯಿಂದ ಉತ್ಪಾದನೆ ಹೆಚ್ಚಿಸುವ ಜೊತೆಗೆ ಮಣ್ಣಿನ ಆರೋಗ್ಯವನ್ನೂ ಕಾಪಾಡಬಹುದೆಂದು ಸಲಹೆ ನೀಡಿದರು.

**ಬೆಳೆ ಸಮೀಕ್ಷೆ ನಿಖರವಾಗಿರಬೇಕು**

ಜಿಲ್ಲೆಯ ಕೃಷಿ ಸಿಬ್ಬಂದಿ ಬೆಳೆ ಸಮೀಕ್ಷೆ ಕಾರ್ಯವನ್ನು ಅತ್ಯಂತ ನಿಖರವಾಗಿ ನಡೆಸಬೇಕು. ಹಿಂದಿನ ವರ್ಷ ಸುಮಾರು 90 ಸಾವಿರ ಹೆಕ್ಟೇರ್‌ನಲ್ಲಿ ಮಾತ್ರ ರಾಗಿ ಬಿತ್ತನೆಯಾಗಿದ್ದರೂ, ಸಮೀಕ್ಷೆಯಲ್ಲಿ 1.34 ಲಕ್ಷ ಹೆಕ್ಟೇರ್ ಎಂದು ದಾಖಲಾಗಿತ್ತು. ಇಂತಹ ಲೋಪಗಳು ಮುಂದಿನ ಯೋಜನೆಗಳ ಮೇಲೆ ಪರಿಣಾಮ ಬೀರುವುದರಿಂದ ಅಧಿಕಾರಿಗಳು ಕಡ್ಡಾಯವಾಗಿ ಜಮೀನುಗಳಿಗೆ ಭೇಟಿ ನೀಡಿ ಬೆಳೆದಿರುವ ಬೆಳೆಗಳನ್ನೇ ದಾಖಲಿಸಬೇಕೆಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ರಮೇಶ್ ಕುಮಾರ್ ಅವರು ಸೂಚಿಸಿದರು.

## ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ಪ್ರಾರಂಭ

» ಮೊದಲನೇ ಪುಟದಿಂದ

ಸ್ಪಷ್ಟವಾಗಿ ಪ್ರಸ್ತಾಪ ಆಗುತ್ತಿದೆ. ಅಧಿಕಾರಿಗಳು ಬಹಳ ತಾಳ್ಮೆಯಿಂದ ಸ್ಪಂದಿಸಿದ ಹಾಗೆ ಜನಸಾಮಾನ್ಯರ ಜೊತೆ ನಡೆದುಕೊಳ್ಳಬೇಕೆಂದು ಜಿಲ್ಲಾಧಿಕಾರಿ ಅವರು ಸೂಚನೆ ಕೊಡಬೇಕು. ಯಾರು ಗಾಬರಿಗೊಳ್ಳದೆ ಎರಡು ದಾಖಲೆಗಳನ್ನು ಇಟ್ಟುಕೊಂಡು ಎಸ್‌ಐಆರ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕೆಂದು ಕರೆ ನೀಡಿದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಮಾತನಾಡಿ, ಇಂದಿನಿಂದ ಒಂದು ತಿಂಗಳ ಕಾಲ ನಡೆಯುವ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯದಲ್ಲಿ ಮತಗಟ್ಟೆ ಅಧಿಕಾರಿಗಳು ಮನೆ-ಮನೆಗೆ ಭೇಟಿ ನೀಡಿ ಮತದಾರ ಸಮಗ್ರ ಪರಿಷ್ಕರಣೆ ಮಾಡಲಿದ್ದಾರೆ. ಈ ವೇಳೆ ಪ್ರತಿ ಮನೆಯಲ್ಲಿ ಸದಸ್ಯರು ಅಧಿಕಾರಿಗಳು ನೀಡುವ ಅರ್ಜಿ ಭರ್ತಿ ಮಾಡಿ ಎಲ್ಲಾ ಮಾಹಿತಿ ಒದಗಿಸಿ ಈ ಕಾರ್ಯಕ್ಕೆ ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಅರ್ಜಿಯಲ್ಲಿ ಕೇಳಿರುವ ಸರಳ ಮಾಹಿತಿಗಳನ್ನು ಅಧಿಕಾರಿಗಳಿಗೆ ನೀಡಬೇಕು, ಮನೆಯಲ್ಲಿ ಒಬ್ಬರೇ ಸದಸ್ಯರು ಇದ್ದು, ಇನ್ನುಳಿದವರು ಸ್ಥಳದಲ್ಲಿ ಇಲ್ಲದಿದ್ದರೂ ಮನೆಯಲ್ಲಿರುವ ಸದಸ್ಯರೇ ಇತರ ಸದಸ್ಯರ ಮಾಹಿತಿಯನ್ನು ಅಧಿಕಾರಿಗಳಿಗೆ ನೀಡಬಹುದು. ಅರ್ಜಿದಾರರ ಸಂಬಂಧಿಕರ ಬಗ್ಗೆಯೂ ಮಾಹಿತಿ ನೀಡಿ ಪರಿಷ್ಕರಣೆಯಲ್ಲಿ ಪಾಲ್ಗೊಳ್ಳಬಹುದೆಂದು ಮಾಹಿತಿ ನೀಡಿದರು.

ಇಂದು ನಗರದಲ್ಲಿ ಬೆಳಿಗ್ಗೆ 7 ಗಂಟೆಯಿಂದಲೇ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ಆರಂಭವಾಗಿದ್ದು, ಈಗಾಗಲೇ ಮತಗಟ್ಟೆ ಅಧಿಕಾರಿಗಳು ಪ್ರತೀ ಮನೆ-ಮನೆಗೆ ಭೇಟಿ ನೀಡಲು ಆರಂಭಿಸಿದ್ದಾರೆ. ಜೊತೆಗೆ ತಾನು ಖುದ್ದು ಅಂತರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತರಾದ ಸಾಹಿತಿ ಬಾನು ಮುಷ್ತಾಕ್ ಅವರ ಮನೆಗೆ ಆಗಮಿಸಿದ್ದು, ಅವರ ಕೈಯಿಂದಲೇ ಅರ್ಜಿ ಭರ್ತಿ ಮಾಡಿಸುವ ಮೂಲಕ ಪರಿಷ್ಕರಣೆ ಆರಂಭಿಸಿದ್ದೇವೆ ಎಂದರು.

ಈ ವೇಳೆ ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್, ತಹಶೀಲ್ದಾರ್ ಗೀತಾ, ಮಹಾನಗರ ಪಾಲಿಕೆ ಆಯುಕ್ತ ಕೃಷ್ಣಮೂರ್ತಿ, ಚುನಾವಣಾ ಶಾಖೆ ಅಧಿಕಾರಿಗಳು, ಮತಗಟ್ಟೆ ಅಧಿಕಾರಿಗಳು ಇದ್ದರು.

> **ಎಸ್‌ಐಆರ್ ಎಂಬುದು ದುರುದ್ದೇಶ ಪೂರ್ವಕವಾಗಿ, ನಾಗರಿಕರನ್ನು ಕಾಡಿಸೋದಕ್ಕೆ, ಪ್ರಜೆಗಳನ್ನು ಹಿಂಸಿಸುವುದಕ್ಕೆ ಮಾಡಿರುವ ಪ್ರಕ್ರಿಯೆ ಎಂಬ ಭಾವನೆ ನನಗಿತ್ತು. ಜಿಲ್ಲಾಧಿಕಾರಿ ಅವರು ಇಂದು ನಮ್ಮ ಮನೆಗೆ ಬಂದು ಉದ್ಘಾಟನೆ ಮಾಡುತ್ತಾರೆಂದಾಗ ಗಾಬರಿ ಆಗಿತ್ತು. ಏನೇನು ದಾಖಲೆಗಳನ್ನು ಸಂಗ್ರಹಿಸಬೇಕು, ಕೊಡಬೇಕೆಂದು ಬಹಳ ಗಾಬರಿಗೊಂಡಿದ್ದೆ. ಆದರೆ, ಈ ಪ್ರಕ್ರಿಯೆಗೆ ಒಳಗಾದಾಗ ಬಹಳ ಸರಳ ಹಾಗು ಅಗತ್ಯ ಎನಿಸಿತು.**
> **- ಭಾನು ಮುಷ್ತಾಕ್, ಬೂಕರ್ ಪ್ರಶಸ್ತಿ ವಿಜೇತೆ**

## ಮನೆ-ಮನೆಗೆ ತೆರಳಿದ ಬಿಎಲ್‌ಒಗಳು

• ಪ್ರಜೋದಯ ವರದಿ

**ಮಾಡಾಳು:** ರಾಜ್ಯ ಚುನಾವಣಾ ಆಯೋಗದ ನಿರ್ದೇಶನದಂತೆ ನಡೆಯುತ್ತಿರುವ ವಿಶೇಷ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಅಭಿಯಾನಕ್ಕೆ ಅರಸೀಕೆರೆ ತಾಲ್ಲೂಕಿನ ಮಾಡಾಳು ಗ್ರಾಮದಲ್ಲಿ ಮಂಗಳವಾರ ಚಾಲನೆ ನೀಡಲಾಯಿತು.

ಮಾಡಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಐದು ಮತಗಟ್ಟೆಗಳ ಪೈಕಿ ಎರಡನೇ ಮತಗಟ್ಟೆ ವ್ಯಾಪ್ತಿಯ ಮನೆಗಳಿಗೆ ಬಿಎಲ್‌ಒ ಆನಂದ್ ಭೇಟಿ ನೀಡಿ ಮತದಾರರ ವಿವರಗಳನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮತದಾರರು



ಸಮಗ್ರ ಹಾಗು ನಿಖರ ಮಾಹಿತಿಯನ್ನು ನೀಡುವ ಮೂಲಕ ಪರಿಷ್ಕರಣೆ ಕಾರ್ಯಕ್ಕೆ ಸಹಕರಿಸಬೇಕು. ಅಧಿಕಾರಿಗಳು ನೀಡುವ ಅರ್ಜಿಗಳನ್ನು ಸರಿಯಾಗಿ ಭರ್ತಿ ಮಾಡಿ ಅಗತ್ಯ ದಾಖಲೆಗಳನ್ನು ಸಲ್ಲಿಸಬೇಕೆಂದು ತಿಳಿಸಿದರು.

ಕುಟುಂಬ ಸದಸ್ಯರು ತಾತ್ಕಾಲಿಕವಾಗಿ ಮನೆಯಲ್ಲಿ ಇಲ್ಲದಿದ್ದರೂ ಅವರ ಹೆಸರುಗಳನ್ನು ಮತದಾರರ ಪಟ್ಟಿಯಲ್ಲಿ ಸೇರಿಸಬಹುದು. ಮೃತಪಟ್ಟಿರುವ ವ್ಯಕ್ತಿಗಳ ಹೆಸರುಗಳನ್ನು ನಿಯಮಾನುಸಾರ ಮತದಾರರ ಪಟ್ಟಿಯಿಂದ ಕೈಬಿಡಲಾಗುವುದು. ಗೊಂದಲಗಳಿಗೆ ಒಳಗಾಗದೆ ಅಧಿಕಾರಿಗಳಿಗೆ ಸಹಕರಿಸುವಂತೆ ಸಾರ್ವಜನಿಕರಿಗೆ ಮನವಿ ಮಾಡಿದರು.

ಬಿಎಲ್‌ಒಗಳಾದ ಎಂ.ಟಿ. ರಂಗನಾಥ್, ಶಿವಲಿಂಗಪ್ಪ, ಎಂ.ಡಿ. ಸೋಮಶೇಖರ್, ತಿಮ್ಮಯ್ಯ, ದಾಸಪ್ಪ, ಎಂ.ರವಿ ಇದ್ದರು.

## ಮತದಾರರ ಪಟ್ಟಿ ಪರಿಷ್ಕರಣೆಗೆ ಪರಿಶೀಲನೆ

• ಪ್ರಜೋದಯ ವರದಿ

**ಅರಸೀಕೆರೆ:** ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆಗೆ ತಹಶೀಲ್ದಾರ್ ಎಂ.ಜೆ. ಸಂತೋಷ್ ಕುಮಾರ್ ಅವರು ಮಂಗಳವಾರ ಅಧಿಕಾರಿಗಳ ತಂಡದೊಂದಿಗೆ ನಗರದ ಮತಗಟ್ಟೆ ಸಂಖ್ಯೆ 124ರ ವ್ಯಾಪ್ತಿಯಲ್ಲಿ ಮನೆ ಮನೆಗೆ ಭೇಟಿ ನೀಡಿ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯವನ್ನು ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಅಧಿಕಾರಿಗಳು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ, ತಿದ್ದುಪಡಿ, ವಿಳಾಸ ಬದಲಾವಣೆ ಸೇರಿ ವಿವಿಧ ವಿವರಗಳನ್ನು ಪರಿಶೀಲಿಸಿದರು. ಅರ್ಹ ಮತದಾರರು ಕಡ್ಡಾಯವಾಗಿ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕೆಂದು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.



ಮನೆಗಳಿಗೆ ಭೇಟಿ ನೀಡಿದ ಅಧಿಕಾರಿಗಳು ಮತದಾರರ ಪಟ್ಟಿಯಲ್ಲಿನ ಮಾಹಿತಿಯನ್ನು ಪರಿಶೀಲಿಸಿ, ಅಗತ್ಯ ದಾಖಲೆಗಳನ್ನು ಸಲ್ಲಿಸಿ ಪರಿಷ್ಕರಣೆ ಕಾರ್ಯಕ್ಕೆ ಸಹಕರಿಸುವಂತೆ ಸಾರ್ವಜನಿಕರಿಗೆ ಮನವಿ ಮಾಡಿದರು.

## ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯಕ್ಕೆ ಸಾರ್ವಜನಿಕರು ಸಹಕರಿಸಬೇಕು



• ಪ್ರಜೋದಯ ವರದಿ

**ಸಕಲೇಶಪುರ:** ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಕ್ಷೇತ್ರದ ಪ್ರತಿಯೊಬ್ಬ ಅರ್ಹ ಮತದಾರರು ಕಡ್ಡಾಯವಾಗಿ ಭಾಗವಹಿಸಿ, ಮತದಾರರ ಪಟ್ಟಿಯನ್ನು ನಿಖರಗೊಳಿಸಲು ಸಹಕರಿಸಬೇಕೆಂದು ಶಾಸಕ ಸಿಮೆಂಟ್ ಮಂಜು ಮನವಿ ಮಾಡಿದರು.

ತಮ್ಮ ನಿವಾಸದಲ್ಲಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಅಭಿಯಾನದಡಿ ಉಪವಿಭಾಗಾಧಿಕಾರಿ ಹುಲ್ಲುಮನಿ ತಮ್ಮಣ್ಣ, ಚುನಾವಣೆ ಅಧಿಕಾರಿಗಳು ಹಾಗೂ ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ತಮ್ಮ ಹಾಗೂ ತಮ್ಮ ಪತ್ನಿಯ ಮತದಾರರ ಪಟ್ಟಿ ಪರಿಶೀಲನೆ ಮತ್ತು ಎಣಿಕೆ ಪ್ರಕ್ರಿಯೆ ಪೂರ್ಣಗೊಳಿಸಿದ ಬಳಿಕ ಅವರು ಮಾತನಾಡಿ, ಕ್ಷೇತ್ರದ ಪ್ರತಿಯೊಬ್ಬ ಮತದಾರರೂ ಬಿಎಲ್‌ಒಗಳು ಮನೆಗೆ ಬಂದಾಗ ಅಗತ್ಯ ನಮೂನೆಗಳನ್ನು ಭರ್ತಿ ಮಾಡಿ ಒಂದು ಪ್ರತಿಯನ್ನು ತಮ್ಮ ಬಳಿ ಇಟ್ಟುಕೊಂಡು ಮತ್ತೊಂದು ಪ್ರತಿಯನ್ನು ಅಧಿಕಾರಿಗಳಿಗೆ ನೀಡಬೇಕು.

ಮದುವೆಯಾಗಿ ಬೇರೆ ಊರಿನಿಂದ ಬಂದವರು ಅಥವಾ ಬೇರೆ ಕ್ಷೇತ್ರದಿಂದ ಇಲ್ಲಿಗೆ ಮತದಾರರ ಹೆಸರನ್ನು ವರ್ಗಾಯಿಸಿಕೊಳ್ಳಬೇಕಾದವರು ಸಂಬಂಧಿಸಿದ ನಮೂನೆಯಲ್ಲಿ ಹಿಂದಿನ ಮತಗಟ್ಟೆಯ ವಿವರಗಳನ್ನು ನೀಡಿ ಹೊಸ ಸ್ಥಳಕ್ಕೆ ಹೆಸರು ಸೇರ್ಪಡೆ ಮಾಡಿಸಿಕೊಳ್ಳಬೇಕು. ಪ್ರತಿಯೊಬ್ಬರೂ ಈ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಸರಿಯಾಗಿ ದಾಖಲಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕೆಂದು ಹೇಳಿದರು.

ಉಪವಿಭಾಗಾಧಿಕಾರಿ ಹುಲ್ಲುಮನಿ ತಮ್ಮಣ್ಣ, ಚುನಾವಣೆ ಶಿರಸ್ತೇದಾರ್ ಜನಾರ್ಧನ್, ಕಂದಾಯ ನಿರೀಕ್ಷಕರಾದ ಧಾನುಪ್ರಕಾಶ್, ಮೋಹನ್ ಕುಮಾರ್, ವಸಂತ ಕುಮಾರ್, ಗ್ರಾಮಾಧಿಕಾರಿ ವಂದಿತ, ಬಿಎಲ್‌ಒ ಗೌರಿ, ಬಿಎಲ್ ಒ ಸೂಪರ್‌ವೈಸರ್ ಶಶಿಧರ್ ಇದ್ದರು.

## ಜನರ ಆಶೀರ್ವಾದದಿಂದ ಗೆದ್ದಿದ್ದೇನೆ, ಲಾಟರಿಯಿಂದಲ್ಲ

» ಮೊದಲನೇ ಪುಟದಿಂದ

ಸೇವೆಗೆ ಜೀವನ ಮುಡುಪಿಟ್ಟಿದ್ದೇವೆ. ನಾನು ಬೆಂಗಳೂರು ಮತ್ತೊಂದು ಕಡೆ ಇಲ್ಲ. ರಾಜಕೀಯವನ್ನು ಚಿಕ್ಕವಯಸ್ಸಿನಿಂದಲೇ ನೋಡಿಕೊಂಡೇ ಬಂದಿದ್ದೇನೆ ಎಂದರು.

ಮೈತ್ರಿ ರಾಜಕಾರಣದ ಕುರಿತು ಪ್ರತಿಕ್ರಿಯಿಸಿದ ಅವರು, ನಾನು ಯಾವಾಗಲೂ ಮೈತ್ರಿ ಧರ್ಮ ಪಾಲನೆ ಮಾಡುವವನು. ಮೈತ್ರಿಗೆ ಧಕ್ಕೆ ಬಾರದಂತೆ ನಡೆದುಕೊಳ್ಳುತ್ತೇನೆ. ಲೋಕಸಭಾ ಚುನಾವಣೆಯಲ್ಲಿ ಯಾರು ಮೈತ್ರಿ ಧರ್ಮ ಪಾಲನೆ ಮಾಡಿದ್ದಾರೆಂಬುದು ಧರ್ಮಸ್ಥಳಕ್ಕೆ ಹೋಗಿ ಪ್ರಮಾಣ ಮಾಡಿದರೆ ಗೊತ್ತಾಗುತ್ತದೆ. ಈಗಾಗಲೇ ಬಿ.ವೈ.ವಿಜಯೇಂದ್ರ ಅವರು ಆಣೆ ಮಾಡಿ ಬಂದಿದ್ದಾರೆ. ನನ್ನ ಬಗ್ಗೆ ಮಾತನಾಡುವವರೂ ಧರ್ಮಸ್ಥಳಕ್ಕೆ ಹೋಗಿ ಕಳೆದ ಲೋಕಸಭಾ ಚುನಾವಣೆಯಲ್ಲಿ ಮೈತ್ರಿ ಧರ್ಮ ಪಾಲನೆ ಮಾಡಿದ್ದಾರೆಯೇ ಎಂದು ಪ್ರಮಾಣ ಮಾಡಲಿ ಎಂದು ಸವಾಲು ಹಾಕಿದರು.

## ಶಿವಲಿಂಗೇಗೌಡರಿಗೆ ಸಚಿವ ಸ್ಥಾನ ನೀಡಲು ಆಗ್ರಹ



• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ಅರಸೀಕೆರೆ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರಿಗೆ ಸಚಿವ ಸ್ಥಾನ ನೀಡುವಂತೆ ದಲಿತ ಪ್ರಗತಿಪರ ಹೋರಾಟಗಾರ ದಿನೇಶ್ ಅವರು ಒತ್ತಾಯಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂರು ವರ್ಷಗಳಿಂದ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದರೂ ಹಾಸನ ಕ್ಷೇತ್ರ ಹಾಗು ಜಿಲ್ಲೆಯಲ್ಲಿ ನಿರೀಕ್ಷಿತ ಮಟ್ಟದ ಅಭಿವೃದ್ಧಿ ಕಾರ್ಯ ನಡೆದಿಲ್ಲ. ಕ್ಷೇತ್ರದಲ್ಲಿ ಟ್ರಾಫಿಕ್ ಸೇರಿ ಹಲವು ಮೂಲಸೌಕರ್ಯ ಸಮಸ್ಯೆ ಗಳಿವೆ. ಶಾಸಕ ಶಿವಲಿಂಗೇಗೌಡರಿಗೆ ಸಚಿವ ಸ್ಥಾನ ನೀಡಿದರೆ ಜಿಲ್ಲೆಯ ಅಭಿವೃದ್ಧಿಗೆ ಹೆಚ್ಚಿನ ವೇಗ ಸಿಗಲಿದೆ. ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ಈ ಬೇಡಿಕೆ ಇಡುತ್ತಿದ್ದೇವೆ. ಯಾವುದೇ ಪಕ್ಷದ ಪರವಾಗಿ ಹೇಳುತ್ತಿಲ್ಲ. ಜನಹಿತದ ಉದ್ದೇಶದಿಂದ ನಮ್ಮ ಮನದ ಇಂಗಿತ ಮುಂದಿಡುತ್ತಿದ್ದೇವೆ ಎಂದರು.

ರಾಜ್ಯದಲ್ಲಿ ದಲಿತ ಸಮುದಾಯಕ್ಕೆ ಮುಖ್ಯಮಂತ್ರಿ ಸ್ಥಾನ ನೀಡಬೇಕು. ರಾಜ್ಯದ ಹಿರಿಯ ದಲಿತ ನಾಯಕರು ಈ ವಿಚಾರದಲ್ಲಿ ಹೆಚ್ಚು ಧ್ವನಿ ಎತ್ತದಿರುವುದು ಸಮುದಾಯಕ್ಕೆ ಬೇಸರ ತಂದಿದೆ. ಮುಂದಿನ ದಿನಗಳಲ್ಲಿ ದಲಿತರಿಗೆ ಮುಖ್ಯಮಂತ್ರಿ ಸ್ಥಾನ ನೀಡದಿದ್ದರೆ ರಾಜ್ಯಾದ್ಯಂತ ದಲಿತ ಹೋರಾಟಗಾರರು ಒಗ್ಗೂಡಿ ಹೋರಾಟ ನಡೆಸಲಾಗುವುದೆಂದು ಎಚ್ಚರಿಕೆ ನೀಡಿದರು.

ದಲಿತ-ಸಮುದಾಯದ ಬೇಡಿಕೆಗಳನ್ನು ನಿರ್ಲಕ್ಷಿಸಿದರೆ ಕಾಂಗ್ರೆಸ್ ವಿರುದ್ಧ ದಲಿತ ಸಮುದಾಯ ಸಂಘಟಿತವಾಗಿ ನಿಲ್ಲಲಿದ್ದು, ಅಗತ್ಯವಿದ್ದರೆ ಕರ್ನಾಟಕ ದಲಿತ ಪಕ್ಷ ಎಂಬ ಹೊಸ ರಾಜಕೀಯ ಪಕ್ಷ ಸ್ಥಾಪಿಸುವ ಬಗ್ಗೆ ಚಿಂತನೆ ನಡೆಸಲಾಗಿದೆ ಎಂದು ತಿಳಿಸಿದರು. ಮುಖಂಡರಾದ ಸ್ಟೀಫನ್, ಮೋಹನ್, ಥಾಮಸ್, ವೆಂಕಟೇಶ್ ಇದ್ದರು.

## ಬೈಕ್‌ಗಳ ನಡುವೆ ಅಪಘಾತ: ಯುವಕ ಸಾವು

• ಪ್ರಜೋದಯ ವರದಿ

**ಅರಕಲಗೂಡು:** ಎರಡು ಬೈಕ್‌ಗಳ ನಡುವೆ ಸಂಭವಿಸಿದ ಅಪಘಾತದಲ್ಲಿ ಯುವಕನೊಬ್ಬ ಮೃತಪಟ್ಟಿದ್ದು, ಮತ್ತೊಬ್ಬ ಗಾಯಗೊಂಡಿರುವ ಘಟನೆ ರಾಮನಾಥಪುರ-ಬೆಳವಾಡಿ ಮುಖ್ಯ ರಸ್ತೆಯಲ್ಲಿ ನಡೆದಿದೆ. ಹೆಗ್ಗಡಿಹಳ್ಳಿ ಗ್ರಾಮದ ದಿಲೀಪ್ (34) ಮೃತರು, ಹುಲಿಕಲ್ಲು ಗ್ರಾಮದ ಮಂಜುನಾಥ ಗಾಯಾಳು.

ದಿಲೀಪ್ ಅವರು ತಮ್ಮ ಸ್ನೇಹಿತ ಮಂಜುನಾಥಅವರೊಂದಿಗೆ ತಾಲ್ಲೂಕಿನ ಬೆಳವಾಡಿ ಗ್ರಾಮದಲ್ಲಿ ನಡೆಯುತ್ತಿದ್ದ ಹಬ್ಬಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದರು. ಈ ವೇಳೆ ರಾಮನಾಥಪುರ ಕಡೆಯಿಂದ ಬಂದ ಮತ್ತೊಂದು ಬೈಕ್ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಇಬ್ಬರೂ ಬೈಕ್ ಸಮೇತ ರಸ್ತೆಗೆ ಬಿದ್ದಿದ್ದು, ಇಬ್ಬರಿಗೂ ತಲೆ ಹಾಗು ದೇಹದ ವಿವಿಧ ಭಾಗಗಳಿಗೆ ಗಂಭೀರ ಗಾಯ ಗಳಾಗಿವೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿ ಬಳಿಕ ಹೆಚ್ಚಿನ ಚಿಕಿತ್ಸೆಗೆ ಜಿಲ್ಲಾಸ್ಪತ್ರೆಗೆ ಕರೆದೊಯ್ಯುತ್ತಿದ್ದ ವೇಳೆ ದಿಲೀಪ್ ಮಾರ್ಗಮಧ್ಯೆಯೇ ಮೃತಪಟ್ಟಿದ್ದಾರೆ. ಮಂಜುನಾಥ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೊಣನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸಾಲಗಾಮೆಯಲ್ಲಿ ಸಹಕಾರ ಸಬಲೀಕರಣ ಅಭಿಯಾನ

• ಪ್ರಜೋದಯ ವರದಿ

**ಹಾಸನ:** ಸಹಕಾರ ಸಪ್ತಾಹ ಆಚರಣೆಯ ಅಂಗವಾಗಿ ಕೆಆರ್‌ಐಹೆಚ್‌ಸಿಬಿ ವತಿಯಿಂದ ತಾಲ್ಲೂಕಿನ ಸಾಲಗಾಮೆಯಲ್ಲಿ ಸಹಕಾರ ಸಬಲೀಕರಣ ಅಭಿಯಾನ ನಡೆಯಿತು.



ಕಾರ್ಯಕ್ರಮದಲ್ಲಿ ಭತ್ತದ ಬೆಳೆಯಲ್ಲಿ ಕೆಆರ್‌ಐಬಿಹೆಚ್‌ಸಿಬಿನ ಸಿವಾರಿಕಾ, ರೈಜೋಸುಪರ್ ಹಾಗು ದ್ರವ ಜೈವಿಕ ಗೊಬ್ಬರಗಳ ಪರಿಣಾಮ ಮತ್ತು ಉಪಯೋಗಗಳ ಕುರಿತು ರೈತರಿಗೆ ಮಾಹಿತಿ ನೀಡಲಾಯಿತು.

ಕೆಆರ್‌ಐಬಿಎಚ್‌ಸಿಬಿ ಅಧಿಕಾರಿ ಕೆ.ಬಿ.ಕಾರ್ತಿಕ್ ಅವರು ಸಂಸ್ಥೆಯ ಪರಿಚಯ, ವಿವಿಧ ಉತ್ಪನ್ನಗಳು ಹಾಗು ಅವುಗಳ ಉಪಯೋಗಗಳ ಬಗ್ಗೆ ವಿವರಿಸಿದರು. ಜೊತೆಗೆ ನಗರ ಕಾಂಪೋಸ್ಟ್, ಸಮುದ್ರ ಸಸ್ಯ, ಜೈವಿಕ ಗೊಬ್ಬರಗಳು, ಜಿಂಕ್ ಸಲ್ಫೇಟ್, ರೈಜೋಸುಪರ್ ಸೇರಿ ಸಾವಯವ ಕೃಷಿಗೆ ಪೂರಕವಾಗಿರುವ ಉತ್ಪನ್ನಗಳ ಮಹತ್ವ, ಅವುಗಳ ಬಳಕೆ ವಿಧಾನ, ಪ್ರಮಾಣ ಹಾಗೂ ಕೃಷಿ ಬೆಳೆಗಳಲ್ಲಿ ಅವುಗಳ ಪಾತ್ರ ಕುರಿತು ರೈತರಿಗೆ ಮಾಹಿತಿ ನೀಡಿ ಅವರ ಸಂದೇಹಗಳಿಗೆ ಉತ್ತರಿಸಿದರು.

ಸಾಲಗಾಮೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಜಶೇಖರ್ ಅವರು, ಕೆಆರ್‌ಐಬಿಎಚ್‌ಸಿಬಿ ಉತ್ಪನ್ನಗಳು ಸಂಘದಲ್ಲಿ ಲಭ್ಯವಿರುವ ಕುರಿತು ರೈತರಿಗೆ ಮಾಹಿತಿ ನೀಡಿದರು. ಸ್ಥಳೀಯ ಕ್ಷೇತ್ರಾಧಿಕಾರಿ ಕೆ.ಬಿ.ಕಾರ್ತಿಕ್ ಅವರೊಂದಿಗೆ ರೈತರು ಗುಣಮಟ್ಟದ ಕೃಷಿ ಉತ್ಪಾದನೆಗಾಗಿ ಕೆಆರ್‌ಐಬಿಎಚ್‌ಸಿಬಿ ಉತ್ಪನ್ನಗಳನ್ನು ಅಳವಡಿಸಿ ಕೊಳ್ಳುವಂತೆ ಮನವಿ ಮಾಡಿದರು.

ಅಡಿಕೆ ಮತ್ತು ಶುಂಠಿ ಬೆಳೆಯು ಹೆಚ್ಚಾಗಿ ಬೆಳೆಯುವ ಪ್ರದೇಶವಾಗಿರುವುದರಿಂದ ಈ ಬೆಳೆಗೆ ಸೂಕ್ತವಾದ ಉತ್ಪನ್ನಗಳ ಬಳಕೆಯ ಕುರಿತು ವಿಶೇಷವಾಗಿ ಅರಿವು ಮೂಡಿಸಲಾಯಿತು.

ಸಾಲಗಾಮೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಪುಟ್ಟೇಗೌಡ, ಜಿಲ್ಲಾ ಸಹಕಾರ ಸಂಘಗಳ ನಿಬಂಧಕ ಕೆ.ಕೆ.ಕಿರಣ್‌ಕುಮಾರ್, ಸಹಕಾರ ಸಂಘಗಳ ಸಹಾಯಕ ನಿಬಂಧಕ ಡಿ.ಕೆ.ಬಾಲಚಂದ್ರ, ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಸ್.ಎನ್.ಪ್ರಕಾಶ್, ಜಿಲ್ಲಾ ಸಹಕಾರ ಒಕ್ಕೂಟದ ವ್ಯವಸ್ಥಾಪಕಿ ಭಾರತಿ, ಜಿಲ್ಲಾ ಸಹಕಾರ ಒಕ್ಕೂಟದ ಕ್ಷೇತ್ರಾಧಿಕಾರಿ ಕೇಶವ್, ಡಿಸಿಸಿ ಬ್ಯಾಂಕ್ ಕ್ಷೇತ್ರಾಧಿಕಾರಿ ಮಮತಾ ಇತರರು ಹಾಜರಿದ್ದರು.

### ವೈಜ್ಞಾನಿಕ ಚರಂಡಿ ನಿರ್ಮಿಸಲು ಗ್ರಾಮಸ್ಥರ ಆಗ್ರಹ

# ಸಂತೆಮರೂರಿನಲ್ಲಿ ಮೂಲಸೌಕರ್ಯ ಕೊರತೆ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ಸಂತೆಮರೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ದುಮ್ಮಿ ಗ್ರಾಮದಲ್ಲಿ ಅಗತ್ಯ ಮೂಲಸೌಕರ್ಯಗಳ ಕೊರತೆ ಎದ್ದು ಕಾಣುತ್ತಿದ್ದು, ಜನ ವಸತಿ ಪ್ರದೇಶದಲ್ಲಿ ಸೂಕ್ತ ಚರಂಡಿ ವ್ಯವಸ್ಥೆ ಕಲ್ಪಿಸದ ಪರಿಣಾಮ ರಸ್ತೆಯ ಮೇಲೆ ಚರಂಡಿ ನೀರು ಹರಿಯುತ್ತಿದ್ದು, ರಸ್ತೆ ಪಕ್ಕದಲ್ಲಿನ ನಿವಾಸಿಗಳು, ಸಂಚಾರ ಮಾಡುವವರಿಗೆ ತೊಂದರೆ ಉಂಟಾಗಿದೆ.



ದುಮ್ಮಿ ಗ್ರಾಮದ ಕೇಂದ್ರ ಸ್ಥಾನದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಂಗನವಾಡಿ ಕೇಂದ್ರ, ಹಾಲಿ ಡೇರಿ, ದೇವಸ್ಥಾನ ಇವೆ. ಈ ಸಲುವಾಗಿ ಶಾಲಾ ಮಕ್ಕಳು, ಸಾರ್ವಜನಿಕರು, ಹಾಲು ಹಾಕಲು ಬರುವ ರೈತರು ಹಾಗೂ ದುಮ್ಮಿ ಗ್ರಾಮ ಸೇರಿ ಸುತ್ತಲ ಹಲವು ಗ್ರಾಮಗಳ ಜನರು ಇದೇ ಮಾರ್ಗದಲ್ಲಿ ಸಂಚಾರ ಮಾಡುತ್ತಾರೆ. ಗ್ರಾಮದ ಎರಡು ಬದಿಯಲ್ಲಿ ಜನವಸತಿ ಪ್ರದೇಶವಿದೆ. ಸೂಕ್ತವಾದ ಚರಂಡಿ ನಿರ್ಮಿಸಿಲ್ಲದ ಹಿನ್ನಲೆ ಈ ಭಾಗದಲ್ಲಿ ಉತ್ಪತ್ತಿಯಾಗುವ ಜನವಸತಿ ನೀರು ಮುಂದೆ ಸಾಗುವ ನಿಟ್ಟಿನಲ್ಲಿ ಚರಂಡಿ ನಿರ್ಮಿಸಿಲ್ಲದಿರುವುದು ದುರದೃಷ್ಟಕರ ಸಂಗತಿಯಾಗಿದೆ.

ಗ್ರಾಮ ಸ್ವಲ್ಪಮಟ್ಟಿನ ಎತ್ತರ ಪ್ರದೇಶದಲ್ಲಿರುವ ಕಾರಣ ತಗ್ಗುಪ್ರದೇಶದಲ್ಲಿ ಸಾರ್ವಜನಿಕ ರಸ್ತೆ ಹಾದುಹೋಗಿದೆ. ಈ ಹಿನ್ನಲೆ ಜನವಸತಿ ಪ್ರದೇಶದ ನೀರು, ಮಳೆ ನೀರು ನೇರವಾಗಿ ಚರಂಡಿ ಇಲ್ಲದ ಪರಿಣಾಮ ಹಳ್ಳದಿಂದ ಕೂಡಿರುವ ರಸ್ತೆಯ ಮೇಲೆ ಅರ್ಧ ಕಿ.ಮೀ. ದೂರದತನಕ ಹರಿಯುತ್ತಿದೆ. ಅದರಿಂದ ರಸ್ತೆಯಲ್ಲಿ ಸಂಚಾರ ಮಾಡುವ ವಾಹನ ಸವಾರರು, ಶಾಲೆಗೆ ಬರುವ ವಿದ್ಯಾರ್ಥಿಗಳು, ರೈತರು ಹಾಗೂ ಸಾರ್ವಜನಿಕರಿಗೆ ಮಲೀನ ನೀರು ಮೈಮೇಲೆ ಹಾರುವ ಭಯದಲ್ಲಿ ಸಾಗುವಂತಹ ಸಂಕಷ್ಟ ಎದುರಾಗಿದೆ.

**ಚರಂಡಿಯಲ್ಲಿ ತ್ಯಾಜ್ಯ**

ಈ ಹಿಂದೆ ಗ್ರಾಮದ ಒಂದು ಭಾಗದಲ್ಲಿ ಸೈಜ್‌ಗಳಿಂದ ಅವೈಜ್ಞಾನಿಕವಾಗಿ 50ಅಡಿ ಉದ್ದದಲ್ಲಿ ಚರಂಡಿ ನಿರ್ಮಿಸಲಾಗಿದೆ. ಇದು ಅನಗತ್ಯ ತ್ಯಾಜ್ಯಗಳಿಂದ ಮುಚ್ಚಿಹೋಗಿದ್ದು, ಈ ನೀರು ಕೂಡ ರಸ್ತೆಯ ಮೇಲೆಯೇ ಹರಿಯುತ್ತಿದೆ. ಕಟ್ಟಿಕೊಂಡಿರುವ ಚರಂಡಿ ಸಮೀಪವೇ ಸರ್ಕಾರಿ ಶಾಲೆ, ಅಂಗನವಾಡಿ ಕೇಂದ್ರಗಳು ಇದ್ದು, ಪುಟ್ಟಮಕ್ಕಳು ಚರಂಡಿಯಲ್ಲಿನ ತ್ಯಾಜ್ಯವನ್ನು ಕಂಡು ಭಯದಿಂದ ಮಲೀನ ನೀರು ಹರಿಯುವ ರಸ್ತೆಯನ್ನು ಲೆಕ್ಕಿಸದೆ ತುಳಿದುಕೊಂಡು ಓಡಾಡುತ್ತಾ ಅನಾರೋಗ್ಯವನ್ನು ತಂದುಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಮಲೀನ ನೀರಿನಲ್ಲಿ ಸೊಳ್ಳೆಗಳ ಉತ್ಪತ್ತಿ ಕಂಡುಬರುತಿದ್ದು, ಸಾಂಕ್ರಾಮಿಕ ರೋಗ ಹರಡುವ ಸಾಧ್ಯತೆ ಹೆಚ್ಚಿದೆ.

**ಚರಂಡಿ, ರಸ್ತೆ ಮರೀಚಿಕೆ**

ದುಮ್ಮಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಬಹಳ ದಿನಗಳ ಹಿಂದೆಯೇ ನಿರ್ಮಿಸಲಾಗಿದೆ. ಅದು ಚರಂಡಿ ನೀರು ಹರಿಯುತ್ತಿರುವ ಹಿನ್ನಲೆ ಗುಂಡಿಯಿಂದ ಕೂಡಿದೆ. ಗುಂಡಿಯಲ್ಲಿ ನಿಂತ ನೀರು ವಾಹನಗಳ ಸಂಚಾರದಿಂದ ಅಕ್ಕಪಕ್ಕದ ಜನವಸತಿ ಮನೆಗಳು ಹಾಗು ಜನರ ಮೇಲೆ ಹಾರುತ್ತಾ ಘರ್ಷಣೆಗೆ ಕಾರಣವಾಗುತ್ತಿದೆಂದು ಉದ್ಯೋಗಖಾತ್ರಿ ಯೋಜನೆಯಡಿ ಗ್ರಾಮದ ಪರಿಮಿತಿಯಲ್ಲಿ ಲಿಮಿಟ್ ಇಲ್ಲದೆ ಸಿಮೆಂಟ್ ರಸ್ತೆ, ಚರಂಡಿಯನ್ನು ನಿರ್ಮಿಸಿಕೊಡಲಾಗುತ್ತದೆ. ದುಮ್ಮಿ ಗ್ರಾಮದಲ್ಲಿ ಉದ್ಯೋಗಖಾತ್ರಿ ಯೋಜನೆಯಡಿ ಇಂತಹ ಕಾಮಗಾರಿಗಳು ನಡೆದಿಲ್ಲ. ಈ ಭಾಗದಿಂದ ಚುನಾಯಿತರಾಗಿರುವ ಜನ ಪ್ರತಿನಿಧಿಗಳು ಯೋಜನೆ ಲಾಭ ಪಡೆದುಕೊಳ್ಳಲು ಹಿಂದೆ ಬಿದ್ದಿರುವ ಪರಿಣಾಮ ಜನವಸತಿ ಪ್ರದೇಶದ ನೀರು ಸಾರ್ವಜನಿಕ ರಸ್ತೆಯ ಮೇಲೆ ಹರಿಯುವಂತಾಗಿದೆ ಎಂದು ಹೇಳಬಹುದು.

**ಮೂಲಭೂತ ಸೌಕರ್ಯವಿಲ್ಲ**

ದುಮ್ಮಿ ಗ್ರಾಮ, ದುಮ್ಮಿಕೊಪ್ಪಲು, ಬಾರೆ ಕೊಪ್ಪಲು, ಕಾಲೋನಿ ಹಾಗು ಕೃಷಿ ಜಮೀನು ಬಳಿ ನೆಲಸಿರುವವರು ಸೇರಿ ಒಂದೂವರೆ ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಇದೆ. ಮೂಲ ದುಮ್ಮಿ ಗ್ರಾಮ ಹೊರತುಪಡಸಿದರೇ ಉಳಿದೆಲ್ಲ ಗ್ರಾಮಗಳಿಗೆ ನೇರ ಸಂಪರ್ಕವನ್ನು ಇದುವರೆಗೂ ಕಲ್ಪಿಸಿಲ್ಲ. ಇಲ್ಲಿನ ಜನರು ಕೃಷಿ ಜಮೀನುಗಳಲ್ಲಿ ಮಣ್ಣಿನ ರಸ್ತೆ ಮಾಡಿಕೊಂಡೆ ಸಂಚಾರ ಮಾಡುತ್ತಿದ್ದಾರೆ. ಕೆಲವು ಮನೆಗಳಿಗೆ ಇಂದಿಗೂ ನಿರಂತರಜ್ಯೋತಿ ವಿದ್ಯುತ್ ಸಂಪರ್ಕವಿಲ್ಲ, ಪಂಪ್ ಸೆಟ್‌ಗಳ ಸಂಪರ್ಕದಲ್ಲಿ ಮನೆಯ ದೀಪಗಳನ್ನು ಬೆಳಗಿಸಿಕೊಳ್ಳುತ್ತಿದ್ದಾರೆ. ಈ ಭಾಗದಲ್ಲಿ ನಿತ್ಯವೂ ವಿದ್ಯುತ್ ಸಂಪರ್ಕವಿರುವುದಿಲ್ಲ. ಕುಡಿಯುವ ನೀರು ಸಮಸ್ಯೆ ಕೂಡ ಕೆಲವು ಕಡೆ ಕಂಡುಬರುತ್ತಿದೆ.

> **ದುಮ್ಮಿ ಗ್ರಾಮದಲ್ಲಿನ ಜನವಸತಿ ನೀರು ರಸ್ತೆಯ ಮೇಲೆ ಹರಿಯಲು ಪ್ರಮುಖ ಕಾರಣ ವೈಜ್ಞಾನಿಕವಾಗಿ ಚರಂಡಿ ನಿರ್ಮಿಸದೇ ಇರುವುದು. ಈ ಭಾಗದಲ್ಲಿ ರೈತರು ಹೆಚ್ಚಿನದಾಗ ಹೈನುಗಾರಿಕೆ ಕೈಗೊಂಡಿದ್ದಾರೆ. ನಿತ್ಯವೂ ಜಾನುವಾರುಗಳ ಸ್ವಚ್ಚತೆ, ಕೊಟ್ಟಿಗೆ ಸ್ವಚ್ಚತೆ ಮಾಡುವ ನೀರು ಚರಂಡಿಯಲ್ಲಿ ಹರಿಯುತ್ತದೆ. ಇದು ಸರಾಗವಾಗಿ ಹರಿಯುವಂತೆ ಚರಂಡಿ ನಿರ್ಮಿಸುವ ಅವಶ್ಯಕತೆ ಇದೆ. ಮಲೀನ ನೀರು ನಿಂತಿರುವ ಜಾಗದಲ್ಲಿ ಬಸ್ ನಿಲುಗಡೆ, ದೇವಸ್ಥಾನ, ಶಾಲೆ, ಅಂಗನವಾಡಿ, ಹಾಲಿನ ಡೇರಿ ಇರುವ ಕಾರಣ ಚರಂಡಿ ನೀರು ನಿಲ್ಲದಂತೆ ಗಮನಹರಿಸಬೇಕಿದೆ.**
> **-ಮಧು ಬಹುಜನ್, ಸ್ಥಳೀಯ ಗ್ರಾಮಸ್ಥ**



> **ದುಮ್ಮಿ ಗ್ರಾಮದಲ್ಲಿ ವಾರಕ್ಕೆ ಒಮ್ಮೆ ಚರಂಡಿ ಸ್ವಚ್ಚತೆಯನ್ನು ಕೈಗೊಳ್ಳಲಾಗುತ್ತಿದೆ. ಚರಂಡಿಯಲ್ಲಿ ಹೆಚ್ಚಿನದಾಗಿ ಜಾನುವಾರುಗಳ ಬಳಕೆ ಹುಲ್ಲು ಕಂಡುಬರುತ್ತಿರುವ ಕಾರಣ ಚರಂಡಿ ಕಟ್ಟಿಕೊಳ್ಳಲು ಕಾರಣವಾಗುತ್ತಿದೆ. ಈ ಬಾರಿ ಗ್ರಾಮದಲ್ಲಿ ಸಭೆ ನಡೆಸಿ ಚರಂಡಿ, ಕಾಂಕ್ರಿಟ್ ರಸ್ತೆ ನಿರ್ಮಿಸುವ ಕುರಿತು ಚಿಂತನೆ ನಡೆದಿದೆ. ಕೂಡಲೇ ಚರಂಡಿ ಸ್ವಚ್ಚತೆಯನ್ನು ಕೈಗೊಳ್ಳಲಾಗುವುದು.**
> **-ರಾಜೇಗೌಡ, ಪಿಡಿಒ, ಸಂತೆಮರೂರು**

## ಕೇಂದ್ರ ಶಿಕ್ಷಣ ಸಚಿವ ರಾಜೀನಾಮೆಗೆ ಆಗ್ರಹ

• ಪ್ರಜೋದಯ ವರದಿ

**ಹಾಸನ:** ನೀಟ್ ಪರೀಕ್ಷೆ ಪ್ರಶ್ನೆಪತ್ರಿಕೆ ಸೋರಿಕೆಗೆ ಕೇಂದ್ರ ಸರ್ಕಾರವೇ ಹೊಣೆ. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕೆಂದು ಜಿಲ್ಲಾ ವಕ್ತಾರ ಮಂಜುನಾಥ್ ಶರ್ಮಾ ಅವರು ಆಗ್ರಹಿಸಿದರು.



ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರೀಕ್ಷೆ ಮುಂದೂಡಿಕೆ ಮತ್ತು ಮರು ಪರೀಕ್ಷೆಯಿಂದ ವಿದ್ಯಾರ್ಥಿಗಳು ತೀವ್ರ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದು, ಹಲವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಬಗ್ಗೆ ಕೇಂದ್ರ ಸರ್ಕಾರದಿಂದ ಸೂಕ್ತ ಸ್ಪಂದನೆ, ಸಾಂತ್ವನ ಅಥವಾ ಪರಿಹಾರ ದೊರೆತಿಲ್ಲ ಎಂದು ಟೀಕಿಸಿದರು.

ಪ್ರಶ್ನೆಪತ್ರಿಕೆ ಸೋರಿಕೆ ತಡೆಗಟ್ಟುವ ಉದ್ದೇಶದಿಂದ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಸಾರ್ವಜನಿಕ ಪರೀಕ್ಷೆಗಳ (ಅಕ್ರಮ ತಡೆ) ಕಾಯ್ದೆ ಇದ್ದರೂ, ಪರೀಕ್ಷಾ ಅಕ್ರಮ ತಡೆಯಲು ಸಾಧ್ಯವಾಗಿಲ್ಲ. ಅದರಿಂದ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಕಾರ್ಯವೈಖರಿ ಬಗ್ಗೆ ಗಂಭೀರ ಅನುಮಾನ ಮೂಡಿವೆ. ಈ ಹಿನ್ನಲೆ ನೀಟ್ ಪರೀಕ್ಷಾ ಅಕ್ರಮ ಪ್ರಕರಣದ ಕುರಿತು ಸಮಗ್ರ ಹಾಗೂ ಪಾರದರ್ಶಕ ತನಿಖೆ ನಡೆಸಬೇಕು. ಕೇಂದ್ರ ಶಿಕ್ಷಣ ಸಚಿವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದರು.

ವೈದ್ಯಕೀಯ ಶಿಕ್ಷಣ ಪ್ರವೇಶಕ್ಕಾಗಿ ದೇಶಾದ್ಯಂತ ನಡೆದ ನೀಟ್ ಪರೀಕ್ಷೆಯಲ್ಲಿ 22.7 ಲಕ್ಷ ವಿದ್ಯಾರ್ಥಿಗಳು ಭಾಗವಹಿಸಿದ್ದರು. ನಂತರ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿರುವುದು ಖಾತ್ರಿಯಾಯಿತು. ಈ ಸಂಬಂಧ ವಿವಿಧ ರಾಜ್ಯಗಳಲ್ಲಿ ತನಿಖೆ ನಡೆಯುತ್ತಿದ್ದು, ಕೆಲ ಆರೋಪಿಗಳನ್ನು ಬಂಧಿಸಲಾಗಿದೆ. ಪ್ರಶ್ನೆ ಪತ್ರಿಕೆ ಬಯಲು ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿದರು.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ದುರುಪಯೋಗಪಡಿಸಿಕೊಂಡು ಅರ್ಹ ಮತದಾರರನ್ನು ಪಟ್ಟಿಯಿಂದ ಕೈಬಿಡುವ ಪ್ರಯತ್ನ ನಡೆಯುತ್ತಿದೆ. ಮುಖ್ಯ ಚುನಾವಣಾ ಆಯುಕ್ತರ ನೇಮಕಾತಿ ಪ್ರಕ್ರಿಯೆ ಸಂವಿಧಾನಾತ್ಮಕ ವ್ಯವಸ್ಥೆಯಿಂದ ವಿಚಲನವಾಗಿದೆ, ಚುನಾವಣಾ ಆಯೋಗದ ಸ್ವಾಯತ್ತತೆಗೆ ಧಕ್ಕೆಯಾಗುವಂತಹ ಕ್ರಮಗಳು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ ಎಂದರು.

ಬೇರೆ ರಾಜ್ಯಗಳಲ್ಲಿ ಆದ ಪರಿಸ್ಥಿತಿ ಕರ್ನಾಟಕದಲ್ಲಿ ಮರುಕಳುಹಿಸಬಾರದೆಂದು ನಮ್ಮ ಪಕ್ಷ ಎಚ್ಚರಿಕೆ ವಹಿಸಿದೆ. ಕೇವಲ 30 ದಿನಗಳ ಅವಧಿಯಲ್ಲಿ ಇಂತಹ ದೊಡ್ಡ ಪ್ರಮಾಣದ ಪರಿಶೀಲನೆ ನಡೆಸುವುದು ಅನುಮಾನಗಳಿಗೆ ಕಾರಣವಾಗಿದೆ. ಮತದಾರರ ಪಟ್ಟಿ ಪರಿಷ್ಕರಣೆ ಸಂಪೂರ್ಣ ಪಾರದರ್ಶಕವಾಗಿ ನಡೆಯಬೇಕು. ಅರ್ಹ ಮತದಾರರ ಹೆಸರನ್ನು ಪಟ್ಟಿಯಿಂದ ಕೈಬಿಡದಂತೆ ಚುನಾವಣಾ ಆಯೋಗ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಕಾಂಗ್ರೆಸ್ ಮುಖಂಡ ಕೊಲ್ಲಹಳ್ಳಿ ಸಲೀಂ ಇದ್ದರು.

## 2.23 ಲಕ್ಷ ರೂ. ಮೌಲ್ಯದ ಗಾಂಜಾ ನಾಶ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ 6 ಮಾದಕ ದ್ರವ್ಯ ಪ್ರಕರಣ ಗಳಲ್ಲಿ ವಶಪಡಿಸಿಕೊಂಡಿದ್ದ 2.23 ಲಕ್ಷ ಮೌಲ್ಯದ 4 ಕೆಜಿ 85 ಗ್ರಾಂ ಗಾಂಜಾವನ್ನು ಪೊಲೀಸರು ವೈಜ್ಞಾನಿಕ ವಿಧಾನದಲ್ಲಿ ನಾಶಪಡಿಸಿದರು.

ಜಿಲ್ಲೆಯಾದ್ಯಂತ ಅಕ್ರಮ ಮಾದಕ ದ್ರವ್ಯ ಸೇವನೆ ಹಾಗು ಮಾರಾಟ ತಡೆ ಗಟ್ಟುವ ಕಾರ್ಯಾಚರಣೆಯ ಭಾಗವಾಗಿ ದಾಖಲಾದ ಆರು ಪ್ರಕರಣಗಳಲ್ಲಿ ಗಾಂಜಾವನ್ನು ಪೊಲೀಸರು ವಶ ಪಡಿಸಿ ಕೊಂಡಿದ್ದರು. ಪೊಲೀಸ್ ಇಲಾಖೆ ಕ್ರಮದಂತೆ ಕೆಐಎಡಿಬಿ ಕೈಗಾರಿಕಾ ಪ್ರದೇಶದಲ್ಲಿರುವ ಬಿ.ಎಂ. ಡಬ್ಲ್ಯೂ ಮ್ಯಾನೇಜ್‌ಮೆಂಟ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್‌ನ ವೈಜ್ಞಾನಿಕ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ನಿಯಮಾ ನುಸಾರ ನಾಶಪಡಿಸಲಾಯಿತು.

ಮಾದಕ ದ್ರವ್ಯಗಳ ಅಕ್ರಮ ಸಾಗಣೆ ಹಾಗು ಮಾರಾಟದ ವಿರುದ್ಧ ಜಿಲ್ಲೆಯಾದ್ಯಂತ ಕಠಿಣ ಕ್ರಮ ಮುಂದುವರಿಯಲಿದ್ದು, ಇಂತಹ ಚಟುವಟಿಕೆಗಳಲ್ಲಿ ತೊಡಗುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತ ಅವರು ತಿಳಿಸಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019